ಬಳ್ಳಿಗೇರಿ ಲಾವಣಿ ಸಂಪ್ರದಾಯ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧನಾ ವಿದ್ಯಾರ್ಥಿ :

ಶ್ರೀಶೈಲ. ಪ. ಸನದಿ

ಮಾರ್ಗದರ್ಶಕರು :

ಡಾ. ವ್ಹಿ. ಎಸ್. ಮಾಳಿ

ನಿರ್ದೇಶಕರು,

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ

ಹಾರೂಗೇರಿ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ ಹಾರೂಗೇರಿ,

ಜಿ।। ಬೆಳಗಾವಿ

೨೦೦೬

ಬಳ್ಳಿಗೇರಿ ಲಾವಣಿ ಸಂಪ್ರದಾಯ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧನಾ ವಿದ್ಯಾರ್ಥಿ

ಶ್ರೀಶೈಲ. ಪ. ಸನದಿ

ಮಾರ್ಗದರ್ಶಕರು.

ಡಾ. ವ್ಹಿ. ಎಸ್. ಮಾಳಿ

ನಿರ್ದೇಶಕರು,
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,

ಹಾರೂಗೇರಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ, ಹಾರೂಗೇರಿ,
ಜಿ॥ ಬೆಳಗಾವಿ

೨೦೦೯

ಪ್ರಮಾಣ ಪತ್ರ

'ಬಳ್ಳಿಗೇರಿ ಲಾವಣಿ ಸಂಪ್ರದಾಯ' - ಒಂದು ಅಧ್ಯಯನ ಎಂಬ ಶೀರ್ಷಿಕೆಯ ನಿಬಂಧವನ್ನು ಡಾ. ವ್ಹಿ. ಎಸ್. ಮಾಳಿ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗಕ್ಕೆ ಎಂ. ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲ ಮತ್ತು ಈ ಮೊದಲು ಇದನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೯.೦೯.೨೦೦೯

ಶ್ರೀಶೈಲ ಪ. ಸನದಿ
ಸಂಶೋಧನಾ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ ಸಂಶೋಧನಾ
ಕೇಂದ್ರ, ಹಾರೂಗೇರಿ.

ದೃಢೀಕರಣ ಪತ್ರ

ಶ್ರೀಶೈಲ ಪ. ಸನದಿ ಇವರು 'ಬಳ್ಳಿಗೇರಿ ಲಾವಣಿ ಸಂಪ್ರದಾಯ' - ಒಂದು ಅಧ್ಯಯನ ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗಕ್ಕೆ ಎಂ. ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲ. ಮತ್ತು ಇದು ಈ ಮೊದಲು ಎಲ್ಲಿಯೂ ಇಡಿಯಾಗಿ ಇಲ್ಲವೆ ಬಿಡಿಯಾಗಿ ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೪.೦೯.೦೭

ಡಾ. ವ್ಹಿ. ಎಸ್. ಮಾಳಿ
ಮಾರ್ಗದರ್ಶಕರು
ಶ್ರೀ ಬಿ. ಆರ್. ದರೂರ ಸಂಶೋಧನಾ
ಕೇಂದ್ರ, ಹಾರೂಗೇರಿ.

ಪರಿವಿಡಿ

* * * * *

ಅಧ್ಯಾಯ - ೧

ಅಧ್ಯಾಯ -೧

ಅಧ್ಯಯನದ ಹಿನ್ನೆಲೆ, ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

ಸಾಹಿತ್ಯ ಒಂದು ಜನಾಂಗದ ಗತಿಬಿಂಬ. ಒಂದು ಜನಾಂಗದ ರೀತಿ, ನೀತಿ, ನೀತಿ-ನಿಯಮ, ರೂಢಿ ಸಂಪ್ರದಾಯಗಳು ಇದರಲ್ಲಿ ಅಭಿವ್ಯಕ್ತಗೊಂಡಿರುತ್ತವೆ. ಜನಪದ ಸಾಹಿತ್ಯ ಜನರ ಜೀವನಾನುಭಗಳ ಮೊತ್ತ. ಇದು ಅವರ ರಕ್ತ ಬೆವರಿನ ಮಿಶ್ರಣ. ಕಂಡುಂಡ ನೋವು ನಲಿವುಗಳನ್ನು ಹೃದಯ ಮುಟ್ಟುವಂತೆ ಚಿತ್ರಿಸುತ್ತದೆ. ಇಡೀ ಜನಾಂಗದ ಸಂಸ್ಕೃತಿಯನ್ನು ಅವರ ಮನಸ್ಸು ಹಾಗೂ ಆಚರಣೆಯಲ್ಲಿ ಪ್ರತಿಬಿಂಬಿಸಿದ ' ಜಾನಪದ ಕವಿಗಳು' 'ಜನಾಂಗದ ಸಾಮಾನ್ಯ ಜನತೆಯ ಪ್ರತಿನಿಧಿಗಳಾಗುತ್ತಾರೆ.'[೧]

ದೈನಂದಿನ ಜೀವನ ನಿರ್ವಹಣೆಯಲ್ಲಿ ತೊಡಗಿದ ಹಳ್ಳಿಗರ ಅನುಭವದಿಂದ ಸಹಜವಾದ ಸಾಹಿತ್ಯಮೂಡಿತು. ಜೀವನದ ಎಲ್ಲ ಅನುಭವಗಳನ್ನು ಅವರು ಅಭಿವ್ಯಕ್ತಗೊಳಿಸಿದರು. ಅವು ಒಬ್ಬ ವ್ಯಕ್ತಿಯ ಕೃತಿಯಾಗದೇ, ಸಮಷ್ಠಿ ಮನಸ್ಸಿನ ಕೃತಿಗಳಾಗಿ ಪರಿಣಮಿಸಿದವು. ಇದನ್ನೇ 'ಜಾನಪದ ಸಾಹಿತ್ಯ' ಎಂದು ಕರೆಯುತ್ತೇವೆ.

ಅಕ್ಷರ ಜ್ಞಾನದಿಂದ ಹೊರತಾದ ಕೃಷಿ ವರ್ಗದ ಜನರ ತಿಳುವಳಿಕೆಗಳು ಸಂಸ್ಕೃತಿಯ ಒಂದು ಭಾಗ ಅವು ಗ್ರಂಥಸ್ಥ ಇಲ್ಲದಿರುವದರಿಂದ ಸಾಂಸ್ಕೃತಿಕ ಅಧ್ಯಯನದಿಂದ ದೂರವಾಗಿವೆ. ಹಳೆಯ ಲಾವಣಿಗಳು ಮೌಖಿಕ ಕಾವ್ಯಕ್ಕೆ ಪ್ರಮುಖವಾದ ಉದಾಹರಣೆ. ಇಂತಹ ಕಾವ್ಯಗಳ ಸಂಗ್ರಹ ಹಾಗೂ ವಿಸ್ತೃತವಾದ ಅಧ್ಯಯನ ಸಂಸ್ಕೃತಿಯನ್ನು ಗಟ್ಟಿಗೊಳಿಸುತ್ತದೆ. ನಮ್ಮ ಸಾಹಿತ್ಯ ಕೃತಿಗಳನ್ನು ಅವಲೋಕಿಸಿದಾಗ ಮೊದಲಿನಿಂದಲೂ ಬಳಕೆಯ ಭಾಷೆಗೆ ಅತೀ ಹೆಚ್ಚು ಪ್ರಾಶಸ್ತ್ಯ ನೀಡಿಲ್ಲದಿರುವುದು ತಿಳಿದು ಬರುತ್ತದೆ. ಇದನ್ನು ಅನೇಕ 'ವಿದ್ವಾಂಸರು'[೨] ಈಗಾಗಲೇ ಸ್ಪಷ್ಟವಾಗಿ ಗುರುತಿಸಿದ್ದಾರೆ.

ಆಡುಮಾತಿನ ಸೊಗಡು, ಪ್ರಾದೇಶಿಕ ವಿಭಿನ್ನತೆ ಸಂಮ್ಮೋಹನ ಶೈಲಿ ಜನಪದ ಸಾಹಿತ್ಯದ ಅಗಾಧತೆಯನ್ನು ಸಾರುತ್ತದೆ. ವಸ್ತು , ತಂತ್ರ, ಶೈಲಿ ದೃಷ್ಟಿಯಿಂದ ವೈವಿಧ್ಯಮಯವಾದುದು. ಉತ್ತರ ಕರ್ನಾಟಕ ಜನಪದ ಸಾಹಿತ್ಯದ ಸಂಪದ್ಭರಿತ ಕ್ಷೇತ್ರ. ಇಲ್ಲಿಯ ಜನಪದ ಸಂಸ್ಕೃತಿ ಗೀತೆ, ಕಥೆ,

ಗಾದೆಗಳ ಮುಖಾಂತರ ಮುಖ್ಯ ವಾಹಿನಿಯಾಗಿ ಹರಿದು ಗೆಜ್ಜೆನಾದ ಮೂಡಿಸಿದೆ. ಇವು ವ್ಯಕ್ತಿ ಪ್ರದೇಶ ಸಮಾಜದ ಪ್ರತಿನಿಧಿ ಈ ಕೃತಿಗಳು. ಈ ಜನಪದ ಗೀತ ಸಮೂಹವು ಲಾವಣಿ, ಭಜನೆ, ಡೊಳ್ಳು, ಹಂತಿ, ಸೋಬಾನ ಪದ ಮುಂತಾದವುಗಳಿಂದ ತುಂಬಿದೆ. ಇವುಗಳಲ್ಲಿ ಲಾವಣಿ ಕಳಸಪ್ರಾಯವಾದುದು.

ಇದು ತನ್ನ ವಿಶಿಷ್ಟ ಗತ್ತು ಗಮ್ಮತ್ತುಗಳಿಂದ ವೇದಿಕೆಯ ಮೇಲೆ ರಾಜಾರೋಷವಾಗಿ ಹರಿದು ಬರುವ ರಸ ಗಂಗೆ. ಪ್ರೇಕ್ಷಕ ಹಾಗೂ ಗಾಯಕ ವರ್ಗವನ್ನು ಹುರಿದುಂಬಿಸುತ್ತದೆ. ಲಾವಣಿ ಇಷ್ಟೆಲ್ಲ ಪ್ರಖ್ಯಾತಿ ಪಡೆದಿದ್ದರೂ ಹಿಂದಿನ ತನ್ನ ಘನತೆ ಗೌರವಗಳನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಇದನ್ನು 'ಗಾಯಕಿ' ಸಂಪ್ರದಾಯಕ್ಕೆ ಸೇರಿದ 'ಕಥನಗೀತ'ದ [೨] ಪ್ರಕಾರ ಎಂದು ಹೇಳಲಾಗುತ್ತದೆ. ಇದಕ್ಕೆ ಲಾವಣಿ, ಗೀಗಿ, ಡಪ್ಪಿನ ಹಾಡು, ಸವಾಲ್-ಜವಾಬ್, ಶಾವಿರಿಕೆ, ಹರದೇಶಿ-ನಾಗೇಶಿ, ಕಲ್ಗಿ ತುರಾಯಿ ಹೀಗೆ ನಾನಾ ಹೆಸರುಗಳುಂಟು. ಇವುಗಳ ಕುರಿತು ಆಳವಾದ ಅಧ್ಯಯನ ನಡೆದಿದ್ದರೂ ಸಾಲದೆನಿಸುತ್ತದೆ .

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜನಪದ ಪದ್ಯ ಪ್ರಕಾರಗಳು ಉಪಲಬ್ಧವಿದ್ದರೂ ಲಾವಣಿಯ ವಿಶಿಷ್ಟ ನಮೂನೆ ದೊರೆಯುವದಿಲ್ಲ. ನೆರೆಯ ಮಹಾರಾಷ್ಟ್ರದ ಮರಾಠಿ ಸಾಹಿತ್ಯದಲ್ಲಿ ಇದಕ್ಕೆ ಇನ್ನೂರು ವರ್ಷಗಳ ಇತಿಹಾಸವಿದೆ. ಅದರ ಪ್ರಚಾರ, ಪ್ರಭಾವದ ಆಧಾರದಿಂದ ಇದು 'ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕಾಲಿಟ್ಟು ಕನ್ನಡ ಸಾಹಿತ್ಯದಲ್ಲಿ ಪ್ರಭಾವ ಶಾಲಿಯಾದಂತೆ ತೋರುತ್ತದೆ'.[೩] ಎನ್ನುತ್ತಾರೆ. ಆದರೆ ಇದು ಪೂರ್ಣ ಸತ್ಯವಲ್ಲ.

ಕನ್ನಡ ಜನಪದ ಗೀತೆ, ಲಾವಣಿ ಸಂಗ್ರಹಣೆ ಹಾಗೂ ವಿಶ್ಲೇಷಣೆಯ ದೃಷ್ಟಿಯಿಂದ ಪ್ರಥಮ, ಪ್ರಯತ್ನ ನಡೆಸಿದವರು -ಜೆ. ಎಫ್. ಫ್ಲೀಟ. ಅವರು A Selection of Kanerese Ballads ಎಂಬ ಲೇಖನ ಮಾಲೆಯನ್ನು ಆರಂಭಿಸಿದರು. " ಕ್ರಿ.ಶ. ೧೮೮೫ರ Inidan Antiquiry ಯಲ್ಲಿ ಆರಂಭವಾಯಿತು. ೧೮೯೦ ರಲ್ಲಿ ಐದು ಸಂಪುಟಗಳಲ್ಲಿ ಸಮಾಪ್ತಿಯಾಯಿತು:[೪] " ಇವು ಕನ್ನಡದ ಅತ್ಯಮೂಲ್ಯ ಸಂಗ್ರಹಗಳು ಇದು ಸ್ತುತ್ಯಾರ್ಹವಾದುದು. ಜನಪದ ಸಾಹಿತ್ಯದಲ್ಲಿ ಗೀತ ಸಾಹಿತ್ಯ ಪ್ರಮುಖವಾದದ್ದು. ಹಾಡಿನ ರೂಪದ ಎಲ್ಲ ಕಥೆಗಳನ್ನು 'ಲಾವಣಿ' ಎನ್ನುತ್ತಾರೆ.[೫] ಉತ್ತರ ಕರ್ನಾಟಕದಲ್ಲಿ ಲಾವಣಿ ಮತ್ತು ಗೀಗೀ ಹಾಡುಗಳ ಕುರಿತು ಅವುಗಳ ಮೂಲದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಲಾವಣಿಯ ಮೂಲದ ಬಗ್ಗೆ ಹೇಳುವುದಾದರೆ- ಲಾವಣಿಯು ಮರಾಠಿಯಿಂದ ಕನ್ನಡಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ. ಆದರೆ ಲಾವಣಿಯ ಮೂಲವನ್ನು ಕನ್ನಡದಲ್ಲೇ ಹುಡುಕುವ ಪ್ರಯತ್ನವನ್ನು ಕೈ ಬಿಟ್ಟಿಲ್ಲ.

ಗುಣಚಂದ್ರನ (೧೭೦೦) ಛಂದಸ್ಸಾರ ಕೃತಿಯಲ್ಲಿ 'ಲಾವಳಿ' ಎಂಬ ಶಬ್ದ ಪ್ರಯೋಗ ಬರುತ್ತದೆ. ಇದನ್ನೇ ಮುಖ್ಯವಾಗಿಟ್ಟುಕೊಂಡು ಡಾ|| ಎಂ. ಎಂ. ಕಲಬುರ್ಗಿ, ಡಾ|| ಬಿ.ಬಿ. ಹೆಂಡಿ, ಪ್ರಹ್ಲಾದ ಕುಮಾರ ಭಾಗೋಜಿಯವರಂತಹ ವಿದ್ವಾಂಸರು'ಲಾವಣಿ'ಯ ಮೂಲವನ್ನು ಕನ್ನಡದಲ್ಲಿ ಹುಡುಕಾಡಿದ್ದಾರೆ. ಡಾ|| ಶ್ರೀರಾಮ ಇಟ್ಟಣ್ಣನವರು ಲಾವಣಿಯ ಹಳಮೆಯನ್ನು ಕ್ರಿ.ಶ ೧೮೩೦ ರ ಸುಮಾರಿಗೆ ಕೊಂಡೊಯ್ದಿದ್ದಾರೆ. ಇಷ್ಟೆಲ್ಲ ಪ್ರಯತ್ನ ನಡೆದಿದ್ದರೂ ಅವರು ಒಪ್ಪಿಕೊಂಡಿದ್ದು ಲಾವಣಿಯ ಮೂಲ ಮರಾಠಿಯಲ್ಲೆ. ಲಾವಣಿ ಹಾಡಿಕೆಗೆ ಮರಾಠಿ ಪೇಶ್ವೆಗಳ ಕಾಲದಲ್ಲಿ ಸಮೃದ್ಧವಾಗಿದ್ದ 'ಪೊವಾಡ'ಗಳು ಪ್ರೇರಕ. ಕನ್ನಡ ಲಾವಣಿ ರಚನೆಯಲ್ಲಿ ಮೇಲ್ನೋಟಕ್ಕೆ ಕಂಡು ಬರುವ '' ಸಖಿ, ಖ್ಯಾಲಿ, ಕಲ್ಗಿ -ತುರಾಯಿ, ಇತ್ಯಾದಿ ಪಾರಿಭಾಷಿಕ ಪದಗಳು, ಹಾಡನ್ನು ನುಡಿ, ಚೌಕುಗಳಲ್ಲಿ ವಿಭಾಗಿಸುವದು, ಒಳಪ್ರಾಸ ಮತ್ತು ಅಂತ್ಯ ಪ್ರಾಸವಿರುವುದು ಇಂಥ ಲಕ್ಷಣಗಳು ಮರಾಠಿ ಲಾವಣಿಯಲ್ಲೂ ಸಿಗುವದರಿಂದ ಮರಾಠಿ ಲಾವಣಿಗಳು ಕನ್ನಡ ಲಾವಣಿಗಳಿಗೆ ಪ್ರೇರಕವಾದ ಸಂಗತಿ ಸ್ಪಷ್ಟವಾಗುತ್ತದೆ.[೬]

ಹಾಡಿಗೆ ಮೊದಲು ಡಪ್ಪು ಬಡಿದು ಹರದೇಶಿಯಾಗಿದ್ದರೆ ಶಿವಸ್ತುತಿ, ನಾಗೇಶಿಯಾಗಿದ್ದರೆ ಶಕ್ತಿಯ ಸ್ತುತಿಯಿಂದ ಲಾವಣಿ ಕಾರ್ಯಕ್ರಮ ಆರಂಭವಾಗುತ್ತದೆ. ಇದು ಗೀತಗೋಷ್ಠಿಗೆ ನಾಂದಿಯಾಗುತ್ತದೆ. 'ಪಲ್ಲ' ಪಲ್ಲವಿ ಇಡೀ ಹಾಡಿನ ಭಾವ ಒಳಗೊಂಡಿದ್ದು, ಪಲ್ಲವಿಯ ನಂತರದ ಭಾಗ ಚೌಕು, ಹಾಡಿನ ವಿವರವಾದ ಭಾಗಗಳನ್ನು ವಿವರಿಸುವದು ಇದರ ಮುಖ್ಯ ಕೆಲಸ. ಗೀಗೀ ಯನ್ನು 'ರಸದುಂಬಿ ಹೌದೌದು ಎನಿಸುವದು ಚಾಲ. ಆಗಮ ಹಾಡಿನ ಕೊನೆಯಭಾಗ ಇಲ್ಲಿ ಕವಿ ಮತ್ತು ಆತನ ಊರು ವಸ್ತಾದನ ಹೆಸರು ಸಿಗುತ್ತದೆ.

ಅಧ್ಯಯನದ ಸ್ವರೂಪ ಮತ್ತು ಉದ್ದೇಶಗಳು

ಪ್ರಾರಂಭಿಕ ಅಧ್ಯಾಯವು ಪ್ರಬಂಧವು ಸಾದರಪಡಿಸುವ ವಿಷಯದ ಕುರಿತು ಈಗಾಗಲೇ ನಡೆದಿರುವ ಅಧ್ಯಯನದ ಸಮೀಕ್ಷೆಯಾಗಿದೆ. ಇದು ಉತ್ತರ ಕರ್ನಾಟಕದಲ್ಲಿ ಈಗಾಗಲೇ ಪರಿಚಿತವಾಗಿರುವ ಸಂಪ್ರದಾಯಗಳ ಕುರಿತು ತಿಳಿಸುತ್ತದೆ. ಎರಡನೆಯ ಅಧ್ಯಾಯದಲ್ಲಿ ಬಳ್ಳಿಗೇರಿ ಪರಿಸರದ ಲಾವಣಿ ಕವಿಗಳನ್ನು ಪರಿಚಯಿಸುತ್ತದೆ. ಬಳ್ಳಿಗೇರಿಯ ಅತೀ ಸಮೀಪದ ಹಳ್ಳಿಗಳು ಇದರ ವ್ಯಾಪ್ತಿಗೆ ಒಳಪಡುತ್ತವೆ. ದಟ್ಟ ಪ್ರಭಾವದಿಂದ ಪ್ರೇರಿತವಾದ ಇವು ಮರಾಠಿ ಭಾಷೆಯ ಗಾಢ ಪ್ರಭಾವಕ್ಕೆ ಒಳಗಾಗಿರುವುದು ಕಂಡು ಬರುತ್ತದೆ. ಮಲಾಬಾದ, ಜೇವನೂರು, ತಾಂವಶಿ, ಗೂಗವಾಡ, ಶಿವನೂರು, ಗ್ರಾಮಗಳು ಲಾವಣಿ ಕವಿಗಳಿಗೆ ಜನ್ಮ ನೀಡಿವೆ.ಇವುಗಳ ಅಧ್ಯಯನವು ಒಂದು ದಟ್ಟವಾದ ಸಂಪ್ರದಾಯದ ಹುಟ್ಟಿಗೆ ಕಾರಣವಾಗಿರುವದು ತೋರುತ್ತದೆ. ಅಲ್ಲಿಯ ಪರಿಸರ, ಭೌಗೋಳಿಕ ಸ್ಥಿತಿ

ಕವಿಗಳನ್ನು ರಾಜ್ಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದೆ. ತೃತೀಯ ಅಧ್ಯಾಯವು ಲಾವಣಿ ಹಾಡುಗಾರರನ್ನು ಹೆಸರಿಸುತ್ತದೆ. ಒಂದು ಪ್ರದೇಶ ಒಬ್ಬ ವಸ್ತಾದನ ಹೆಸರು ಪರಿಚಿತವಾಗುವದಕ್ಕೆ ಅಲ್ಲಿಯ ಹಾಡುಗಾರರು ಕಾರಣರಾಗುವದರಿಂದ ಅವರನ್ನು ಅಭ್ಯಸಿಸುವದು ಇದರ ಪ್ರಮುಖ ಉದ್ದೇಶವಾಗಿದೆ. ಸಮಗಾರ ಲಕ್ಷ್ಮಣ, ಜಾತ್ರಿ ಚೆನ್ನ, ಖಾತ್ರಿ ಬಸು, ಗುರಪ್ಪ ನಾಟೀಕಾರ, ಗೂಗವಾಡ ಕಾಸವ್ವ, ದಾದು ಹವಾಲ್ದಾರ, ಮುಂತಾದ ಪ್ರಸ್ತುತ ಲಾವಣಿ ಹಾಡುಗಾರರು ತಕ್ಕ ಮಟ್ಟಿಗೆ ಈ ಸಂಪ್ರದಾಯದ ಮುಂದುವರಿಕೆಗೆ ಸಹಕರಿಸಿದ್ದಾರೆ. ನಾಲ್ಕನೆಯ ಅಧ್ಯಾಯವು ಪ್ರಮುಖ ನಾಗೇಶಿ ಲಾವಣಿಗಾರ ಬಳ್ಳಿಗೇರಿಯ ಅಪ್ಪಣ್ಣ ಕವಿಯ ಸಮಗ್ರ ಪರಿಚಯ ನೀಡುತ್ತದೆ. ವಸ್ತಾದ ಅಪ್ಪಣ್ಣನ ಕಾಲದ ಕುರಿತು ವಿವೇಚಿಸಲಾಗಿದೆ. ಅವನ ಜೀವನ ವೃತ್ತಾಂತವನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡುವದು ಮುಖ್ಯವೆನಿಸುತ್ತದೆ. ಅಧ್ಯಾಯ ಐದರಲ್ಲಿ ಅಪ್ಪಣ್ಣ ಕವಿ ರಚಿಸಿದ ಸಾಹಿತ್ಯವನ್ನು ಅಧ್ಯಯನ ಸುಲಭಗೊಳಿಸುವ ದೃಷ್ಟಿಯಿಂದ ಅನೇಕ ವಿಭಾಗಗಳಾಗಿ ಮಾಡಿಕೊಂಡು ಅಭ್ಯಸಿಸುವದನ್ನು ಸೂಚಿಸುತ್ತದೆ. ತತ್ತ್ವ ಸಿದ್ಧಾಂತಗಳ ಅಡಿ ವರ್ಗೀಕರಣ ನಡೆದಿದೆ. ಆರನೆಯ ಅಧ್ಯಾಯವು ಅಪ್ಪಣ್ಣ ಕವಿಯು ರಚಿಸಿದ ಲಾವಣಿಗಳ ಸಾಹಿತ್ಯಿಕ ಮೌಲ್ಯವನ್ನು ವಿವೇಚಿಸಿರುವದನ್ನು ಸ್ಪಷ್ಟ ಪಡಿಸುತ್ತದೆ. ಅಧ್ಯಾಯ ಏಳು- ಸಮಾರೋಪ. ಇದು ಅಧ್ಯಯನದ ಕೊನೆಯ ಅಧ್ಯಾಯ. ಪ್ರಸ್ತುತ ಅಧ್ಯಾಯದಲ್ಲಿ ಅನಾವರಣಗೊಂಡ ಪ್ರಮುಖ ಅಂಶಗಳನ್ನೆಲ್ಲಾ ಇಲ್ಲಿ ದಾಖಲಿಸಲಾಗಿದೆ. ಜೊತೆಗೆ ಈ ಕ್ಷೇತ್ರದಲ್ಲಿ ನಡೆಯಬೇಕಾದ ಅಧ್ಯಯನದ ವಿಷಯಗಳನ್ನು ಸೂಚಿಸಲಾಗಿದೆ. ಹೀಗೆ ಈ ಅಧ್ಯಯನದ ಒಟ್ಟು ಫಲಿತಾಂಶಗಳನ್ನು ಪ್ರತಿಫಲಿಸುವ ಕನ್ನಡಿಯಿದು. ಇಲ್ಲಿ ಅಭ್ಯಸಿಸುತ್ತಿರುವ 'ಲಾವಣಿ ಸಾಹಿತ್ಯ'ವು ಉತ್ತರ ಕರ್ನಾಟಕದ ವಿಶಿಷ್ಟ ಕೊಡುಗೆ ಸರಳವಾದುದು. ಜನರ ನಾಡಿ ಮಿಡಿತ ಮನಮಿಡತಕ್ಕೆ ಅತೀ ಬೇಗ ಸ್ಪಂದಿಸುತ್ತದೆ. ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಬಹಳ. ಹಳ್ಳಿ ಹಳ್ಳಿಗಳಲ್ಲಿ ಡಪ್ಪಿನ ಸದ್ದು ಕಿವಿಗೆ ಕೇಳಿಸುತ್ತದೆ. ವಸ್ತಾದರ ಹಾಡು ಜನರ ಬಾಯಿಂದ ಬಾಯಿಗೆ ಹರಿದಾಡುತ್ತಿರುತ್ತದೆ. ಲಾವಣಿ ಕವಿಗಳು ತಮ್ಮ ಮೂಲ ಕವಿ ಅಥವಾ ಹಾಡಿನ ಶಿವ-ಶಕ್ತಿ ಸಂಪ್ರದಾಯವನ್ನು ಆಧರಿಸಿ ಒಂದೊಂದು ಸಂಪ್ರದಾಯಗಳನ್ನು ರೂಪಿಸಿಕೊಂಡಿರುವರು. ವಿದ್ವಾಂಸರು ಈಗಾಗಲೇ ಇಂತಹ ಅನೇಕ '' ಲಾವಣಿ ಸಂಪ್ರದಾಯಗಳನ್ನು ಗುರುತಿಸಿದ್ದಾರೆ'' ಈ ಸಂಪ್ರದಾಯಗಳಿಗೆ ಸೇರಬೇಕಾದದ್ದು ಬಳ್ಳಿಗೇರಿ ಲಾವಣಿ ಸಂಪ್ರದಾಯ.

ಪೂರ್ವಾಧ್ಯಯನದ ಅವಲೋಕನ

ಉತ್ತರ ಕರ್ನಾಟಕದ ಭೌಗೋಳಿಕ ಪರಿಸ್ಥಿತಿ ವಿಭಿನ್ನವಾದುದು. ಇಲ್ಲಿಯ ಜನಪದ ಸಾಹಿತ್ಯ ಶ್ರೀಮಂತವಾದುದು. ವಿಶಾಲವಾದುದು. ಲಾವಣಿ ಸಂಪ್ರದಾಯಗಳ ತಲಸ್ಪರ್ಶಿ ಅಧ್ಯಯನ ನಡೆದಿಲ್ಲ. ಅಧ್ಯಯನದ ಗ್ರಂಥಗಳು ವಿವರವಾಗಿಲ್ಲ. ಲಭ್ಯ ಮಾಹಿತಿ ಅತ್ಯಲ್ಪವಾದುದು. ಸಂಪ್ರದಾಯದ ಕವಿಗಳ ಪರಿಪೂರ್ಣ ವಿವರಣೆ ಸಾಧ್ಯವಾಗಿಲ್ಲ. ಅನೇಕ ಸಂಪ್ರದಾಯಗಳ ಪರಿಚಯಾತ್ಮಕ ನೋಟ ಮಾತ್ರ ಲಭ್ಯವಿದೆ. ಈ ನಿಟ್ಟಿನಲ್ಲಿ ನಡೆದ ಪ್ರಯತ್ನ ಫಲದಾಯಕವೂ, ಆಶಾದಾಯಕವೂ ಆಗಿದೆ. ಜನಪದ ಸಾಹಿತ್ಯದಲ್ಲಿ ಕ್ಷೇತ್ರ ಕಾರ್ಯಗಳ ಮೂಲಕ ಸಂಗ್ರಹಿತ ಸಾಹಿತ್ಯರಾಶಿ ವಿಪುಲವಾಗಿದೆ. ಮೂಲವನ್ನು ಹುಡುಕುವಲ್ಲಿ ಅವಿರತವಾಗಿ ಶ್ರಮಿಸಿದ್ದಾರೆ. ಕ್ರಿಶ. ೧೯೭೮ ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಕಲಬುರ್ಗಿಯಲ್ಲಿ ಕಾರ್ಯಕ್ರಮ ಆಯೋಜಿಸಿತ್ತು. ಅದು ಅಖಿಲ ಕರ್ನಾಟಕ ಐದನೆಯ ಜಾನಪದ ಸಮ್ಮೇಳನ ಡಾ॥ ಎಂ. ಎಸ್. ಲಠ್ಠೆಯವರು 'ಹುಲಕುಂದ ಭಾಗದ ಲಾವಣಿಕಾರರು' ಪ್ರಬಂಧ ಮಂಡಿಸಿದರು. ಪ್ರಬಂಧದಲ್ಲಿ ಬೆಳಗಾಂವ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲ ಲಾವಣಿಕಾರರನ್ನು ಪರಿಚಯಿಸಿದರು. ಆದರೆ ಅವರ ಹೆಚ್ಚಿನ ಒಲುಪು ಇದ್ದದ್ದು ಹುಲಕುಂದಕ್ಕೆ '' ಹುಲಕುಂದಕ್ಕೆ ವಿಶೇಷ ಸ್ಥಾನ ನೀಡಿದರು.[೮] ಇಲ್ಲಿ ಉಳಿದವರಿಗೆ ಸಲ್ಲಬೇಕಾದ ಪ್ರಾಶಸ್ತ್ಯ ದೊರೆತಿಲ್ಲ.

ಇದೇ ಲೇಖಕರು ಕ್ರಿ. ಶ. ೧೯೭೯ ರಲ್ಲಿ '' ಉತ್ತರ ಕರ್ನಾಟಕದ ಜನಪದ ಕವಿ ಚರಿತ್ರೆ ಭಾಗ-೧'[೯] ಪ್ರಕಟಿಸಿದರು. ಇದು ಸವಿವರವಾದದ್ದಲ್ಲ. ಇದರಲ್ಲಿ ಉತ್ತರ ಕರ್ನಾಟಕದ ಕವಿಗಳನ್ನು ಪರಿಚಯಿಸಿದ್ದಾರೆ. ಆದರೆ ಪರಿಚಯ ನೋಟ ಎಲ್ಲ ಸೀಮೆಗಳನ್ನು ಒಳಗೊಳ್ಳಲಿಲ್ಲ. ಇಲ್ಲಿಯೂ ಬಳ್ಳಿಗೇರಿ ಭಾಗದ ಲಾವಣಿಕಾರರು ಎದ್ದು ಕಾಣಲಿಲ್ಲ.

ಉತ್ತರ ಕರ್ನಾಟಕ ಭಾಗದ ಲಾವಣಿಗಳ ಯಶಸ್ವೀ ಸಂಗ್ರಹ ನಡೆದಿಲ್ಲ. ಸಂಗ್ರಹಣೆ ಸಂತೃಪ್ತಿದಾಯಕವಾಗಿಲ್ಲ. ಡಾ॥ ವೀರೇಶ ಬಡಿಗೇರರ 'ಹಳೆಯ ಲಾವಣಿಗಳು' ಹೆಸರಿನಲ್ಲಿ ಬಹಳಷ್ಟು ಲಾವಣಿಗಳು ಬೆಳಕು ಕಂಡಿದ್ದರೂ ಬಳ್ಳಿಗೇರಿ ಭಾಗದ ಲಾವಣಿಗಳಿಗೆ ಇನ್ನೂ ಬೆಳಕು ಬೀಳದಿರುವದು ಈ ಭಾಗದ ವಿಪರ್ಯಾಸ.[೧೦] ' ಪ್ರೊ ಜ್ಯೋತಿ ಹೊಸುರರು, ಶ್ರೀರಾಮ ಇಟ್ಟಣ್ಣವರ ಇವರು ಲಾವಣಿ ಮೂಲ, ಲಾವಣಿ-ಗೀಗೀ ಸಂಬಂಧವನ್ನು ಎಳೆದಾಡಿದರು. ಲಾವಣಿಗಳ ಕುರಿತು ತಲೆ ಕೆಡಿಸಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ''.[೧೧] ತೇರದಾಳ ಭಾಗದ ಲಾವಣಿ ಸಂಪ್ರದಾಯ, ಹಲಸಂಗಿ ಭಾಗದ ಲಾವಣಿ ಸಂಪ್ರದಾಯ, ಹುಲಕುಂದ ಭಾಗದ ಲಾವಣಿ ಸಂಪ್ರದಾಯಗಳ ಕುರಿತ ವಿಸ್ತೃತ ಅಧ್ಯಯನಗಳು ಬೆಳಕು ಕಂಡಿವೆ. ಇಂತಹ ಇನ್ನೊಂದು ಹೆಸರಿಸಬಹುದಾದ ಸಂಪ್ರದಾಯ ಬಳ್ಳಿಗೇರಿ

ಸಂಪ್ರದಾಯ. ಈ ಭಾಗದ ಲಾವಣಿ ಸಂಪ್ರದಾಯ ಕುರಿತು ಆಳವಾದ ಅಧ್ಯಯನ ನಡೆದಿಲ್ಲ. ಸಂಗ್ರಹರೂಪದ ಕೃತಿಗಳು, ಸಂಶೋಧನಾತ್ಮಕ ಲೇಖನಗಳು ಬಂದಿಲ್ಲ. ಈ ಕೊರತೆಯ ಕಾರಣದಿಂದಾಗಿ ಅಧ್ಯಯನ ಕೈಗೊಳ್ಳಲು ಪ್ರಯತ್ನಿಸಿದೆ.

ವ್ಯಾಪ್ತಿ

ಈ ಪ್ರಬಂಧವು ಪರಿಮಿತವಾದ ವ್ಯಾಪ್ತಿಯನ್ನು ಹೊಂದಿರುವುದು ಸ್ಪಷ್ಟ. ಬಳ್ಳಿಗೇರಿ ಲಾವಣಿ ಸಂಪ್ರದಾಯ ವಿಶಿಷ್ಟವಾದುದು, ಶ್ರೀಮಂತವಾದುದು ಹಾಗೂ ಪ್ರತಿಷ್ಠಿತವಾದುದು. ಆ ಗ್ರಾಮ ಪರಿಸರದ ಮಲಾಬಾದ, ತಾಂವಶಿ, ಶಿವನೂರ, ಬೇವನೂರು, ಗೂಗವಾಡ ಮುಂತಾದ ಗ್ರಾಮಗಳು ಇದರ ದಟ್ಟ ಪ್ರಭಾವಕ್ಕೆ ಒಳಗಾದವು. ಅಲ್ಲೆಲ್ಲ ಬಳ್ಳಿಗೇರಿಯ ಅಪ್ಪಣ್ಣಕವಿ ಅನೇಕರಿಗೆ ನೆಲೆಯಾದರು. ಈ ಕವಿಯ ಸ್ಫೂರ್ತಿ ಪಡೆದ ಆ ಪರಿಸರದ ಲಾವಣಿ ಕವಿಗಳನ್ನು ಪರಿಚಯಿಸುವುದು ಈ ಪ್ರಬಂಧದ ಮತ್ತೊಂದು ಉದ್ದೇಶವಾಗಿದೆ. ಅವರು ರಚಿಸಿದ ಲಾವಣಿ ಸಾಹಿತ್ಯವನ್ನು ಲಭ್ಯವಿರುವ ಮಾಹಿತಿಯನ್ನು ಕ್ರೋಢೀಕರಿಸಿ ಪ್ರಬಂಧವನ್ನು ರಚಿಸಲಾಗಿದೆ. ಇದೇ ಕವಿಗಳು ಬೇರೆ ಸಾಹಿತ್ಯ ಸೃಷ್ಟಿಸಿರುವದು ಕಂಡು ಬಂದಿದ್ದರೂ ಆ ಸಾಹಿತ್ಯವನ್ನು ಅಭ್ಯಾಸ ಮಾಡಲಾಗಿಲ್ಲ. ದೊರೆತಿರುವ ವಕ್ತೃಗಳ ಮಾಹಿತಿಯನ್ನು ಸಮರ್ಪಕವಾಗಿ ವಿಂಗಡಿಸುವುದು ಅಧ್ಯಯನದ ಪ್ರಮುಖ ಅಂಶವಾಗಿದೆ.

ವೈಧಾನಿಕತೆ

ಅಧ್ಯಯನವನ್ನು ಮುಖ್ಯವಾಗಿ ಮಾಹಿತಿ ಸಂಗ್ರಹಣೆ ಹಾಗೂ ಕ್ಷೇತ್ರ ಕಾರ್ಯಗಳಲ್ಲಿ ನಡೆದಿರುವ ಮಾಹಿತಿ ಆಧರಿಸಿ ಕೈಗೊಳ್ಳಲಾಗಿದೆ.ಪ್ರಸ್ತುತ ಅಧ್ಯಯನ ಕ್ಷೇತ್ರ ಕಾರ್ಯ ಕೇಂದ್ರಿತ ವಾಗಿದೆ. ಇದಕ್ಕೆ ಸಂಬಂಧಿಸಿದ ಕೆಲವು ಉಲ್ಲೇಖಗಳನ್ನು ಜಾನಪದ ವಿದ್ವಾಂಸರು ಅಲ್ಲಲ್ಲಿ ಸೂಚಿಸಲಾಗಿದ್ದರೂ ಅವು ಒತ್ತಟ್ಟಿಗೆ ಮತ್ತು ವಿವರವಾಗಿ ಸಿಗುವದಿಲ್ಲ. ಮಲಾಬಾದ ಲಾವಣಿ ಸಂಪ್ರದಾಯದ ಪ್ರಸಿದ್ಧ ಕವಿ ಕುಂಬಾರ ಮಲ್ಲಣ್ಣ. ಅವರ ಬದುಕಿನ ಕುರಿತು ಮಾಹಿತಿಗಳು ಲಭಿಸುವದಿಲ್ಲ. ಆದ್ದರಿಂದ ಈ ಅಧ್ಯಯನವು ಕ್ಷೇತ್ರ ಕಾರ್ಯ ಮೂಲದ ಪ್ರಾಥಮಿಕ ಶೋಧಗಳನ್ನು ಅವಲಂಬಿಸಿದೆ. ಆದ್ದರಿಂದ ಇದನ್ನು ಪ್ರಾಥಮಿಕ ಶೋಧ ವೆಂದು ಕರೆಯಬಹುದು.

ಸದ್ಯದಲ್ಲಿ ಅಲ್ಲಲ್ಲಿ ಈ ಪರಿಸರದಲ್ಲಿ ಕಾಣಸಿರುವ ಲಾವಣಿ ತಂಡಗಳಿಂದ ಮೂಲ ಮಾಹಿತಿ ಸಂಗ್ರಹಿಸಿ ಜೊತೆಗೆ ಅದಕ್ಕೆ ಪೂರಕವಾಗಿ ಮಲ್ಲಾಬಾದ, ಬಳ್ಳಿಗೇರಿ ಪರಿಸರದ ಲಾವಣಿ ಕವಿಗಳ ಲಾವಣಿಗಳನ್ನು ಅಭ್ಯಸಿಸಿ ಈ ನಿಬಂಧವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ವಸ್ತಾದ ಅಪ್ಪಣ್ಣ ಈ

ಅಧ್ಯಯನದ ಕೇಂದ್ರ ವ್ಯಕ್ತಿ ಆಗಿರುವದರಿಂದ ಆತನ ಲಾವಣಿ ಕೃತಿಗಳಿಗೆ ಹೆಚ್ಚಿನ ಮಹತ್ವ ನೀಡಿ ಆತನ ಮೂಲಕ ಲಾವಣಿ ಸಂಪ್ರದಾಯದ ಆಳ ವಿಸ್ತಾರಗಳನ್ನು ಗುರುತಿಸಲಾಗಿದೆ. ಹೀಗಾಗಿ ಅಪ್ಪಣ್ಣ ಕವಿಯ ಪರಿಚಯಕ್ಕಾಗಿಯೇ ಒಂದು ಅಧ್ಯಾಯ ಮೀಸಲಾಗಿದೆ. ಇಲ್ಲಿಯ ಅಧ್ಯಯನ ವಿಧಾನ ಸರಳವಾದುದು. ಕ್ಲಿಷ್ಟತೆಗೆ ಅವಕಾಶವಿಲ್ಲ. ಮೌಖಿಕ ಪರಂಪರೆಯಲ್ಲಿ ದೊರೆಯುವ ಮಾಹಿತಿಗಳನ್ನು ಅವಲಂಬಿಸಿ ಅಧ್ಯಾಯಗಳನ್ನು ರೂಪಿಸಲಾಗಿದೆ.

★ ★ ★

೧ ಅಡಿ ಟಿಪ್ಪಣಿಗಳು

೧) ಡಾ॥ ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ ೧೯೭೪ : ಪುಟ -೪೩೩.

೨) ಡಾ॥ ಸಿಂಪಿ ಲಿಂಗಣ್ಣ, ಡಾ॥ ಬಿ. ಬಿ. ಹೆಂಡಿ ಡಾ॥ ಶ್ರೀರಾಮ ಇಟ್ಟಣ್ಣವರ ಡಾ॥ ಬಸವರಾಜ ಮಲಶೆಟ್ಟಿ ಮುಂತಾದವರು.

೩) ಸಂ. ವೀರೇಶ ಬಡಿಗೇರ : ಹಳೆಯ ಲಾವಣಿಗಳು : ಸಂಪುಟ-೧ ಪುಟ : ಪ್ರಸ್ತಾವನೆ ಭಾಗ

೪) ಡಾ॥ ಗಂಗಾಧರ ದೈವಜ್ಞ : ಸಣ್ಣಾಟಗಳು ಹುಟ್ಟು ಬೆಳವಣಿಗೆ. ಮಂಪಟ ಮಾಲೆ. ೧೪೫ ಪ್ರ. ಕ. ವಿ.ವಿ ಹಂಪಿ ೨೦೦೬ ಪುಟ -೧೯.

೫) ಡಾ॥ ಹರಿಲಾಲ ಪವಾರ : ಜನಪದ ಸಾಹಿತ್ಯಕ್ಕೆ ಬಿಜಾಪೂರ ಜಿಲ್ಲೆಯ ಕೊಡುಗೆ : ಕ.ವಿ. ಹಂಪಿ-೨೦೦೨ ಪುಟ. ೩

೬) ಡಾ॥ ವೀರೇಶ ಬಿಡಿಗೇರ: ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ. ಪುಟ: ೩೪೩

೭) ಡಾ॥ ಬಿ. ಎಸ್. ಭಜಂತ್ರಿ : ಹುಲಕುಂದದ ಲಾವಣಿ ಸಂಪ್ರದಾಯ ಒಂದು ಅಧ್ಯಯನ : ಪುಟ : ೬೩

೮) ಡಾ॥ ಬಿ. ಎಸ್. ಭಜಂತ್ರಿ : ಹುಲಕುಂದದ ಲಾವಣಿ ಸಂಪ್ರದಾಯ ಒಂದು ಅದ್ಯಯನ : ಪುಟ :೮೨

೯) ಡಾ॥ ಬಿ. ಎಸ್. ಭಜಂತ್ರಿ : ಹುಲಕುಂದದ ಲಾವಣಿ ಸಂಪ್ರದಾಯ ಒಂದು ಅಧ್ಯಯನ : ಪುಟ : ೮೨

೧೦) ಡಾ॥ ವೀರೇಶ ಬಡಿಗೇರ : ಹಳೆಯ ಲಾವಣಿಗಳು ಪುಟ ಪ್ರಸ್ತಾವಣೆಯ ಭಾಗ

೧೧) ಡಾ॥ ವೀರೇಶ ಬಡಿಗೇರ : 'ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು' ಒಂದು ಸಾಂಸ್ಕೃತಿಕ ಅಧ್ಯಯನ : ಪುಟ : ೨೪೩

ಅಧ್ಯಾಯ - ೨

ಅಧ್ಯಾಯ -೨

ಮಲಾಬಾದ -ಬಳ್ಳಿಗೇರಿ ಪರಿಸರದ ಲಾವಣಿ ಕವಿಗಳು

ಬಳ್ಳಿಗೇರಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಒಂದು ಪುಟ್ಟ ಹಳ್ಳಿ. ತಾಲೂಕು ಕೇಂದ್ರದಿಂದ ಉತ್ತರ ದಿಕ್ಕಿಗಿದೆ. ಸುಮಾರು ೧೮ ಕಿ. ಮೀ ಅಂತರ. ಅಥಣಿ- ಖಿಳೆಗಾಂವ ರಸ್ತೆಯ ಮೇಲೆಯೇ ಕಾಣಿಸಿಗುತ್ತದೆ. ಮಹಾರಾಷ್ಟ್ರದ ಗಡಿ ಇಲ್ಲಿಂದ ಕೇವಲ ೧ ಕಿ. ಮೀ ಮಾತ್ರ ದೂರ. ಹೀಗಾಗಿ ಮಹಾರಾಷ್ಟ್ರದ ದಟ್ಟ ಪ್ರಭಾವ ಈ ಗ್ರಾಮದ ಮೇಲಾಗಿದೆ. ಇಲ್ಲಿಯ ಜನರು ಆರಂಭದಿಂದಲೂ ತಮ್ಮ ದಿನನಿತ್ಯದ ದಿನಬಳಕೆಯ ಸಾಮಾನುಗಳ ಮಾರಾಟ ಖರೀದಿಗೆ ಮಂಗಳವಾರ ನಡೆಯುವ ಮಲಾಬಾದದ ಸಂತೆಯನ್ನೇ ಅವಲಂಬಿಸಿದ್ದಾರೆ. ಚಾಲುಕ್ಯರ ಕಾಲದ ವಾಸ್ತುಶಿಲ್ಪದ ದೇವಾಲಯದ ಕುರುಹುಗಳು ಗ್ರಾಮದಲ್ಲಿ ಲಭ್ಯ. ಶಾಸನಗಳೂ ಲಭ್ಯ. ಇದು ಪುರಾತನವಾದದ್ದು ಇಲ್ಲಿಯ ಸಾಂಸ್ಕೃತಿಕ ಹಿನ್ನೆಲೆಯೂ ಅನನ್ಯವಾದುದು. ಈ ಗ್ರಾಮದ ಸಮೀಪ ಹಳ್ಳಿಗಳು ಅಂತಹ ದಟ್ಟ ಪರಂಪರೆಗೆ ಒಳಗಾಗಿವೆ. ಈ ಗ್ರಾಮವು ಅನೇಕ ಲಾವಣಿ ಹಾಡುಗಾರರು, ಲಾವಣಿಕಾರರು, ಚೌಡಿಕೆ ಮೇಳದವರಿಗೆ ಜನ್ಮ ನೀಡಿರುವದು ಈಗಾಗಲೇ ತಿಳಿದ ವಿಷಯವಾಗಿದೆ. ಈ ಗ್ರಾಮದಲ್ಲಿ ಹುಟ್ಟಿ ಬೆಳೆದ ಖ್ಯಾತ ಕವಿ ವಸ್ತಾದ ಅಪ್ಪಣ್ಣ ಗೀಗೀ ಪದ ರಚನೆಯಲ್ಲಿ ಅಸಾಮಾನ್ಯ ಸಾಧಕರು. ಇವರ ಪ್ರಭಾವದಿಂದಾಗಿ ಈ ಗ್ರಾಮದ ಸುತ್ತಮುತ್ತ ಅನೇಕ ಲಾವಣಿಕಾರರು ಒಂದು ಸಂಪ್ರದಾಯವನ್ನು ಹುಟ್ಟು ಹಾಕುವಷ್ಟರ ಮಟ್ಟಿಗೆ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ವಿಪುಲವಾದ ಶಿಷ್ಯ ಬಳಗವಿದೆ. ಬಹಳಷ್ಟು ಲಾವಣಿ ಮೇಳಗಳಿವೆ. ಅನೇಕ ಶಿಷ್ಯ ಬಳಗ ಈ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಈ ಗ್ರಾಮ ಪರಿಸರದ ಮಾಲಾಬಾದ, ಜೇವನೂರು. ತಾಂವಶಿ, ಶಿವನೂರು ಇಂದಿಗೂ ಸರಕಾರದ ಸೌಲಭ್ಯಗಳಿಂದ ವಂಚಿತವಾಗಿವೆ. ಆದರೆ ಅವುಗಳು ಸಾಂಸ್ಕೃತಿಕ ಇತಿಹಾಸ, ಸಾಹಿತ್ಯಿಕ ಬೆಳವಣಿಗೆಯಿಂದಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿವೆ. ಮಹಾರಾಷ್ಟ್ರದ ಕನ್ನಡ ಭಾಷಿಕ ಗೂಗವಾಡ ಗ್ರಾಮವು ಕೂಡ ಲಾವಣಿ ಹಾಡುಗಾರರನ್ನು ಹೊಂದಿದೆ. ಈ ಹಾಡುಗಾರರ ಬಾಯಿಂದ ಹಾಡಲ್ಪಡುವ ಹಾಡುಗಳೆಲ್ಲ ಮೇಲೆ ಹೆಸರಿಸಿದ ಗ್ರಾಮಗಳ ಲಾವಣಿಕಾರರು ರಚಿಸಿದ ಲಾವಣಿಗಳೇ ಆಗಿವೆ.

[illegible]

[illegible]

[illegible]

[illegible]

ಇದರಿಂದ ನಮ್ಮ ಅಧ್ಯಯನದಲ್ಲಿ ತಿಳಿದು ಬರುವ ಸ್ಪಷ್ಟ ಸಂಗತಿಯೆಂದರೆ, ಸುತ್ತಲಿನ ಗ್ರಾಮಗಳೆಲ್ಲ ಲಾವಣಿಯ ದಟ್ಟ ಪ್ರಭಾವಕ್ಕೆ ಒಳಗಾಗಿರುವುದು. ಕವಿಗಳು ಅನಕ್ಷರಸ್ಥರು. ಅವರ ಜ್ಞಾನ, ಸಾಮರ್ಥ್ಯಗಳಿಗೆ ಕಾವ್ಯರೂಪ ನೀಡಿದ್ದು ಅವರ ವಿಶೇಷ ಪರಿಶ್ರಮ. ಸತತ ಪರಿಶ್ರಮದಿಂದ ಕಟ್ಟಲ್ಪಡುತ್ತಿದ್ದ ಲಾವಣಿಗಳು ಆ ಊರಿನಲ್ಲಿ ಕಲಿತವರಿಂದ ಪ್ರಾಸಗಳನ್ನು ಜೋಡಿಸಿ, ಕಾವ್ಯವಾಗುತ್ತಿದ್ದವು ಎಂಬ ಮಾಹಿತಿ ಲಭಿಸುತ್ತದೆ. ಇದು ಸತ್ಯವೂ ಆಗಿದೆ. ಸಾಕಷ್ಟು ಸಾಹಿತ್ಯರಾಶಿಯನ್ನು, ವಿಪುಲ ಜೀವನಾನುಭವವನ್ನು ನೀಡಿ ಕಣ್ಮರೆಯಾದ ಈ ಗ್ರಾಮ ಪರಿಸರದ ಲಾವಣಿ ಕವಿಗಳನ್ನು ಪರಿಚಯಿಸುವುದು ಈ ಅಧ್ಯಾಯದ ಪ್ರಮುಖ ಉದ್ದೇಶವಾಗಿದೆ. ಅವರಲ್ಲಿ -

★ ವಸ್ತಾದ ಮಲ್ಲಣ್ಣ

★ ಬಳ್ಳಿಗೇರಿ ಅಪ್ಪಣ್ಣ

★ ತಾಂವಶಿ ಶಿವಣ್ಣ

★ ಶಿವನೂರ ಗೋವಿಂದಗೂಳಿ

ವಸ್ತಾದ ಮಲ್ಲಣ್ಣ

ಕುಂಬಾರ ಮಲ್ಲಣ್ಣ, ಮಲಾಬಾದಿ ಮಲ್ಲ, ಹರದಾಸ ಮಲ್ಲ, ವಸ್ತಾದ ಮಲ್ಲಣ್ಣ ಹೀಗೆ ಬೇರೆ ಬೇರೆ ಹೆಸರುಗಳಿಂದ ಈ ಲಾವಣಿಕಾರನನ್ನು ಕರೆಯಲಾಗುತ್ತದೆ. ಒಂದೊಂದು ಹೆಸರಿಗೆ ಒಂದೊಂದು ಕಾರಣವಿರುವದು ವಿದಿತವಾಗುತ್ತದೆ.

ಕುಂಬಾರ ಮಲ್ಲಣ್ಣ

ಈ ಲಾವಣಿಕಾರನು ಕುಂಬಾರ ಜನಾಂಗದಲ್ಲಿ ಹುಟ್ಟಿ ಬೆಳೆದವನಾಗಿದ್ದರಿಂದ ಕುಂಬಾರ ಮಲ್ಲಣ್ಣ ಎಂಬ ಹೆಸರು ಬಂದಿದೆ.

ಮಲಾಬಾದಿ ಮಲ್ಲ:

ಈ ಲಾವಣಿಕಾರನು ಮಲಾಬಾದಿಯಲ್ಲಿಯೇ ನೆಲೆಯೂರಿ ನಿಂತವನಾಗಿದ್ದರಿಂದ ಆ ಗ್ರಾಮ ನಾಮ ದೊಂದಿಗೆ ವ್ಯಕ್ತಿ ನಾಮವನ್ನು ಸೇರಿಸಿ 'ಮಲಾಬಾದಿ ಮಲ್ಲ' ಎಂಬ ಹೆಸರು ಬಂದಿದೆ.

ಹರದಾಸ ಮಲ್ಲ

ಈ ಲಾವಣಿಕಾರನ ರಚನೆಗಳೆಲ್ಲ 'ಶಿವ' ನನ್ನು ಹೆಚ್ಚು ಮಾಡಿ ರಚಿಸಿದಂತವುಗಳು. ಇವರ ಲಾವಣಿಗಳನ್ನು ಅವಲೋಕಿಸಿದಾಗ ತಮ್ಮ ಪಕ್ಷ ಬೆಳಕು, ಬೀಜವನ್ನು ಪ್ರತಿನಿಧಿಸುತ್ತದೆ ಎಂದು ತಿಳಿಯುತ್ತದೆ. ಈ ರೀತಿ ರಚನೆ ಮಾಡಿದ್ದರಿಂದ ಕವಿಯನ್ನು 'ಹರದಾಸ ಮಲ್ಲ' ಎಂದು ಕರೆಯಲಾಗಿದೆ.

ವಸ್ತಾದ ಮಲ್ಲಣ್ಣ

ಈ ಲಾವಣಿಕಾರನು ಅನೇಕ ಜನರಿಗೆ ಲಾವಣಿ ಹಾಡುವುದನ್ನು ಕಲಿಸಿಕೊಡುತ್ತಿದ್ದ ಎಂಬುದು ಅಂದಿನ ಹಿರಿಯರು ಹೇಳುವ ಮಾತು. 'ಗುರುವನ್ನು' 'ಹಾಡು ಕಲಿಸುವವನನ್ನು' 'ವಸ್ತಾದರು' ಎಂದು ಕರೆಯುತ್ತಾರೆ. ಈ ಕಾರಣದಿಂದಾಗಿಯೇ ಮಲ್ಲಣ್ಣ, ವಸ್ತಾದ ಮಲ್ಲಣ್ಣನಾದುದು.

ಈ ಎಲ್ಲ ಮಾಹಿತಿಗಳಿಂದ ಅಧ್ಯಯನದಲ್ಲಿ ನಾವು ಮುಖ್ಯವಾಗಿ ಗಮನಿಸಬಹುದಾದದ್ದು, ಈ ಎಲ್ಲ ಹೆಸರುಗಳ ಲಾವಣಿಕಾರ ಒಬ್ಬನೇ ವಿನಃ ಬೇರೆ ಬೇರೆ ಅಲ್ಲ ಎಂಬ ನಿರ್ಧಾರಕ್ಕೆ ಬರಬೇಕು.

ಎಲ್ಲವನ್ನು ಕೊಟ್ಟು ತನ್ನನ್ನೇ ಮರೆಯಾಗಿಟ್ಟು ಜಾನಪದ ಲೋಕದಲ್ಲಿ ಅನೇಕ ಕವಿಗಳು ಹೂತು ಹೋಗಿರುವ ಸಾಧ್ಯತೆಗಳು ಹೆಚ್ಚು. ಇಂದಿಗೂ ಗೀಗೀ ಪದಗಳ ಮೂಲಕ ಜೀವಂತವಾಗಿರುವ ಅನೇಕ ಅಜ್ಞಾತ ಕವಿಗಳಲ್ಲಿ ಮಲಾಬಾದಿ ಮಲ್ಲಣ್ಣನ ಹೆಸರು ಅಗ್ರಗಣ್ಯ. ಅನಕ್ಷರಸ್ಥ. ಆತನ ಕವಿ ಪ್ರತಿಭೆ ಅದ್ವಿತೀಯವಾದುದು. ನೀರು ಕುಡಿಯಲು ಗ್ರಾಮದ ಜನ ಬಳಸುತ್ತಿದ್ದುದು ಗೌಡರ ಬಾಳೆತೋಟದ ಬಾವಿಯನ್ನೆ. ಗ್ರಾಮೀಣರ ಬಾಳೆತೋಟದ ಬಾವಿಯಿಂದ ಮಲ್ಲಣ್ಣನು ದಿನನಿತ್ಯ ತನ್ನ ಮನೆಗೆ ನೀರು ಹೊರಲೆಬೇಕು. ''ನೀರಿನ ಕೊಡ ಹೊತ್ತು ನೀರು ತರುವಾಗ ತುದಿನಾಲಿಗೆಯ ಮೇಲೆ ರಚಿತವಾಗುತ್ತಿದ್ದ ಪದಗಳಿಗೆ ಲಖಿತರೂಪ ನೀಡುತ್ತಿದ್ದವರು ಕುಳ್ಳೊಳ್ಳಿ ಶಿವಬಸು, ಶೆಟ್ಟರ ಶಿವರುದ್ರ, ಲಿಖಿತ ರೂಪ ಪಡೆದ ಪದಗಳಿಗೆ ಪ್ರಾಸ ಹೊಂದಿಸುವದು ಸಂಗಯ್ಯನವರ ದಿನನಿತ್ಯದ ಕಾಯಕವಾಗಿತ್ತು.''[೧] ಮಲ್ಲಣ್ಣ ವಸ್ತಾದರು ಅಂತರಂಗವನ್ನು ತಮ್ಮ ಕಾವ್ಯದ ಮೂಲಕ ತೆರೆದಿಟ್ಟವರು. ಎಲ್ಲವನ್ನು ಸಮರ್ಪಿಸಿ ತ್ಯಾಗಿಯಾದವರು. ಇಂತಹ ಮಹಾನ್ ಚೇತನದ ಉಸಿರು ಗೀಗೀ ಪದಗಳ ಮೂಲಕ ದಿನನಿತ್ಯ ಪಸರಿಸುತ್ತಿದೆ. ಆದರೆ ಅವನ ಪದಗಳಿಗೆ ಇಂದಿಗೂ ಗಟ್ಟಿಯಾದ ಗ್ರಾಂಥಿಕ ನೆಲೆ ಸಿಕ್ಕಿಲ್ಲ. ಅದು ವಿಧಿ ವಿಪರ‍್ಯಾಸವೂ ಹೌದು. ಲಿಖಿತ ಗ್ರಂಥ ಸಂಪತ್ತು ವಸ್ತಾದರ ಧರ್ಮಪತ್ನಿ, ಮಡದಿ ರುಕ್ಮಿಣಿಯವರ ಅಜ್ಞಾನವೋ ಬಡತನದ ಸಲುವಾಗಿಯೋ ಚೆಲ್ಲಾಪಿಲ್ಲಿಯಾಯಿತು. ಕೇವಲ ಹೊಟ್ಟೆಗಾಗಿ ಗೆಣಸಿನಕಾಯಿ ಕೊಟ್ಟವರಿಗೋ, ಐವತ್ತು ರೂಪಾಯಿಗಳಿಗೋ ಮಾರಾಟವಾಯಿತು. ಹೀಗೆ ಮಾರಾಟವಾಗುತ್ತಿರುವದನ್ನು ಅಂದು ಕಂಡವರು ಹೇಳುತ್ತಿರುವದನ್ನು ಕೇಳಿದರೆ ಅಯ್ಯೋ ಎನಿಸುತ್ತದೆ. ಇದರಿಂದಾಗಿಯೇ ಇಂದು ವಸ್ತಾದರ ಸ್ವರಚಿತ ಲಾವಣಿಗಳು ಬೇರೆಯವರ ರಚನೆಗಳಾಗಿ ತೋರುತ್ತಿವೆ. ಸಾಕಷ್ಟು ಅಗಾಮು ಹಾಕುವಲ್ಲಿ ಬದಲಾವಣೆ ಕಂಡಿವೆ. ಇದು ನಿಜಕ್ಕೂ ಕವಿಯೊಬ್ಬನಿಗೆ ಬಗೆಯುವ ಪರಮದ್ರೋಹವಾಗಿದೆ.

ಉದಾ:-ಸಿಂಧೂರ ಲಕ್ಷ್ಮಣನ ಚರಿತ್ರೆ ಸಾರುವ ಹಾಡು ಮೂಲ ಮಲ್ಲಣ್ಣನದೆ ಆಗಿರಬೇಕು ಎಂದೆನಿಸುತ್ತದೆ, ಕ್ಷೇತ್ರ ಕಾರ್ಯದಿಂದ, ದೊರೆತ ಮಾಹಿತಿ ಈ ಅಂಶದವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ.

- ★ ಸಿಂಧೂರ ಮಲಾಬಾದಕ್ಕೆ ಅತೀ ಸಮೀಪದಲ್ಲಿದೆ.
- ★ ಜತ್ ಸಂಸ್ಥಾನವು ಮಲಾಬಾದದಿಂದ ಸಮೀಪದಲ್ಲಿದೆ.
- ★ ಸಿಂಧೂರ ಲಕ್ಷ್ಮಣನ ಖ್ಯಾತಿ ಇಲ್ಲಿ ಪ್ರತಿ ಮನೆಯಲ್ಲೂ ಜನಜನಿತ.
- ★ ಕವಿಯು ಈ ಪರಿಸರದವನು.
- ★ ಸಿಂಧೂರು ಲಕ್ಷ್ಮಣನ ಘಟನೆಯನ್ನು ಅತೀ ಸಮೀಪದಿಂದ ಕೇಳಿದ್ದಾನೆ ಇಲ್ಲವೆ ನೋಡಿದ್ದಾನೆ.
- ★ ಸಿಂಧೂರು ಲಕ್ಷ್ಮಣನ ಸೋದರಳಿಯಂದಿರು ಅಥಣಿ ತಾಲೂಕಿನ ರಡ್ಡೇರಟ್ಟಿಯವರು.
- ★ ಅವರು ಮಾಡಿದ ಘಟನಾವಳಿಗಳು ಪ್ರತ್ಯಕ್ಷ ಸಾಕ್ಷಿಯಾಗಿವೆ.
- ★ ಜತ್ ಸಂಸ್ಥಾನದ ಸರ್ಕಾರನು ಈ ಹಾಡನ್ನು ಕೇಳಿದ ಮೇಲೆ ಮಲ್ಲಣನಿಗೆ ಉಂಬಳಿಯಾಗಿ ವಜ್ರವಾಡ ಸಮೀಪದ ಸುಮಾರು ೩೧ ಏಕರೆ ಜಮೀನನ್ನು ನೀಡಲು ಮುಂದಾಗಿದ್ದುದು.
- ★ ಮಲ್ಲಣ್ಣ ವಸ್ತಾದರು ಅದನ್ನು ನಯದಿಂದ ತಿರಸ್ಕರಿಸಿದ್ದು.
- ★ ನಾನು ಜತ್ ಕಡೆಗೆ ಬಂದಾಗ ನನಗೆ ಗೋಧಿ, ಜೋಳ ಕೊಟ್ಟರೆ ಸಾಕೆಂದುದು ಕವಿಯ ತ್ಯಾಗತನವನ್ನು ಪ್ರದರ್ಶಿಸುತ್ತದೆ.

ಈ ಎಲ್ಲ ಅಂಶಗಳು 'ಸಿಂಧೂರ ಲಕ್ಷ್ಮಣ' ಪದ ರಚಿಸಿದ್ದು ಮಲ್ಲಣ್ಣನೇ ಇರಬೇಕು ಎಂದು ಆಧಾರ ಸಮೇತ ಪ್ರಸ್ತಾಪಿಸುತ್ತವೆ. ಆದರೆ ಹಾಡಿನಲ್ಲಿ ಈಗ ಕೇಳತಕ್ಕ ಆಗಾಮು ಬಿದರಿಯವರಾದ್ದಾಗಿದ್ದರಿಂದ ಅದರ ಮೂಲ ರಚನಾಕಾರ ಯಾರು ? ಎಂಬುದು ಬಗೆ ಹರಿಸಲಾರದ ಪ್ರಶ್ನೆಯಾಗಿದೆ.

ಕಾಲ

"ಮಲ್ಲಣ್ಣನ ಜೀವಿತ ಅವಧಿಯನ್ನು ೧೮೩೦-೧೯೦೦ ಎಂದು ಉಲ್ಲೇಖಿಸಲಾಗಿದೆ." [೨] ಮಲ್ಲಿಕಾರ್ಜುನನ ದೇವರ ಗುಡಿ ನಿರ್ಮಾಣವಾದದ್ದು ೧೯೫೫ ರ ಸಮಯದಲ್ಲಿ. ಗುಡಿ ಕಟ್ಟಿದ ನಂತರ ಮಲ್ಲಣ್ಣ ವಸ್ತಾದ ಬದುಕಿದ್ದ ಬಗ್ಗೆ ವಿವರ ಸಿಗುತ್ತದೆ.

ಮಲ್ಲಣ್ಣನವರ ವಂಶಾವಳಿ

ಮಲ್ಲಣ್ಣ ರುಕ್ಮಿಣಿ

ದುಂಡಪ್ಪ ಬಸಪ್ಪ ಶಿವಪ್ಪ ಬೌರವ್ವ ಈರವ್ವ ಸಾಂಯವ್ವ

ಮಲಾಬಾದದಲ್ಲಿ ತನ್ನ ಸಾಹಿತ್ಯ ನಶಿಸಿ ಹೋಗುತ್ತಿರುವುದನ್ನು ಕಂಡು ತನ್ನ ಕೊನೆಗಳಿಗೆಯಲ್ಲಿ ದುಃಖಿಸಿದ್ದುಂಟು. ತಮ್ಮ ಆಪ್ತರೆದುರು ಸಭೆಗಳಲ್ಲಿ ಹೇಳುತ್ತಿದ್ದ ಈ ಕೆಳಗಿನ ಮಾತಿನಿಂದ ಅವರೆಷ್ಟು ನೊಂದಿದ್ದರು ಎಂಬುದು ತಿಳಿಯುತ್ತದೆ.

''ಮಲಾಬಾದ್ಯಾಗ ಶ್ರೀಗಂಧ ಬನಾನ ಐತಿ ಈ ಬನದಾನ ಶ್ರೀಗಂಧ ತೇದು ಹಣೆಗಿ ಹಚ್ಚಿಕ್ಕೊಳ್ಳುವವರ ಇಲ್ಲ. ಎಲ್ಲಾರು ಶ್ರೀಗಂಧ ಸುಟ್ಟ ಇದ್ದಲಿ ಮಾಡಾವ್ರ ಅದಾರ' ಎಂತಹ ಮಾರ್ಮಿಕವಾದ ಮಾತು ಅದು ವಸ್ತುತಃ ಅಷ್ಟೇ ಸತ್ಯವಾದುದು.''[೩]

'' ಜಾತ್ರೆಗಳೆಂದರೆ ಜನಪದರಿಗೆ ಎಲ್ಲಿಲ್ಲದ ಸಂತೋಷ ಮತ್ತು ಸಂಭ್ರಮಗಳನ್ನು ತಂದು ಕೊಡುವ ದಿನಗಳು ರೈತ ವರ್ಗದ ಜನ ತಮ್ಮ ರಾಶಿಯ ಇಕ್ಕಲಗಳೆಲ್ಲವೂ ಮುಗಿದ ಮೇಲೆಯೇ ಜಾತ್ರೆಗಳು ಆರಂಭವಾಗುತ್ತವೆ. ಜಾತ್ರೆಯಲ್ಲಿ ಯಾವುದೇ ರೀತಿಯ ಮನೋರಂಜನೆಗೆ ತಾತ್ಸಾರ ತೋರುವಂತಿಲ್ಲ. ಒಂದು ವೇಳೆ ತೋರಿದರೂ ಗೀಗೀ ಹಾಡುಕಾರಿಕೆ ನಡೆಯುವದು ಮಾತ್ರ ಕಡ್ಡಾಯ''[೪] ಈ ಮಾತು ಮಲಾಬಾದಿಗೂ ಅನ್ವಯಿಸುತ್ತದೆ.

ಮಲಾಬಾದ ಮಲ್ಲಿಕಾರ್ಜುನ ದೇವರ ಐದೇಶಿ ಪ್ರಸಿದ್ದವಾದುದು. ಗುರುವಾರ ಆರಂಭವಾದರೆ ಮಂಗಳವಾರ ತನಕ ಆರು ದಿನಗಳ ಕಾಲ ಕಾರ್ಯಕ್ರಮಗಳು ಎಡಬಿಡದೆ ನಡೆಯುತ್ತವೆ. ಈ ಕಾರ್ಯಕ್ರಮದ ಮಧ್ಯದ ದಿನ ಪ್ರತಿವರ್ಷ ಗೀಗೀ ಪದಗಳದ್ದೇ ದರ್ಬಾರು. ಒಂದು ಊರಿನ ಸಾಂಸ್ಕೃತಿಕ ಪ್ರತೀಕವಾಗಿ ಹಬ್ಬ ಆಚರಣೆಯಾದರೆ ಅದರ ನಿಮಿತ್ಯ ನಡೆಯುವ ಗೀಗೀ ಪದ ಹಾಡು ಹಾಡುಗಾರಿಕೆ ಸಾಹಿತ್ಯಕವಾಗಿಯೂ ಮಹತ್ವದ್ದು.

ಮಲ್ಲಣ್ಣ ವಸ್ತಾದರದು ಗೀಗೀ ಹಾಡುಗಾರಿಕೆಯ ಮೇಳ ಒಂದಿತ್ತು ಎಂಬುದು ತಿಳಿದು ಬರುತ್ತದೆ. ತಾವು ಪ್ರಮುಖ ಹಾಡುಗಾರರಾಗಿ ಕಾಣಿಸಿಕೊಳ್ಳುತ್ತಿದ್ದರು. ಅವರ ಕೈಯಲ್ಲಿ ಡಪ್ಪ ಇರುತ್ತಿತ್ತು. ಸಿದ್ದಪ್ಪನ ಕೈಯಲ್ಲಿ ತುಂತುಣಿ ಇದ್ದರೆ ಬಾಬು ಕುಂಬಾರನ ಕೈಯಲ್ಲಿ ತಾಳಗಳಿರುತ್ತಿದ್ದವು.

ಮಲ್ಲಣ್ಣ (ಡಪ್ಪ)

ಬಾಬು(ತಾಳ) ಸಿದ್ದಪ್ಪ (ತುಂತುಣಿ)

ಗೌಡರ ಬಾಳೆಯ ತೋಟ ಮನೆಯಿಂದ ನಾಲ್ಕಾರು ಹೆಜ್ಜೆಗಳಷ್ಟೇ ದೂರ. ಅಲ್ಲಿಂದ ನೀರು ತಂದು ಮನೆಯಲ್ಲಿಯ ಹರಿವೆ ತುಂಬ ಬೇಕಾಗುತ್ತಿತ್ತು. ಮನೆಯ ಎದುರಿನಲ್ಲೆಯೇ ಇದ್ದ ಸಂಗಯ್ಯನವರು ಅಂದು ಅಕ್ಷರ ಬಲ್ಲ ಕೆಲವೇ ಜನರಲ್ಲಿ ಪ್ರಮುಖರು. ಪಂಚಾಂಗ, ಜ್ಯೋತಿಷ್ಯದಲ್ಲಿ ಬಹಳಷ್ಟು ಪರಿಣಿತಿ ಸಾಧಿಸಿದ್ದರು. ಸಾಹಿತ್ಯಾಸಕ್ತರು ಆಗಿದ್ದರು. ಅನಕ್ಷರಸ್ಥ ಮಲ್ಲಣ್ಣನಿಗೆ ಕಾವ್ಯ ಕಟ್ಟುವ ಕಲೆ ಸಿದ್ಧಿಸಿತ್ತು. ಸಂಗಯ್ಯನವರಿಗೆ ಅಕ್ಷರವಿದ್ಯೆ ಗೊತ್ತಿತ್ತು. ಹೀಗೆ ಇವರಿಬ್ಬರ ಒಡನಾಟ ಲಾವಣಿಗಳ ಹುಲುಸಾದ ಬೆಳೆ ಬರಲು ಕಾರಣವಾಯಿತು.

ಸಂಗಯ್ಯನವರ ಸಮಾಧಿ ಹಾಗೂ ಮಲ್ಲಣ್ಣನ ಸಮಾಧಿಯನ್ನು ಮಲಾಬಾದ ಗ್ರಾಮದಲ್ಲಿ ಕಾಣಬಹುದಾಗಿದೆ. ಕವಿ ಮಲ್ಲಣ್ಣನು ವಾಸಿಸುತ್ತಿದ್ದ ಮನೆ ಸಂಪೂರ್ಣ ಹಾಳಾಗಿದೆ. ಸಂಗಯ್ಯನವರ ಮನೆಯೂ ಬಿದ್ದು ಹೋಗಿದೆ. ಅವರಿಬ್ಬರ ಭಾವಚಿತ್ರಗಳಾಗಲೀ, ಗುರು ಪರಂಪರೆಯ ಕುರಿತಾಗಾಲಿ ಮಾಹಿತಿ ಲಭಿಸುವದಿಲ್ಲ. ಇವರ ರಚನೆಯ ಮೇಲೆ ಅಕ್ಷರ ಹೊಂದಿಸುತ್ತಿದ್ದ ಸಂಗಯ್ಯನವರ ಪ್ರಭಾವ ಬಹಳಷ್ಟು ಆಗಿರುವದು ತಿಳಿಯುತ್ತದೆ. ಮಲ್ಲಣ್ಣನದು ತುಂಬ ಸೂಕ್ಷ್ಮ ಅವಲೋಕನ ಬುದ್ಧಿಯಿತ್ತು. ಹಾಗೇ ಇದ್ದುದರಿಂದಲೇ ಇವನು ಅಂದಿನ ಎಲ್ಲ ಘಟನಾವಳಿಗಳನ್ನು ತನ್ನ ಲಾವಣಿಗಳ ತೆಕ್ಕೆಗೆ ಸೇರಿಸಿಕೊಂಡಿದ್ದಾನೆ. ಮಲಾಬಾದದ ಬಲಭೀಮನ ಪರಮಭಕ್ತ. ಮಲ್ಲಿಕಾರ್ಜುನ ಇವನ ಆರಾಧ್ಯ ದೈವ. ಊರ ಮುಂದಿನ ಹಳ್ಳ ಇವನ ಕಾವ್ಯ ಶಕ್ತಿಗೆ ಸೆಲೆಯಾಗಿದೆ. ಗೂಗವಾಡ ಮಲಾಬಾದ ಪೂರ್ವಕ್ಕೆ ಎರಡು ಕಿ. ಮೀ ಅಂತರದಲ್ಲಿರುವ ಜತ್ತ ತಾಲೂಕಿನ ದಕ್ಷಿಣದ ಕೊನೆಯ ಹಳ್ಳಿ. ಅಲ್ಲಿಯ ಹುಚ್ಚಯ್ಯ ಸ್ವಾಮಿ ಆ ಭಾಗದ ಮತ್ತೊಬ್ಬ ಪ್ರಸಿದ್ಧ ಲಾವಣಿ ಕವಿ.

ಮಹಾರಾಷ್ಟ್ರದ ಸಂಖದ ಹುಚ್ಚಯ್ಯ ಸ್ವಾಮಿಗಳು ತಮಗೆ ಹಾಡು ಕೇಳಿಸಿ ಕೊಳ್ಳಬೇಕು ಎಂದಾಗಲೆಲ್ಲ ಮಲಾಬಾದಕ್ಕೆ ಬಂದು ತಳವಾರ ಓಣಿಯಲ್ಲಿ ಹಾಡುಗಾರಿಕೆಗೆ ವೇದಿಕೆಯನ್ನು ನಿರ್ಮಿಸುತ್ತಿದ್ದರು. ಇಲ್ಲಿ ಹಾಡು, ಅದು ಒಳಗೊಂಡಿರುವ ವಸ್ತುವಿನ ಕುರಿತು ಸುದೀರ್ಘ ಚರ್ಚೆ ನಡೆಯುತ್ತಿತ್ತು. ಒಂದರ್ಥದಲ್ಲಿ ಅದು ಲಾವಣಿ ಕಾವ್ಯಗಳ ವಿಮರ್ಶಾ ಗೋಷ್ಠಿಯೇ ಸರಿ. ಅಲ್ಲಿ ಅವರೆಲ್ಲ ಸೇರಿ ಲಾವಣಿಗಳನ್ನು ವಿಮರ್ಶೆಗೆ ಒಡ್ಡುತ್ತಿದ್ದರು.

ಮಲ್ಲಣ್ಣ ಕವಿಯ ಲಾವಣಿಗಳಿಗೆ ಒಳಗಾಗದ ವಸ್ತುವೇ ಇಲ್ಲ. ಆತ ಹುಟ್ಟುಕವಿ. ಸರ್ವಜ್ಞ ನಂತೆ ತಾನು ಕಂಡುಂಡ ಎಲ್ಲ ಅನುಭವಗಳನ್ನು ಲಾವಣಿಗಳನ್ನಾಗಿಸಿದ ಶಕ್ತಿ ಅವನದು.

ನಮ್ಮಲ್ಲಿ ಪಡಿತರ ವ್ಯವಸ್ಥೆ ಬಂದ ಹೊಸ ಸಂದರ್ಭ. ಆ ಕಾಲಕ್ಕೆ ಅದೊಂದು ಸರಕಾರದ ಸಾಧನೆ ಎಂಬುದೇ ಸರ್ಕಾರದ ಭಾವನೆ. ತಮ್ಮ ಶಾಸಕನಾದ ಮಲಾಬಾದದ ಎಸ್. ವಾಯ್. ಪಾಟೀಲರು ಈ ಪಡಿತರ ವ್ಯವಸ್ಥೆಯನ್ನು ಗ್ರಾಮದಲ್ಲಿ ಅಳವಡಿಸಿದರು. ಕೃತಜ್ಞತೆಯ ಸ್ಮರಣೆಗಾಗಿ ಮಲ್ಲಣ್ಣ ಲಾವಣಿ ಒಂದನ್ನು ನಿರ್ಮಿಸಿದ್ದಾನೆ. ಈ ಲಾವಣಿ ಆ ಕಾಲದ ಪಡಿತರ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ.

''ನಮ್ಮ ಊರ ಎಸ್. ವಾಯ್. ಪಾಟೀಲ
ಇಲೆಕ್ಷನಕ ಆರಿಸಿ ಬಂದಾರ ಕಾಂಗ್ರೇಸಕ
ಸರ್ಕಾರದಿಂದ ಹುಕುಮ ತಂದಾರ
ಕಂಟ್ರೋಲ್ ಮಾಡಿಕೊಂಡ ಮನಸ್ಯಾರಿಗಿ । ಮೂರ
ಕೊಳವಿಯಂತೆ ಹುಕುಮ ಕೊಟ್ಟಾರ ''.

ಮಲಾಬಾದ ಒಂದು ಬಡಗ್ರಾಮ. ಅಲ್ಲಿರುವ ಬಹುಪಾಲು ಜನರು ಬಡವರು. ನೀರಾವರಿ ಸೌಲಭ್ಯವಿಲ್ಲದ ಗುಡ್ಡಗಾಡು ಪ್ರದೇಶ. ರೈತ ಕಷ್ಟ ಪಟ್ಟು ದುಡಿದಾಗ ಮಾತ್ರ ಅಲ್ಪಸ್ವಲ್ಪ ಬೆಳೆ ಬರುವದು. ಹೀಗಾಗಿ ಬಡತನದ ದಟ್ಟ ಅನುಭವ ಮಲ್ಲಣ್ಣ ಕವಿಗಿತ್ತು. ಆ ಕಾಲದಲ್ಲಿ ಹೊಸದಾಗಿ ಜಾರಿಗೆ ಬಂದ ಪಡಿತರ ವ್ಯವಸ್ಥೆ ಬಡವರ ಪಾಲಿಗೆ ಬಂಗಾರವಾಯಿತು.

ಮಲಾಬಾದ ಹಳ್ಳಕ್ಕೆ ನೀರು ಬರುವುದು ಮಹಾರಾಷ್ಟ್ರದ ಎಳಧರಿ, ಬಿಳ್ಳೂರ, ಬಸರಗಿ, ಗೂಗವಾಡ ಹಾಗೂ ವಜ್ರವಾಡದ ಗುಡ್ಡ ದಿಂದ. ನೀರು ಬರುವಾಗ ಅದು ಅಲ್ಲಲ್ಲಿ ಅನಾಹುತ ಮಾಡಿಕೊಂಡು ಬರುತ್ತಿತ್ತು. ಅಂದಿನ ಕಾಲಕ್ಕೆ ಬಸರಗಿಯ 'ಡಾಕ್ಟರ ಒಡ್ಡು' ಬಹಳಷ್ಟು ನೀರು ಹಿಡಿಯುತ್ತಿತ್ತು. ಸಾಕಷ್ಟು ಮಳೆ ಸುರಿದು, ಆ ಒಡ್ಡು ಒಡೆಯಿತು. ಅತೀವೃಷ್ಟಿಯಿಂದ ಪರಿಸರ ಕೊಚ್ಚಿಕೊಂಡು ಹೋಗುವ ನಿಸರ್ಗ ದುರಂತ ಚಿತ್ರವೊಂದನ್ನು ಕಟ್ಟಿ ಕೊಡುವಲ್ಲಿ ಮಲ್ಲಣ್ಣನ ಪ್ರತಿಭೆಯ ಥಾಳ ಪ್ರದರ್ಶಿತವಾಗಿದೆ.

'' ಪಾಪಭಾಳ ಆಗೇತಂತ ಭೂಮಿತಾಯಿ
ಮಾದೇವನಲ್ಲಿ ಸೆರಗ ಒಡ್ಡ್ಯಾಳ,
ಕೊಟ್ಟಿನಂತ ಹೇಳಿ ಹುಕುಮ ಕೊಟ್ಟಾನ.
ಮೂರ ತಾಸ ರಾತ್ರಿ ಮ್ಯಾಲ ಜತ್ತಿ ।

ಗುಡ್ಡಕ ಡೇರೆ ಹೊಡದಾಳ, ಮಳಿ ಹಂಗ ।

ಮ್ಯಾಲ ತಾಳ ಹಿಡಿದಿತ್ತ। ಪಕ್ಕಾ ಸೇರಿನಷ್ಟ ।

ಕಲ್ಲ ದಿಕ್ಕ ತಪ್ಪ್ಯಾವ'' ಸಂಸ್ಥಾ ಬಿಟ್ಟಾಳ ನಾರಿ,

ನಡಿಗಿ ಕಟ್ಯಾಳ ಬಾರಗಿ ಎರಡು ದಂಡಿ ಹಿಡಿದ ।

ಓಡಕೋತ ಬಂದಾಳ. ಸಡ್ಡ ಹೊಡೆದ ।

ಸಂಕೇಶ್ವರ ಬಸರಗಿ ಹಳ್ಳಕ ।

ಪತ್ತರ ಕಳಿಸಿತ್ತ ಬನ್ನಿ ತಡಿ ಅಂತ ಉತ್ತರ ಕಳಿಸ್ಯಾಳ''

ಹೀಗೆ ಮುಂದುವರೆಯುವ ಪದ್ಯದಲ್ಲಿ 'ದಿನ್ನ ಹಾಕಿ ಡಾಕ್ಟರ ಒಡ್ಡ ಒಡದಾರ' ಎನ್ನುವ ಮಾತು ಗಂಭೀರ ಪರಿಣಾಮವನ್ನು ಸಾರುತ್ತದೆ.

''ಬಾರಕ ಬಂದ ಬಾಳಿಗಿಡ, ಏರಮಾರ ಮೆಣಸಿ ಫಡಾ ಕಿತ್ತ ಒಗದಾಳ'' ಎಂದು ಮುಂದುವರೆಯುವವಲ್ಲಿ ಅದು ಮಾಡಿದ ಅನಾಹುತ ಸ್ಪಷ್ಟವಾಗಿ ಗೋಚರಿಸುತ್ತದೆ. ಎರಡು ಹಳ್ಳಗಳು ಸೇರುವ ಕೂಡಲದಲ್ಲಿ ಮಲಾಬಾದ ಮಠದ ' ಗಂಗವ್ವಾ ಆಯಿ ಆರತಿ ಮಾಡ್ಯಾಳ, ಸಾಕ ತಾಯಿ ಜನಾ ಸಾಯ್ತಾರಂತ ಕೈ ಮುಗದಾಳ'' ಆದರೂ ಆರ್ಭಟ ಕಡಿಮೆಯಾಗಲಿಲ್ಲ. ಕಿರಣಗಿಯ ಸಂಗಮೇಶ್ವರನ ಬಳಿ ಬಂದಾಗ '' ಪಾಪ ಮಾಡಿದಿ ಮುಟ್ಟಬ್ಯಾಡ ಅಂದಾನು'' ಎಂದಾಗ ಮುಂದೆ ' ಅಘರಣೆ' ಯನ್ನು ಸೇರುತ್ತದೆ.

ಮಲ್ಲಣ್ಣ ಕವಿಯ 'ಮೇದಾರ ಕೇತಯ್ಯ' ತುಂಬ ಪ್ರಸಿದ್ದವಾದ ಲಾವಣಿ

'' ಮೋಟರ ಬಂಕಯ್ಯ, ಮೇದಾರ ಕೇತಯ್ಯ।

ಹೊನ್ನ ನೋಡುವರಲ್ಲ ಕಣ್ಣ ತೆರೆದು । ಶಿವಬಂದ ಇಳಿದ

ನಿತ್ಯ ಕಾಲ ಗುಡ್ಡಕ ಹೋಗುವರ। ಬಿದರ ತಂದ ದುರಡಿ ಮಾಡುವರ ।'' ಎಂದು ಆರಂಭವಾಗುವ ಈ ಲಾವಣಿ ಮೇದಾರ ಕೇತಯ್ಯನ ಕಾಯಕದ ಸೂಕ್ಷ್ಮಾತಿ ಸೂಕ್ಷ್ಮ ನೆಲೆಗಳನ್ನು ಒಂದೊಂದಾಗಿ ಬಿಚ್ಚಿಡುವದು ಇದರ ವೈಶಿಷ್ಟ್ಯ.

ಮಲ್ಲಣ್ಣ ಕವಿಯ ಬದುಕಿನ ಕಾಲ ಸ್ವಾತಂತ್ರ್ಯ ಹೋರಾಟದ್ದು. ನಮ್ಮ ಸ್ವಾತಂತ್ರ್ಯ ಚಳುವಳಿಯ ಸೇನಾನಿಯಾಗಿದ್ದ ಮಹಾತ್ಮಾಗಾಂಧಿ ಕೂಡ ಮಲ್ಲಣ್ಣನ ಲಾವಣಿಗೆ ವಸ್ತುವಾಗುತ್ತಾನೆ.

'' ರಾಷ್ಟ್ರಕ್ಕೆಲ್ಲಾ ತಂದಿಯಾದ ಮಹಾತ್ಮಾ ಗಾಂಧೀಯವರು।

ಸೃಷ್ಟಿಯನ್ನು ಬಿಟ್ಟು ಹ್ವಾದ್ರ ಕೈಲಾಸಕ।

ಬಿಳಿಪಂಜಾ ಉಟಕೊಂಡು, ಬಕ್ಕನೆತ್ತಿ ಬಿಟ್ಟಕೊಂಡು

ಎರಡು ಮೊಮ್ಮಕ್ಕಳ ಮ್ಯಾಲ ಕೈ ಇಟ್ಟಿದ್ದರ '' ಎನ್ನುವಲ್ಲಿ ೧೯೪೮ ರಲ್ಲಿ ನಾಥುರಾಮ ಗೋಡ್ಸೆಯಿಂದ ಹತರಾದ ಮಹಾತ್ಮಾ ಗಾಂಧೀಜಿಯವರ ದುರಂತ ಮರಣದ ಚಿತ್ರವನ್ನು ನೋಡುತ್ತದೆ.

ಸಿಂಧಿ, ಸಾರಾಯಿ, ಬಡವರ ಬದುಕನ್ನು ಅಂದಿನಿಂದ ಇಂದಿನವರೆಗೂ ಅಲ್ಲೋಲ ಕಲ್ಲೋಲ ಮಾಡಿರುವುದು ಸತ್ಯದ ಹಾಗೂ ದುರ್ದೈವದ ಸಂಗತಿ. ಕವಿ ಮಲ್ಲಣ್ಣ ಸಾರಾಯಿಯ ಸಾಮಾಜಿಕ ದುರಂತವನ್ನು ಅಭಿವ್ಯಕ್ತ ಪಡಿಸುತ್ತಾನೆ.

'' ನೆರದ ಕುಳಿತಿರುವಂಥ ನನ್ನ ಪರಮ ।

ಹಿರಿಯ ಕಿರಿಯರಿಗೆಲ್ಲ ಶರಣ ಮಾಡಿ

ಸಾರುವೇನ ತರುಳನಂತೆ ನಾ।

ದುರುಳ ಶೆಂ ಶೆಂದಿ, ಗಾಂಜಿ ಅಪು ಶರಿ ವ್ಯಸನಾ ।

ಮಾಡ ಬ್ಯಾಡರಿ ನೀವು ಇಂಥ ಮದ್ಯ ಪಾನವಾನಾ ।

ಮಾನವಧರ್ಮ ಬಿಟ್ಟು ದಾನವರಂತಾ ಹೇಸಿ ಕೃತ್ಯವನಾ

ನಾಟಕ ಮಾಸ್ತರ ಮ್ಯಾನೇಜರಿ ಗಾಯನ ಥಾಟ

ಆಗಲೆಂತ ಮೈಯ್ಯಾನ ಕೋಟ ಒತ್ತಿ ಇಟ್ಟ

ಹಾಗೇ ಕುಡದೇ ಕುಡಿಯುವರಾ । ಪಾತ್ರದವರ ಮ್ಯಾಲೆ

ಅಲ್ಲಿ ಮಾಡುವರು ಕಾರಬಾರಾ । ಅಂದಿನಿಂದ ಇಂದಿನವರೆಗೂ

ಮೊಟರ ಜನರು ಶೆರಿ ಕುಡಿದು ಮೊಟರ ಅಲ್ಲಿ ಬಿಟ್ಟುಬಿಡುವರು ।

ಕುಡಿಸ್ತನಾ ಫಾಡ ಇತ್ತ ಕುಡದ ಮ್ಯಾಲೆ ಬ್ಯಾರೆ ಆತು ।

ಮುಂದ ನಾಲ್ಕ ಹಾದಿ ಕಾಣಸೇ ಕಾಣಸುದು ।

ಮುಂದ ಬಂದ ಗಿಡಾದನಾ ಮಂದಿ ಕಬರ

ಇಲ್ಲದ ಮೋಟರ ಬಿಡುವರು । ಮೋಟರ ಒಗ್ಗಾಲಿ ಹೊಡಸುವರು ॥.

ಈ ಲಾವಣಿಯಲ್ಲಿ ಕವಿಯ ಸಾಮಾಜಿಕ ಕಳಕಳಿ ವ್ಯಸನಾಧೀನ ಮನುಷ್ಯರ ಅವನತಿ ಆ ಮೂಲಕ ಸಾಮಾಜಿಕ ಉನ್ನತೀಕರಣ ಆಶಯ ಎಲ್ಲವೂ ಸಶಕ್ತವಾಗಿ ಅಭಿವ್ಯಕ್ತಗೊಂಡಿವೆ. ಮಲಾಬಾದ ಸಮೀಪದ ಮತ್ತೊಂದು ಊರು ಬಿಳ್ಳೂರು. ಅಲ್ಲಿಯ ಗುರುಬಸಯ್ಯಾ ಸ್ವಾಮಿಗಳು, ಅಥಣಿಯ ಶಿವಯೋಗಿಗಳು, ಹಾನಗಲ್ಲ ಕುಮಾರ ಸ್ವಾಮಿಗಳು ಆ ಕಾಲದ ವಿರಕ್ತ ತ್ರಿಮೂರ್ತಿಗಳು. ಉತ್ತರ ಕರ್ನಾಟಕದಲ್ಲಿ ಮನೆ ಮಾತಾದವರು. ಅಂತವರ ಪೂಜನೀಯ ವ್ಯಕ್ತಿತ್ವವನ್ನು ವರ್ಣಿಸುವ ಲಾವಣಿಗಳನ್ನು ಮಲ್ಲಣ್ಣ ಕವಿ ಬರೆದಿರುವದು ಅಶ್ಚರ್ಯವಲ್ಲ.

''ಬಿಳ್ಳೂರ ಊರ ಘಾಟ ।

ಮಾಸ್ವಾಮಿ ಮೆಟ್ಟ।

ಹಣಿ ಮ್ಯಾಲ ವಿಭೂತಿ ಪಟ್ಟ।

ಜರತರದ ಕಟ್ಟ, ।

ಜರತದಕಟ್ಟ ವಜ್ರದ ಹೊಳತ, ವಜ್ಜರದ ಹೊಳತ॥

ಕುಂಭ ಕರ್ಣನ ಅಳದಿ।

ರಾವಣನ ಸೆಳದಿ

ಪಾಂಡವರಲ್ಲಿ ದುಡದಿ ।

ಪಾಂಡವರಲ್ಲಿ ದುಡದಿ ನೀನೆ ರಘುನಾಥ, ನೀನೆ ರಘುನಾಥ '' ಎಂದಿದ್ದಾನೆ. ಹಾಗೆಯೇ ಅಥಣಿಯಲ್ಲಿ ಪ್ರಖ್ಯಾತಿ ಹೊಂದಿದ 'ಇಂಗಳಗಾಂವಿ' ಯ ಶ್ರೀ ಮುರುಘೇಂದ್ರ ಮಹಾಸ್ವಾಮಿಗಳು ಅಂದು ಪ್ರಖ್ಯಾತರು. ಅವರನ್ನು ಕುರಿತು ಕವಿ ಹೇಳುವ ಹಾಡು ಅಪರೂಪವಾಗಿದೆ.

'' ಹುಟ್ಟಿನ ಮುರಗೆಪ್ಪ ಸ್ವಾಮಿ ।

ಬಿಟ್ಟಾನ ಇಂಗಳಗಾಂವಿ । ಮೆಟ್ಟ ಮಾಡ್ಯಾರೋ ಅಥಣಿಯ।

ಮೆಟ್ಟ ಮಾಡ್ಯಾರ ಅಥಣಿಯ ಭಕ್ತರು ।

ಕಟ್ಟಿ ಕೊಟ್ಟಾರ ಮಠವ'' ಎಂದು ಹಾಡು ಆರಂಭವಾಗುತ್ತದೆ. ಇದೇ ಹಾಡಿನಲ್ಲಿ ಮಹಾಸ್ವಾಮಿಯವರು ಅಡವಿಯಲ್ಲಿ ಸಂಚರಿಸುವಾಗ ಹುಲಿ ನಮಸ್ಕರಿಸಿದ್ದು, ಅವರು ಆಶೀರ್ವದಿಸಿದ್ದು ಸ್ಪಷ್ಟವಾಗಿದೆ.

ಬ್ರಿಟಿಷರ ವಿರುದ್ಧ ದಂಗೆ ಎದ್ದ ವೀರನಾರಿ ''ಕಿತ್ತೂರ ಚೆನ್ನಮ್ಮ'' ಸ್ವಾತಂತ್ರ್ಯದ ಪ್ರತೀಕ. ಜನರ ಕಲ್ಯಾಣಕ್ಕಾಗಿ ದುಡಿದ ಅರಸು ಮನೆತನ. ಅವರ ಕುರಿತ ಬಂದ ಲಾವಣಿಗಳು ಸಾಕಷ್ಟು. ಕಿತ್ತೂರ ಚೆನ್ನಮ್ಮನ ಜನಾನುರಾಗಿ ಪ್ರೀತಿ, ದೇಶ ಪ್ರೇಮ, ಆಳುವ ನೀತಿ, ಮಲ್ಲಣ್ಣನ ಮೇಲೆ ಸಾಕಷ್ಟು ಪ್ರಭಾವ ಬೀರಿದೆ.

'' ಅನ್ಯ ಯಾರ ಕಾಟವಿಲ್ಲ।

ಇನ್ನೂ ಯಾರ್ದ ಹರಕತ ಇಲ್ಲ ।

ಹನ್ನೊಂದ ವರ್ಷ ರಾಜ್ಯ ಆಳತೀಳ ಹೆಣ್ಣ ಮಗಳ ।

ಹನ್ನೊಂದು ಹಳ್ಳಿ ಇನಾಮು ಹಾಕಿ ಕೊಡತಿನ ।

ಉಣ್ಣರೀ ಅಂದಾಳೋ ಹೆಣ್ಣು ಮಗಳ ಬ್ರಿಟೀಷರಿಗಿ ।

ಅದ ಕೇಳಿ ಸಾಹೇಬ ಕೋಪನಾದ । ಸಾರವಾಡಕ ನೌಕರಿ ಮ್ಯಾಲ ಇದ್ದ।

ಸಾಕಷ್ಟು ಸೈನ್ಯ ಕೂಡಿಸಿದ್ದ. ಕಿತ್ತೂರ ಸಂಸ್ಥಾನಕ ಮುತ್ತಿಗಿ ಹಾಕಿದಾರ ।

ಆಕಾಲಕ ರಾಣಿ ಅವರ ಮಂದಿರಕ ಬಂದಿದಾರ ।

ಗುರಿ ಹಿಡಿದ ಹಾಕಿದಾಳ ಗುಂಡ। ದಿಕ್ಕಿಲ್ಲದ ಓಡಿತ ಅವರ ದಂಡ '' ತುಂಬ ಸ್ವಾರಸ್ಯವಾಗಿ ಮೂಡಿ ಬಂದಿದೆ.

ಹೀಗೆ ವಸ್ತಾದ ಮಲ್ಲಣ್ಣನು ತಾನು ಕಂಡುಂಡ ಎಲ್ಲವನ್ನು, ಸಾಮಾಜದ ಅನಿಷ್ಠತೆ, ಹೋರಾಟ, ಜಾತೀಯತೆ, ದೇಶಪ್ರೇಮ, ಮಹಾತ್ಮಾರ ಕುರಿತು ಸಾಕಷ್ಟು ಲಾವಣಿ ರಚಿಸಿ ಯಶಸ್ವಿ ಲಾವಣಿಕಾರ ನಾಗಿದ್ದಾನೆ.

ಶಿವನೂರ ಗೋವಿಂದಗೂಳಿ

ಇವನು ಮೂಲತಃ ಅಥಣಿ ತಾಲೂಕಿನ ಶಿವನೂರ ಗ್ರಾಮದ ಕವಿ. ಪಂಚಲಿಂಗೇಶ್ವರನು ಶಿವನೂರಿನಲ್ಲಿ ನಲೆಯೂರಿದ್ದರಿಂದ ಶಿವನ ಊರು ಶಿವನೂರು ಆಯಿತು. ಊರ ಮುಂದೆ ಹರಿಯುವ ಅಗ್ರಾಣಿ ಕವಿಯ ಕಾವ್ಯ ಹುಟ್ಟಿಗೆ ಸ್ಫೂರ್ತಿ. ಅಕ್ಷರಸ್ಥನಾಗಿದ್ದರಿಂದ ಇವನ ರಚನೆಗಳು ಅನಕ್ಷರಸ್ಥ ಕವಿಗಳಿಗಿಂತ ಹೆಚ್ಚು ಶಿಷ್ಟವಾಗಿವೆ. ಪದ ಬಳಕೆ ಜನ ಸಾಮಾನ್ಯರಿಗೆ ಬೇಗ ಅರ್ಥವಾಗುವುದಿಲ್ಲ. ಪಂಚ ಲಿಂಗೇಶ್ವರನ ಸಾನಿಧ್ಯವು ಕವಿಯನ್ನು ಹೆಚ್ಚು ಅಧ್ಯಾತ್ಮಿಕ ಕವಿಯನ್ನಾಗಿಸಿದೆ. ಕಾವ್ಯ ರಚಿಸಿ ಬ್ರಾಹ್ಮಣ ಕುಟುಂಬದಿಂದಲೇ ಹೊರಬಂದವರು. ಬ್ರಾಹ್ಮಣರ ಜಾತೀಯತೆಯನ್ನು ಎತ್ತಿ ತೋರಿಸಿ ನಾವೆಲ್ಲರು

ದೇವನ ಮಕ್ಕಳು ಎನ್ನುವ ತತ್ವ ಸಾರಿದವರು. ಇವರ ಕಾಲ ಕ್ರಿ.ಶ. (೧೮೬೫-೧೯೫೦) ಎಂದು ಲಭ್ಯ ಮಾಹಿತಿಗಳಿಂದ ಊಹಿಸಬಹುದು. ನಿರ್ಧಾರಕ್ಕೆ ಬರಲಾಗಿಲ್ಲ. ನಾಗೇಶಿ ಪರಂಪರೆಯ ಅಗ್ರ ಕವಿ . ಕವಿ ಮಹ್ಮದ ಬೀರೂನ ಮೈತ್ರ. ಸಿದ್ರಾಮ ಬೈರಿಯ ಶಿಷ್ಯ ಇವರ ಅಸಂಖ್ಯಾತ ಲಾವಣಿಗಳು ಇಂದಿಗೂ ಲಭ್ಯವಿವೆ. ಸುಮಾರು ೯೩ ವರ್ಷಗಳ ಕಾಲ ಬದುಕಿದ್ದ ಯಂಕಚ್ಚಿಯ ಯಮನವ್ವಾ ಎನ್ನುವವಳು ಗೋವಿಂದ ಗೂಳಿಯ ಲಾವಣಿಗಳನ್ನು ಹಾಡುತ್ತಿದ್ದಳು. '' ಗೋವಿಂಗ ಘುಳಿ (ಗೂಳಿ ?) ಶಿವನೂರ ಗ್ರಾಮದ ಕರಣಿಕನಾಗಿದ್ದ. ದಪ್ತರ ತುಂಬೆಲ್ಲ ಲಾವಣಿಗಳನ್ನೆ ಬರೆದಿದ್ದನಂತೆ. ಪುಟ ತಿರುಗಿದರೆ '' ಗೋವಿಂದ ಘುಳಿ ಮಾಡ್ಯಾನ ಕವಿ'' ಎಂಬ ಚರಣವೇ ಸಿಗುತ್ತಿಂತೆ''* ಇವನ ಕುರಿತು ಅನೇಕ ದಂತ ಕತೆಗಳಿವೆ. ಒಮ್ಮೆ ಹೊಲದಲ್ಲಿ ಬಿಳಿಜೋಳ ಬಿತ್ತುತಿದ್ದನಂತೆ. ಮೊಟ್ಟ ಮೊದಲು ಹಿಡಿಯಲ್ಲಿ ಜೋಳ ತೆಗೆದುಕೊಂಡಿದ್ದೆ ಕೊನೆ. ಲಾವಣಿ ಗುಂಗಿನಲ್ಲಿಯೇ ಸಂಜೆಯವರೆಗೂ ಬಿತ್ತಿ ಬಿಟ್ಟಿದ್ದನಂತೆ. ಅವನು ಬಿತ್ತಿದ್ದು ಬೀಜಗಳನಲ್ಲ, ಲಾವಣಿಗಳನ್ನು. ಈ ಎಲ್ಲ ಕಥೆಗಳು ಆತನ ಕವಿತಾ ಸಾಮರ್ಥ್ಯವನ್ನು ಸಂಕೇತಿಸುತ್ತವೆ. ಶಿವನೂರಿನ ಶ್ರೀ ಅಣ್ಣಾಸಾಬ ಅಡಹಳ್ಳಿಯವರು ಈತನ ಸುಮಾರು ೫೦ ಕ್ಕೂ ಹೆಚ್ಚು ಲಾವಣಿಗಳನ್ನು ಸಂಗ್ರಹಿಸಿರುವರು. ಆದರೆ ಅವು ಪ್ರಕಟಗೊಂಡಿಲ್ಲ. ಈತನ ಆಗಮು ಗೋವಿಂದ ಘುಳಿ. ಕೆಲವೆಡೆ ಅಲ್ಲಿಯೇ ಪಂಚಲಿಂಗೇಶ್ವರ ಹೆಸರಿನಲ್ಲಿವೆ. ಆತನ ಬದುಕು ಲಾವಣಿ ಸಾಹಿತ್ಯಕ್ಕೆ ಮೀಸಲಾಗಿತ್ತು. ಒಂದರ್ಥದಲ್ಲಿ ಆತ ಲಾವಣಿ ಸಾಹಿತ್ಯದ ಕುಮಾರವ್ಯಾಸ.

ತಾಂವಶಿ ಶಿವಣ್ಣ

ಊರು ಅಥಣಿ ತಾಲೂಕಿನ ತಾಂವಶಿ ಗ್ರಾಮ. ಕಡುಬಡತನದಲ್ಲಿ ಹುಟ್ಟಿದ ಕವಿ ವೃತ್ತಿಯಿಂದ ಗಾರೆ ಕೆಲಸ ಮಾಡುತ್ತಿದ್ದನು. ಬಡತನವನ್ನು ಲೆಕ್ಕಿಸದೆ ಅಪಾರವಾದ ಪರಿಶ್ರಮದಿಂದ ಸಾಹಿತ್ಯದ ಕಡೆಗೆ ಒಲುವು ಬೆಳೆಸಿಕೊಂಡು 'ಲಾವಣಿ ಸಾಹಿತ್ಯ' ರಚಿಸಿದರು. ಇಂದಿಗೂ ಶಿವಣ್ಣನವರ ವಂಶ ವೃತ್ತಾಂತ ಗುರುಪರಂಪರೆ, ಜೀವಿತಕಾಲದ ಬಗ್ಗೆ ಸ್ಪಷ್ಟ ಮಾಹಿತಿ ಅಲಭ್ಯ. ನಮ್ಮ ಎಲ್ಲ ಜಾನಪದ ಕವಿಗಳಂತೆಯೇ ಇವರು ಕೂಡ ಬದುಕಿ ಜನಮಾನಸದಲ್ಲಿ ಹೆಸರನ್ನು ಸ್ಥಿರಗೊಳಿಸಿ ಕಾಲವಾಗಿದ್ದಾರೆ. ''ತಾಂವಶಿಯ ಶಿವಪ್ಪ ರಣಧೀರ ಪ್ರಸಿದ್ಧ ಪರದೇಶಿ ಲಾವಣಿಗಾರ'' ಇವನು ಅಥಣಿ ತಹಶೀಲದಾರರ ಸಮ್ಮುಖದಲ್ಲಿ ನೆಹರು ಕುರಿತು ರಚಿಸಿದ ಲಾವಣಿಯನ್ನು ಹಾಡಿದನಂತೆ. ಆಗ ತಹಶೀಲದಾರರು ತಮ್ಮ ಕೊರಳಲ್ಲಿದ್ದ ಒಂದು ತೊಲಿ ಚಿನ್ನದ ಸರವನ್ನು ಅವನ ಕೊರಳಿಗೆ ಹಾಕಿ ಬೆನ್ನು ತಟ್ಟಿದರೆಂದು ಜನ ಕಥೆ ಮಾಡಿ ಹೇಳುತ್ತಾರೆ.

ವಸಂತ ಕಲ್ಲಪ್ಪ ಹೊಸಮನಿ

ಪ್ರಸ್ತುತ ಜೀವಿತವಿರುವ ಅನಕ್ಷರಸ್ಥ ಲಾವಣಿಕಾರ. ಬೇವನೂರು ಇವನ ಮೂಲ ಸ್ಥಾನ . ಜಾತಿಯಿಂದ ಮಾದರ ಇವನು ಅಸಂಖ್ಯಾತ ಲಾವಣಿಗಳನ್ನು ಚೌಡಕಿ ಹಾಡುಗಳನ್ನು ರಚಿಸಿದ್ದಾನೆ. ಸಧ್ಯ ವಸ್ತಾದನು ಹೌದು, ಬಳ್ಳಿಗೇರಿ ಮಲಾಬಾದ ಪರಿಸರದ ಲಾವಣಿಗಳ ಬಗ್ಗೆ ಅಪಾರವಾದ ಪ್ರೀತಿಯನ್ನು ಆದರವನ್ನು ಹೊಂದಿದ ಕವಿಯಾಗಿದ್ದಾನೆ. ಮಾಹಾತ್ಮರು, ಶಿವಶರಣರು, ಸತ್ಪುರುಷರನ್ನು ಹೊಗಳಿದ್ದಾರೆ ಇವರ ಒಂದು ರಚನೆ ಹೀಗಿದೆ.

'' ಕ್ರಿಯಾಶೀಲರಾಗಿ ಕೀರ್ತಿ ಪಡೆದವರು ಕಿತ್ತೊಗೆದು ಭವಬಾದಿ
ಅಥಣಿ ತಾಲೂಕದಾಗ ಅತಿ-ಪವಾಡಮಾಡಿ ಕಂಡಾರ ಮುಕ್ತಿ ಹಾದಿ ॥ ಪ ॥
ಬೇವನೂರ ಗ್ರಾಮದಲ್ಲಿ ಬೆಳೆಯುತ ನಡದಾರ ಚಂದ್ರ ಆದಂತೆ ಉದಿ
ತಾಯಿ ಈರಮ್ಮ ತಂದೆ ಸಿದ್ರಾಮ ಇದ್ದರು ಭಕ್ತಿಯ ನಿಧಿ ॥೧॥
ಶ್ರೇಷ್ಠ ಮೆನತನದಲ್ಲಿ ಶ್ರೇಷ್ಠತೆ ಪಡೆದಾರ । ಸೃಷ್ಠಿ ತುಂಬೆಲ್ಲ ಹರಡಿತ ಸುದ್ದಿ ।
ಪ್ಲೇಗ ರೋಗದಿಂದ ಊರೆಲ್ಲ ಒಡೆದು ಹಿಡಿದಿದ್ದರು ಅಡವಿ ಹಾದಿ ।
ಗುರುಪಾದ ಅಜ್ಜನವರು ಗುಳಿ ಮುತ್ಯಾನ ಕರೆದು ಹೇಳ್ಯಾರ ಅವರ ತಿದ್ದಿ ।
ಊರ ಒಡೆಯುವ ಕಾರಣೆಲ್ಲ। ಯಾರಿಗೇನ ಆಗೂದಿಲ್ಲ
ಜನಕ ಇಲ್ಲ ಬುದ್ದಿ '' ಹೊತ್ತ ಮುಳುಗುದರೊಳಗೆ ಊರ
ಬಂದ ಸೇರಿದರ ದೊರಕುವದು ಸಖ್ಯದ ಹಾದಿ ॥
ಅವರ ಹೇಳಿದ ಪ್ರಕಾರ ಗುಳಿ ಮುತ್ಯಾ ಕೂಗ್ಯಾರು
ಜನರಿಗೆ ಆದಿತ್ತು ಸುದ್ದಿ '' ಊರ ಸೇರಿದ ಮ್ಯಾಲ
ದೀಪ ಹಚ್ಚಿದಾರ ಸರ್ವ ಎಲ್ಲ ಮಂದಿ । ಯಾರಿಗೇನ ಆಗಲಿಲ್ಲ
ಗುರುಪಾದ ಮುತ್ಯಾಗ ಹೇಳಿದರಲ್ಲ ನೀನೇ ನಮ್ಮ ತಂದಿ ॥
ಇಂಥ ಮಹಾತ್ಮರಿಗಿ ಮಹತ್ವ ಕೊಟ್ಟಾರ ಆ ಕಾಲದ ಮಂದಿ॥
ಅನೇಕ ಪವಾಡಗಳ ಅನುದಿನ ಮಾಡುವರು
ಎಥದ್ದು ಅವರ ಬುದ್ದಿ। ಬೇವನೂರ ಗ್ರಾಮದಾಗ
ವಾಸ ಮಾಡಿದಾರ ವಾಸನಾ ಎಲ್ಲ ತಿದ್ದಿ ॥
ದೃಢವಿಟ್ಟ ದುಡಿದವರಿಗಿ ಮೃಡಹರ ಕೊಡತಾನ ಮಹಾತ್ಮರಿಗಿ
ಮರ್ಯಾದಿ ವಾಸುದೇವ ಹಿಂಗ ಪದಮಾಡಿ ಹೇಳ್ಯಾರ
ಸಂಕ್ಷಿಪ್ತದಲ್ಲಿ ಅದ್ದಿ । ಮಹಾತ್ಮರ ಮಹಾತ್ಮೆ ಮರೆಯದೆ

ಕೇಳಿದರ ದೊರೆಯುವುದು ಮುಕ್ತಿ ॥
ಎಲ್ಲಾ ಬಿಟ್ಟು ಬೆಲ್ಲದಂತೆ ಇರುತಾರ ಬಲ್ಲವರು
ಹೆಣ್ಣು ಹೊನ್ನು ಮಣ್ಣು ತೊರೆದ ಆಗ್ಯಾರ ನಿರ್ಧಾ ॥ ಪ ॥
ತನು, ಮನ, ಧನ ದಂಡಿಸಿ ಪಾರಾ ಆಗ್ಯಾರ ಕೆಸರ
ಬೇವನೂರ ಗ್ರಾಮದಮಲ್ಲಿ ಆಗ್ಯಾರ ದೇವರ ॥ ೧ ॥

★ ★ ★

೨ ಅಡಿ ಟಿಪ್ಪಣಿಗಳು

೧) ಮಾಹಿತಿ : ಪರಸಪ್ಪಾ ತಳವಾರ, ವಯಸ್ಸು : ೬೨, ಮಲಾಬಾದ.

೨) ಡಾ॥ ಬಿ. ಎಸ್. ಭಜಂತ್ರಿ : ಹುಲಕುಂದದ ಲಾವಣಿ ಸಂಪ್ರದಾಯ ಒಂದು ಅಧ್ಯಯನ. ಚೈತನ್ಯ ಪ್ರಕಾಶನ ಪಂಚಗಾಂವ. ೨೦೦೨. ಪುಟ- ೩೪.

೩.) ಮಾಹಿತಿ : ಪರಸಪ್ಪಾ ತಳವಾರ ವಯಸ್ಸು . ೬೨ , ಮಲಾಬಾದ.

೪) ಸವಾಲ್- ಜವಾಬ್ ಪದಗಳು : ಕನ್ನಡ ವಿಶ್ವವಿದ್ಯಾಲಯ ಹಂಪಿ : ಪುಟ-೪

೫) ಡಾ॥ ಎಚ್. ತಿಪ್ಪೇರುದ್ರ ಸ್ವಾಮಿ. : ಕರ್ನಾಟಕ ಸಂಸ್ಕೃತಿ ಸಮಿಕ್ಷೆ : ಪುಟ -೩೪೧

ಅಧ್ಯಾಯ - ೩

ಅಧ್ಯಾಯ -೩

ಬಳ್ಳಿಗೇರಿ - ಮಲಾಬಾದ ಪರಿಸರದ ಲಾವಣಿ ಹಾಡುಗಾರರು

''ಪದ್ಯ ಸಾಹಿತ್ಯದ ದುಂದುಬಿ, ದುಂದುಮಿ ಹಾಗೂ ಲಾವಣಿಗಗಳನ್ನು ರಚಿಸಿ ಹಾಡಿದ ಕವಿಗಳು ತೀರ ನಿರಕ್ಷರಿಗಳೇನಲ್ಲ . ಹಾಗಿದ್ದರೂ ಕನ್ನಡ ಮನೆಯ ಸಂಸ್ಕೃತಿಯನ್ನು ಉಂಡು ಅರಗಿಸಿ, ರಸಕವಿಗಳಾಗಿ ಪದಗಳನ್ನು ರಚಿಸಿ ಹಾಡಿದ್ದು ಎನಿಸದಿರದು. ಈ ಕವಿಗಳು ಯಾರ ಹಂಗಿಗೂ, ಆಶ್ರಯಕ್ಕೂ ಸಿಲುಕಿದವರಲ್ಲ. ಕಂಡದ್ದನ್ನು ಮಾರ್ಮಿಕವಾಗಿ ಪ್ರತಿಬಿಂಬಿಸುವಂತೆ ನಿರರ್ಗಳವಾದ ಒಂದು ಶೈಲಿಯಲ್ಲಿ ಚಿತ್ರರೂಪವಾಗಿ ಹಾಡಿದ್ದಾರೆ,''[೧] '' ಕೂಗತಾವ ಶಾಸ್ತ್ರಾ''[೨] ''ನಾರದ ಪುರಾಣದಾಗ ಹಿಂಗ ಬರದೈತಿ ಅನಸೂಯಾನ ಕತಿ''[೩] ಎಂಬಂತಹ ಮಾತುಗಳು ಗೀಗೀ ಮೇಳದವರ ತಿಳುವಳಿಕೆಯ ಮಟ್ಟವನ್ನು, ಅನುಭಾವದ ಭಾವ ದೀಪ್ತಿಯನ್ನು ಹೆಚ್ಚು ಸ್ಪಷ್ಟವಾಗಿ ಗ್ರಹಿಸಲು ನೆರವಾಗುತ್ತವೆ. ಹೀಗೆ ಒಂದು ಸಮಯ, ಸಂದರ್ಭದಲ್ಲಿ ಅಕ್ಷರಜ್ಞಾನ ಇದ್ದವನಿಂದಲೋ, ಅನಕ್ಷರಸ್ಥ ನಿಂದಲೋ ರಚಿತವಾದ ಗೀಗೀ ಹಾಡುಗಳು ಹಾಡಿಸಿಕೊಳ್ಳುತ್ತ ಮುಂದುವರಿಯುತ್ತಿವೆ. ವಸ್ತಾದನು ಬರೆದುಕೊಟ್ಟ ಹಾಡುಗಳನ್ನು ವಸ್ತಾದನಿಂದಾಗಲೀ ಅಥವಾ ಅಕ್ಷರ ಬಲ್ಲ ಇನ್ನ್ಯಾರಿಂದಲೋ ಆಗಲೀ ಕಲಿತು ಹಾಡುತ್ತಿದ್ದ ಬಗ್ಗೆ ಮಾಹಿತಿಯು ದೊರೆಯುತ್ತದೆ .

ಗೀಗೀ ಹಾಡುಗಾರರು ಒಂದೇ ಸಮುದಾಯ ಅಥವಾ ಜಾತಿಗೆ ಸೇರಿದವರಾಗಿರುವದಿಲ್ಲ. ಅತೀ ಹಿಂದುಳಿದ ಕುಟುಂಬದವರೇ ಗೀಗೀ ಕೃಷಿ ಕಾರ್ಯದಲ್ಲಿ ತೊಡಗಿದ್ದಂತು ಸ್ಪಷ್ಟ. ಇವರು ವೃತ್ತಿ ಗಾಯಕರಲ್ಲ. ಹವ್ಯಾಸಿ ಗಾಯಕರು. ಹಾಡೇ ಇವರ ಬದುಕಿನ ಏಕಮಾತ್ರ ಮಾರ್ಗವಾಗಿ ಪರಿಣಮಿಸಲಿಲ್ಲ. ಹವ್ಯಾಸದ ಕಲಾವಂತಿಕೆ ಇವರ ಹಾಡುಗಾರಿಕೆಗೆ ಸ್ಫೂರ್ತಿ ನೀಡಿರಬೇಕು. ''ಗೀಗೀ ಹಾಡುಗಾರರಲ್ಲಿ ಹೆಚ್ಚು ಜನ ಮುಸ್ಲಿಂ ಕವಿಗಳೇ ಇದ್ದಾರೆ.''[೪] ಇದು ಒಪ್ಪುವ ಅಂಶವಲ್ಲ. ಏಕೆಂದರೆ ಕ್ಷೇತ್ರ ಕಾರ್ಯದುದ್ದಕ್ಕೂ ವೀಕ್ಷಿಸಿದಾಗ, ವಿಚಾರ ವಿಮರ್ಶೆ ಮಾಡಿದಾಗ ಎಲ್ಲ ಜಾತಿಯ ಜನರೂ ಪಾಲ್ಗೊಂಡಿದ್ದಾರೆ. ಹಾಗೆಯೇ ಒಂಟಿ ಮೇಳದಲ್ಲಾಗಲೀ. ಮೇಳಲಾವಣಿಯಲ್ಲಾಗಲೀ। ಪುರುಷರಷ್ಟೇ ಮಹಿಳೆಯರ ಪಾಲ್ಗೊಳುವಿಕೆ ನಡೆದಿರುವದು ತೋರುತ್ತದೆ.

ಪ್ರಸ್ತುತ ಇಲ್ಲಿ ಅಧ್ಯಯನಕ್ಕೆ ಒಳಪಡಿಸಿರುವ ಬಳ್ಳಿಗೇರಿ ಲಾವಣಿ ಸಂಪ್ರದಾಯದ

[illegible]

ಹಾಡುಗಾರರು ಅನೇಕ ಜನ. ಅಲ್ಲಿ ಪುರುಷರು, ಮಹಿಳೆಯರು ದೊರೆಯುತ್ತಾರೆ. ಹಾಡಿಗೆ ಇಳಿದವರಲ್ಲಿ ತೀರ ಕೆಳಜಾತಿಗೆ ಸೇರಿದ, ಬಡತನದ ಜೀವನ ಸಾಗಿಸುತ್ತಿರುವ ಕೆಳವರ್ಗದ ಜನರೇ ಸಿಗುತ್ತಾರೆ. ಅವರನ್ನು ಒಬ್ಬೊಬ್ಬರನ್ನಾಗಿ ಅಧ್ಯಯನಕ್ಕೊಳಪಡಿಸುವುದು ಹಾಗೂ ಅವರಿಂದಾಗಿ ಈ ಸಂಪ್ರದಾಯದ ಮುಂದುವರಿಕೆಗೆ ಹೇಗೆ ಸಹಾಯ ಸಲ್ಲಿದೆ ಎಂಬುದನ್ನುಸಾದ್ಯಂತವಾಗಿ ತಿಳಿಯುವದು. ಈ ಅಧ್ಯಾಯದ ಪ್ರಮುಖ ಆಶಯವಾಗಿದೆ. ಎಲ್ಲ ಗಾಯಕರನ್ನು, ಮೇಳದವರನ್ನು ಈ ಅಧ್ಯಾಯದ ವ್ಯಾಪ್ತಿಗೆ ತರುವದು ಸಾಧ್ಯವಿಲ್ಲ. ಅವರಲ್ಲಿ ಕೆಲವರನ್ನು ಮಾತ್ರ ಹೆಸರಿಸಲಾಗಿದೆ. ಅಂತಹ ಗಾಯಕರಲ್ಲಿ ಪ್ರಮುಖರಾದವರೆಂದರೆ,

೧) ಗೂಗವಾಡ ಕಾಸವ್ವ

೨) ಗುರಪ್ಪ ನಾಟೀಕಾರ.

೩) ಲಕ್ಷ್ಮಣ ಹೊನಕಾಂಡೆ.

೪) ಚನ್ನಪ್ಪ ಚೌಗಲಾ.

೫) ದಾದು ಹವಾಲ್ದಾರ ಮುಂತಾದವರು.

೬) ಮಾದರ ಸ್ವಾಮಿ.

ಚನ್ನಪ್ಪ ಚೌಗಲಾ

" ಮಲಾಬಾದ ಕುಂಬಾರ ಮಲ್ಲಣ್ಣನ ರಚನಾ ಬೇವನೂರ ಚೆನ್ನಪ್ಪ ಅಣ್ಣನ ಹಾಡುಗಾರಿಕೆ ಅಂದ್ರ ಹೋಳಿಗೆ ಊಟ ಇದ್ದಾಂಗ "[೫] ಎಂದು ಹಿರಿಯರು ಆಡುವ ಮಾತು ಸತ್ಯವಾದುದು. ಚನ್ನಪ್ಪ ಚೌಗುಲಾ ಅವರು ೧೯೮೪-೮೫ ರ ಅವಧಿಯಲ್ಲಿ ಅನಾರೋಗ್ಯ ಪೀಡಿತರಾಗಿ ಮೀರಜ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಹುಟ್ಟಿದ್ದ ತಿಥಿ, ನಕ್ಷತ್ರದ ಮಾಹಿತಿ ದೊರೆಯುವುದಿಲ್ಲ. ಬೇವನೂರ ಗ್ರಾಮದ ಮಧ್ಯಮವರ್ಗದ ಕುಟುಂಬದ ತೀರ ಬಡವರೂ ಅಲ್ಲದ ಬಹಳ ಶ್ರೀಮಂತರೂ ಅಲ್ಲದ ಬದುಕು. ' ಕುರುಬ ಜಾತಿ' ಯಲ್ಲಿ ಹುಟ್ಟಿದ ಲಾವಣಿ ಹಾಡುಗಾರರು. ತಂದೆ ಸಿದ್ದಪ್ಪ ತಾಯಿ ಸುಂದ್ರಾಬಾಯಿ. ಇವರಿರ್ವರೂ ಹಾಸಿಗೆ ಇದ್ದಷ್ಟು ಕಾಲು ಚಾಚಿದವರು. ಇವರ ಇಷ್ಟ ದೇವರು ಅಮೋಘಸಿದ್ದೇಶ್ವರ. ಆತನ ವರಪುಣ್ಯದಿಂದಲೋ ಎಂಬಂತೆ ಮಹಾನ್ ಗಾಯಕರಾದ ಚನ್ನಪ್ಪ ಹುಟ್ಟಿದ್ದು ಬೆಳೆದದ್ದು ಎಲ್ಲವೂ ಲೀಲೆಯಾಗಿದೆ. ತಂದೆ ತಾಯಿಯರ ವಾತ್ಸಲ್ಯದ ಖಣಿಯಾಗಿ ಚನ್ನಪ್ಪಾ ಬೆಳೆದನು. ಇವನಿಗೆ ' ಅಣ್ಣಪ್ಪ' ಎನ್ನುವ ಸಹೋದರನಿದ್ದಾನೆ. ಚನ್ನಪ್ಪನವರದು ನೋಡಲು ಸುಂದರವಾದ ರೂಪ. ಬಿಳಿಶುಭ್ರ ಬಣ್ಣ ಹಾಗೆಯೇ ಕೋಗಿಲೆ ಕಂಠ. ಮಧ್ಯಮ ಎತ್ತರ ದೃಢಚಿತ್ತ

ಕಟ್ಟುಮಸ್ತಾದ ದೇಹವನ್ನು ಹೊಂದಿದ್ದರು. ಕುಡಿಯುವ ಚಟವಾಗಲಿ, ಸೇದುವ ಚಟವಾಗಲೀ ಇವರ ಸಮೀಪ ಸುಳಿಯಲಿಲ್ಲ. ದನ ಮೇಯಿಸುವುದು ಚನ್ನಪ್ಪನವರ ಕಾಯಕವಾಗಿತ್ತು ಸಹೋದರ ಅಣ್ಣಪ್ಪನು ಹೊಲದಲ್ಲಿಯ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದನು. ಶರಣರ ನಿಲುವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದ ಚನ್ನಪ್ಪನವರದು ಒಬ್ಬಂಟಿ ಬದುಕು. ಹೆಚ್ಚು ಒಂಟಿತನವನ್ನೆ ಬಯಸುತ್ತಿದ್ದರು. ಸದಾಕಾಲ ಶಾಂತಿಯನ್ನು ಅರಸುತ್ತಿದ್ದರು. ವಸ್ತಾದ ಮಲ್ಲಣ್ಣನ ಹಾಡು ರಚನಾ ಕಾಲಕ್ಕೆ ಮಾರು ಹೋದ ಚೆನ್ನಪ್ಪನವರು ನೇರವಾಗಿ ಮಲ್ಲಪ್ಪನವರಿಂದಲೇ ಹಾಡುಗಾರಿಕೆ ಕಲಿತಿದ್ದಾರೆ. ಅನಕ್ಷರಸ್ಥಕವಿ ಅನಕ್ಷರಸ್ಥ ಶಿಷ್ಯನ ನಡುವೆ ಅಕ್ಷರ ಎಂದೂ ಅಡ್ಡ ಬರಲಿಲ್ಲ. ಸಾಕಷ್ಟು ವ್ಯವಧಾನ, ತಾಳ್ಮೆ ಇವರಿಬ್ಬರಲ್ಲಿ ಮೇಳೈಸಿತ್ತು. ಹೀಗಾಗಿಯೇ ಶಾರದೆ ಸಂಗೀತ ನಿಜವಾಗಿತ್ತು. ಮಲ್ಲಣ್ಣ ವಸ್ತಾದನ '' ಮೇದಾರ ಕೇತಯ್ಯನ ಹಾಡನ್ನು ಹಾಡಲು ಆರಂಭಿಸಿದರೆ ಸಾಕು, ಇಡೀ ಜನ ಜಾತ್ರೆಯೇ ಕ್ಷಣಾರ್ಧದಲ್ಲಿ ಮಂತ್ರ ಮುಗ್ಧವಾಗುತ್ತಿತ್ತು''[೬] ಚನ್ನಪ್ಪ ಡಪ್ಪು ಬಡಿದರೆ, ಕರೋಲಿ ಬಾಳಗೊಂಡ (ಅನಂತಪೂರ) ಕಟ್ಟಿಬಸು (ಬೇವನೂರ) ಇವನಿಗೆ ಸಾಥ ನೀಡುತ್ತಿದ್ದರು, '' ಗುಲ್ಬರ್ಗಾದ ವರೆಗೂ ಮೇಳ ಕಟ್ಟಿಕೊಂಡು ಹಾಡು ಹಾಡಿ ಸೈ ಎನಿಸಿಕೊಂಡ ಚನ್ನಪ್ಪನವರು ಯಾವುದೇ ಫಲಾಪೇಕ್ಷೆ ಪಟ್ಟವರಲ್ಲ.''[೭] ಎಂದು ನುಡಿಯುವ ಅವರ ಮಗ, ತಾಲೂಕ ಪಂಚಾಯತ ಸದಸ್ಯರು, ಸಮಾಜ ಧುರೀಣ ಕಾಕಾಸಾಬರ ಹೇಳಿಕೆ ಸಮರ್ಥನೀಯವಾಗಿದೆ.

ಚನ್ನಪ್ಪನವರು ತುಂಬು ಜೀವನ ನಡೆಸಿದವರು ಹಾಡಿನ ಮುಖಾಂತರ ಹರದೇಶಿ ಸಂಪ್ರದಾಯದ ಮುಂದುವರಿಕೆಗೆ ಸಹಕರಿಸಿದ್ದಾರೆ. ವಸ್ತಾದ ಮಲ್ಲಣ್ಣನ ಪರಮಶಿಷ್ಯರಾಗಿ ಗುರ್ತಿಸಿಕೊಂಡಿದ್ದರು. ಮಲಾಬಾದಿ ಮಲ್ಲಣ್ಣನ ಲಾವಣಿಗಳ ಪ್ರಸಾರಕ್ಕೆ ವಾಹಿನಿಯಾದವರು. ಬೇವನೂರು ಇಂದಿಗೂ ಕೂಡ ಅತೀ ನಿರ್ಲಕ್ಷಿತ ಹಳ್ಳಿ. ಅಂತಹ ಸೌಲಭ್ಯ ವಂಚಿತ ಗ್ರಾಮದಲ್ಲಿ ಜನಿಸಿದ ಇವರು ಲಾವಣಿ ಹಾಡುಗಾರಿಕೆಗೆ ತಮ್ಮನ್ನೆ ತಾವೇ ಅರ್ಪಿಸಿಕೊಂಡರು. ಇಂದಿನ ಹಾಡುಗಾರರಿಗೆ ಬಳ್ಳಿಗೇರಿ ಸಂಪ್ರದಾಯದವರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಹುಟ್ಟಿನಿಂದ ಅನಕ್ಷರಸ್ಥ, ಅನಕ್ಷರಸ್ಥನಾಗಿದ್ದು ಕವಿ ಚುರುಕು ಬುದ್ಧಿಯವನು. ಇವನ ಜೀವನದ ಕುರಿತು ವಿವರವಾದ ಮಾಹಿತಿಗಳು ಅಲಭ್ಯ. ಪ್ರತಿವರ್ಷ ಶಿವರಾತ್ರಿಯಂದು ಇವರು ತೀರಿದ ದಿನ ಪುಣ್ಯ ಸ್ಮರಣೆ ಕಾರ್ಯಕ್ರಮ ನಡೆಯುವುದು . ಅಂದು ಪರ ಊರಿನ ಲಾವಣಿ ಮೇಳ ತರಿಸಿ ಹಾಡುಗಾರಿಕೆ ಏರ್ಪಡಿಸುತ್ತಾರೆ ಲಾವಣಿ ಸಂಪ್ರದಾಯದ ನಿರಂತರ ಮುಂದುವರಿಕೆಗೆ ಪ್ರಯತ್ನ ಸಾಗಿದೆ.

೨) ಲಕ್ಷ್ಮಣ ಹೊನಕಾಂಡೆ

ಲಕ್ಷ್ಮಣ ಹೊನಕಾಂಡೆ ಯವರು ಬಳ್ಳಿಗೇರಿ ವಸ್ತಾದ ಅಪ್ಪಣ್ಣನ ದಟ್ಟ ಪ್ರಭಾವಕ್ಕೆ

ಒಳಗಾಗಿದ್ದರೂ ಇವನು ಹಾಡುಗಾರಿಕೆಗೆ ಆರಿಸಿಕೊಂಡದ್ದು ಹರದೇಶಿಯನ್ನು. ಮಲಾಬಾದ ವಸ್ತಾದ ಮಲ್ಲಣ್ಣನ ಹಾಡುಗಳು 'ಲಕ್ಷ್ಮಣ' ನ ಬಾಯಿಂದ ಹಾಡಲ್ಪಡುತ್ತಿದ್ದವು. ಸದೃಢವಾದ ದೇಹ, ಸುಂದರವಾದ ಮುಖ, ಮಧ್ಯಮ ಎತ್ತರದ ಇವನು ಮಲ್ಲಣ್ಣ ವಸ್ತಾದರಕ್ಕಿಂತಲೂ ಸ್ವಲ್ಪ ಚಿಕ್ಕವ. ಬಳ್ಳಿಗೇರಿಯಿಂದ ದಿನಾಲು ಮಲಾಬಾದಕ್ಕೆ ಬರುವದು, ವಸ್ತಾದನ ಹಾಡನ್ನು ಕೇಳುವುದು, ಅವರು ಬರೆದಿಟ್ಟಿರುವ ಹಾಡುಗಳನ್ನು ಬಳ್ಳಿಗೇರಿಯ ದೇವಸ್ಥಾನದಲ್ಲಿ ಕುಳಿತು ಅಕ್ಷರಸ್ಥರಿಂದ ಕೇಳಿಸಿಕೊಂಡು ಹಾಡುವದು ದಿನಂಪತ್ರಿ ಸಾಗಿತ್ತು. ಸಮಗಾರ ಕುಟುಂಬದ, ತೀರ ಬಡತನದ ದವಡೆಯಲ್ಲಿ ಸಿಕ್ಕು ಒದ್ದಾಡುತ್ತಿದ್ದ ಬಾಳಪ್ಪ ಹಾಗೂ ಅಕ್ಕುಬಾಯಿಯವರ ಮಗನಾಗಿ ಲಕ್ಷ್ಮಣ ಜನಿಸಿದನು. ಲಕ್ಷ್ಮಣ ನಿಗೆ ರಾಮಣ್ಣ. ಟೋಪಣ್ಣ ಸಹೋದರರು, ತಂಗೆವ್ವಾ ಕೊಂಡಾಬಾಯಿ ಎಂಬ ಸಹೋದರಿಯರಿದ್ದರು. ಅನಕ್ಷರಸ್ಥ ಲಕ್ಷ್ಮಣ ದಿನಾಲು ಮನೆಗೆಸಲ ನಿರ್ವಹಿಸಿಕೊಂಡು ಹಾಡು ಕಲಿಯಬೇಕಾಗುತ್ತಿತ್ತು. ಇವರು ಒಂದು ಮೇಳ ಕಟ್ಟಿಕೊಂಡು ಹರದೇಶಿ ಹಾಡುಗಳನ್ನು ಹಾಡುವುದರ ಮುಖಾಂತರ ಹರದೇಶಿ ಸಂಪ್ರದಾಯದ ಮುಂದುವರಿಕೆಗೆ ಸಹಕರಿಸಿದ್ದಾರೆ.

ಲಕ್ಷ್ಮಣ (ಹಾಡುಗಾರ) (ಡಪ್ಪು)

ಶಿವಪ್ಪ (ತುಂತುಣಿ) ರುದ್ರಪ್ಪ (ತಾಳ)

ಹಳ್ಳದ ಹಾಡು, ಸಿಂಧೂರ ಲಕ್ಷ್ಮಣ, ಫ್ಯಾನ್ಸಿ ಹಾಡು, ಅಕ್ಕತಂಗೇರ ಹಾಡು ಇವುಗಳನ್ನು ಹಾಡುತ್ತಿದ್ದರು. ಮೊಗಲಾಯಿ ಪ್ರದೇಶದ ವರೆಗೂ ಇವರು ಹಾಡಿ ಬರುತ್ತಿದ್ದರು.

ತುಂಬ ರಸಿಕನು, ವಿಶ್ವಾಸಿಕನು ಆಗಿದ್ದನು, ಯಾವುದೇ ಜಂಜಡಗಳಲ್ಲಿ ನಿರತನಾಗದೇ, ಎಲ್ಲವನ್ನು ಸಮಾನ ಮನಸ್ಸಿನಿಂದ ಸ್ವೀಕರಿಸುತ್ತಿದ್ದನು. ಇವನದು ತುಂಬು ಸಂಸಾರ. ಲಕ್ಷ್ಮಣನಿಗೆ ಕೃಷ್ಣಾ ತುಕಾರಾಮ, ಲವ, ಅರ್ಜುನ, ನರಸಿಂಗ ಎಂಬ ಗಂಡು ಮಕ್ಕಳಿದ್ದಾರೆ. ಇವರಲ್ಲಿ 'ಕೃಷ್ಣಾ' ಎಂಬುವವರು ಒಕ್ಕಲುತನದ ಕೆಲಸದ ಜೊತೆಗೆ ತಂದೆಯ ಗಾಯಕವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರದು ಒಂದು ಮೇಳ. ಕೃಷ್ಣಾ (ಹಾಡುಗಾರ) ಡಪ್ಪು, ಅಣ್ಣಪ್ಪ ಮಾದರ (ತುಂತುಣಿ), ಅರ್ಜುನ (ತಾಳ). ಆದರೆ ಇಂದಿನ ಟಿವಿ ಜಗತ್ತಿನಲ್ಲಿ ಕೇಳುಗರ ಕೊರತೆಯಿಂದ ನಶಿಸುತ್ತಿರುವ ಲಾವಣಿಗಳ ಬಗ್ಗೆ ಇವರಿಗೆ ಬೇಸರವಿದೆ. ಸರ್ಕಾರದಿಂದ ಇಂತಹ ಜಾನಪದ ಕಲಾವಿದರಿಗೆ ಮನ್ನಣೆಯು ಸಿಗುತ್ತಿಲ್ಲ ಎಂಬ ಕೊರಗು ಇದೆ. ಇಂದಿಗೂ ಒಂದು ಪ್ರಬಲ ಲಾವಣಿ ಸಂಪ್ರದಾಯದ ಮುಂದುವರಿಕೆ ಇಂತಹ ಬಡಕಲಾವಿದರಿಂದ ಮಾತ್ರ ಸಾಧ್ಯ ಎಂಬ ತೃಪ್ತಿಯೂ ಅವರಿಗಿದೆ.

ಗೂಗವಾಡ ಕಾಸವ್ವ

'' ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತ, ದುರಾಸೆಯಿಂದ ಬಂದುದು ಅನರ್ಪಿತ ಕೃತ್ಯ ಕಾಯಕ ವಿಲ್ಲದವರು ಭಕ್ತರಲ್ಲ ಸತ್ಯ ಶುದ್ಧ ವಿಲ್ಲದುದು ಕಾಯಕವಲ್ಲ ''[೮] ಎಂಬ ಶರಣರ ದೃಢವಾಣಿ ಹಾಡುಗಾರ್ತಿ ಕಾಸವ್ವನಿಗೆ ಅನ್ವಯಿಸುತ್ತದೆ. ' ಮಹಾರ ' ಜಾತಿಯಲ್ಲಿ ಹುಟ್ಟಿ ಬೆಳೆದ ಕಾಸವ್ವನದು ಪರಿಶುದ್ಧ ಮನಸ್ಸು. ಸ್ವಚ್ಛ ಬದುಕು. ಕ್ರಿಯಾಶೀಲ ನಡೆಯ ನುಡಿ. ಮುತ್ತವ್ವ ಹಾಗೂ ದುಂಡಪ್ಪ ತಂದೆ-ತಾಯಿಗಳು. ಇವಳ ತಂದೆಯ ಮನೆ ಅಥಣಿ ತಾಲೂಕಿನ ದೊಡವಾಡ, ಆದರೆ ಬೆಳೆದದ್ದು ತಾಯಿಯ ತವರೂರುಮನೆ ಗಡಿಭಾಗದ ಗೂಗವಾಡ. ಅಕ್ಷರ ಕಲಿಕೆಯಿಂದ ತಂದೆ-ತಾಯಂದಿರು ದೂರ. ಇವಳಿಗೆ ಅಕ್ಷರ ವಿದ್ಯೆ ಹತ್ತಲಿಲ್ಲ. ಬಾಲ್ಯದಲ್ಲಿ ಸಾಕಷ್ಟು ಕಷ್ಟ ನಷ್ಟ, ದುಃಖಗಳನ್ನು ಅನುಭವಿಸಿದಳು. ಸುಮಾರು ೧೨ ನೆ ವಯಸ್ಸು ತಲುಪುವಷ್ಟರಲ್ಲಿಯೇ ಲಾವಣಿ ಹಾಡುಗಾರಿಕೆ ಇವಳ ಮನಸ್ಸನ್ನು ಸೆಳೆಯಿತು. ಮನೆಯಲ್ಲಿ ತಿನ್ನಲು ಅನ್ನವಿಲ್ಲ. ಆದರೂ ಕಲಿಯಬೇಕೆಂಬ ಅದಮ್ಯ ಉತ್ಸಾಹ ಇವಳಲ್ಲಿ ಕಡಿಮೆಯಾಗಲಿಲ್ಲ. ತಾಯಿ ಮುತ್ತವ್ವಳು ಹೇಳುತ್ತಿದ್ದ ಬೀಸುವ ಕಲ್ಲಿನ ಪದಗಳು ಇವಳ ಸಂಗೀತದ ಮೇಲೆ ಆಗಾಧ ಪರಿಣಾಮವನ್ನು ಬೀರಿದವು. ಗುಗವಾಡ ಊರ ಜನ ಇವಳಲ್ಲಿಯ ಸಂಗೀತ ಪ್ರೇಮ. ಕಲಿಯುವ ಆಸಕ್ತಿ ಕಂಡು ಕಲಿಸುವ ಗುರುಗಳನ್ನು ವ್ಯವಸ್ಥೆ ಮಾಡಿದರು. ಹಳ್ಯಾಳದ ಬಾಬುವಸ್ತಾದರು, ಬಾಲಗಾಂವಿ ರಾಮಚಂದ್ರರ ಮಾರ್ಗದರ್ಶನದ ಅಡಿಯಲ್ಲಿ ಕಾಸವ್ವ ಅಪರೂಪದದ ಗಾಯಕಿಯಾಗಿ ಹೊರಹೊಮ್ಮಿದಳು. ಸಿಂಧೂರ ಲಕ್ಷ್ಮಣ, ಕಡ್ಲಿಮಟ್ಟಿ ಕಾಶೀಬಾಯಿ, ಹಾಡುಗಳು ಅಪೂರ್ವವೆನಿಸಿವೆ. ಲಾವಣಿ ಸಂಪ್ರದಾಯದ ಜೊತೆಗೆ ಇವರು ರಿವಾಯತ, ಹಾಗೂ ಭಜನಾ ಪದಗಳನ್ನು ಹಾಡಿದ್ದಾರೆ. ಬಡತನದಲ್ಲಿಯೇ ಬದುಕು ಸವೆಸುತ್ತಾ ಕಾಸವ್ವಳು ತಮ್ಮ ಮಗ ದುಂಡಪ್ಪನಿಗೆ ಒಳ್ಳೆಯ ಶಿಕ್ಷಣ ಕೊಡಿಸಿದ್ದಾಳೆ. ಅವರು ಸದ್ಯ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಕೂಡ ತಾಯಿಯ ಹಾಗೆಯೇ ಭಜನಾ, ನಾಟಕದ ಗೀಳು, ಅಂಟಿಸಿಕೊಂಡಿದ್ದಾರೆ. ಇವಳದು ಪ್ರಸಿದ್ಧ ಹರದೇಶಿ ಮೇಳ

ಕಾಶೀಬಾಯಿ (ಡಪ್ಪು)

ಅಬ್ದುಲ್ (ತುಂತುಣಿ) ಮಲ್ಲಪ್ಪ (ತಾಳ)

ಕೆಲ ಕಾರಣಗಳಿಂದ ಮೇಳದಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಿದೆ.

ಮಾಹಿತಿ : ಮುತ್ತವ್ವ ವಯಸ್ಸು : ೬೮, ಗೂಗವಾಡ

ದುಂಡಪ್ಪ ವಯಸ್ಸು : ೩೮, ಗೂಗವಾಡ

ಕಾಸವ್ವ ವಯಸ್ಸು : ೫೬,   ಗೂಗವಾಡ

ದಾದು ಹವಾಲ್ದಾರ

ಮರಾಠಾ ಜಾತಿಯ ದಾದು ಹವಾಲ್ದಾರ ಒಂಟಿ ಮೇಳದ ಲಾವಣಿಗಾರ. ಆನಂತಪೂರ -ಮಲಾಬಾದದ ತೋಟದಲ್ಲಿ ವಾಸಿಸುತ್ತಿದ್ದ. ಇವನದು ಲಾವಣಿ ಹಾಡುಗಾರಿಕೆಯಲ್ಲಿ ಎತ್ತಿದ ಕೈ ಒಕ್ಕಲುತನ ಮನೆತನ . ಅನಕ್ಷರಸ್ಥ, ಬಡತನದ ಬದುಕು ಇವನನ್ನು ಧೃತಿ ಗೆಡಿಸಲಿಲ್ಲ. '' ದಿನಿನಿತ್ಯ ಸಂಜೆಯಾಗುತ್ತುಲೇ ಮಲಾಬಾದಕ್ಕೆ ಓಡುವುದು, ಮಲ್ಲಣ್ಣ ವಸ್ತಾದರ ಬಾಯಿಂದ ಹಾಡು ಕೇಳಿಸಿಕೊಂಡು ಹಾಡುವದು, ವಸ್ತಾದರಿಂದ ಸೈ ಎನಿಸಿಕೊಳ್ಳುವುದು, ಅವರ ಎದುರಿನಲ್ಲಿಯೇ ಹಾಡು ಹಾಡುವದು'' ಧೈರ್ಯದ ಮಾತೇ ಸರಿ. ಮನೆ ತುಂಬ ಮಕ್ಕಳು, ಸಂಸಾರದ ತಾಪತ್ರಯದ ನಡುವೆ 'ಹರದೇಶಿ' ಸಂಪ್ರದಾಯದ ಮುಂದುವರಿಕೆಗೆ ಸಹಕರಿಸಿದ್ದಾರೆ. ಈಗ ಪ್ರತಿವರ್ಷ ಸಪ್ಟಂಬರ ತಿಂಗಳಲ್ಲಿ ಇವರ ಪುಣ್ಯ ತಿಥಿ ನಿಮಿತ್ತ ಮಕ್ಕಳು ಲಾವಣಿ ಮೇಳಗಳನ್ನು ತರಿಸಿ ಹಾಡಿಸಿ, ತಂದೆಯ ಸ್ಮರಣೆ ಮಾಡುತ್ತಾ ಬಂದಿದ್ದಾರೆ.

ಮಾದರ ಸ್ವಾಮಣ್ಣ

ಮಲ್ಲಣ್ಣ ವಸ್ತಾದರ ಶಿಷ್ಯ, ಜಾತಿ ಮಾದರ. ಊರು ಮಲಾಬಾದ. ''ಡಪ್ಪು ಹಿಡಿದು ರಾಗ ತೆಗೆದರೆ ಮಲ್ಲಣ್ಣ ವಸ್ತಾದನೇ ಶಹಬಾಸ್ '' ಎನ್ನುತ್ತಿದ್ದರಂತೆ. ಬಡತನದ ನೀರನುಂಡು ಸತ್ವಯುತ ಹಾಡು ಹೇಳಿದ ಹಾಡುಗಾರನಾಗಿ ಗ್ರಾಮದಲ್ಲಿ ಪ್ರಖ್ಯಾತನಾಗಿದ್ದನು. ಇವನ ಹಾಡುಗಾರಿಕೆಗೆ ಮುಂಬೈ ನಗರದ ವರೆಗೂ ಸಾಕಷ್ಟು ಬೇಡಿಕೆ ಇದ್ದದ್ದು ಮಾಹಿತಿಗಾರರಿಂದ ತಿಳಿಯುತ್ತದೆ. ಇಲ್ಲಿಯ ಹಾಡುಗಾರರು ಮಲಾಬಾದ ಮಲ್ಲಣ್ಣನ ಕೀರ್ತಿಯನ್ನು ಅಜರಾಮರವಾಗಿಸಿದ್ದಾರೆ.

ಹೀಗೆ ಬಳ್ಳಿಗೇರಿ ಸಂಪ್ರದಾಯವು ವಿದ್ವಾಂಸರ ಮನ್ನಣೆಯಿಂದ ಮರೆಯಾಗಿದ್ದರೂ ಜನಮಾನಸದ ಉಸಿರಿನಿಂದ ಸಮೀಪವಾಗಿರುವದು ಸ್ಪಷ್ಟ.

★ ★ ★

೩. ಅಡಿ ಟಿಪ್ಪಣಿಗಳು

೧) ಪ್ರೊ। ಶಕುಂತಲಾ ಸಿಂಧೂರ : ಜಾನಪದ ವಿದ್ವಾಂಸ ಡಾ॥ ಬಿ. ಎಸ್. ಗದ್ದಗಿ ಮಠ, ಪ್ರ. ಕವಿ ಧಾರವಾಡ ೨೦೦೬ ಪುಟ-೪೯.

೨) ಡಾ॥ ವೀರೇಶ ಬಡಿಗೇರ : ಉತ್ತರ ಕರ್ನಾಟಕದ ಜಾನಪದ ಗೀತಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ ವಿ.ಪ್ರ. ಅಥಣಿ. ೧೯೯೯ ಪುಟ- ೨೨೦.

೩) ಅದೇ ಪುಟ

೪) ಡಾ॥ ವಿರೇಶ ಬಡಿಗೇರ : ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ. ಪುಟ. ೩೩೧.

೫) ಮಾಹಿತಿ : ರಾಚಪ್ಪ ತಾಂವಂಶಿ ವಯಸ್ಸು : ೬೫ ಬೇವನೂರ

೬) ಮಾಹಿತಿ : ಪರಸಪ್ಪ ತಳವಾರ ವಯಸ್ಸು : ೬೨ ಮಲಾಬಾದ

೭) ಮಾಹಿತಿ : ಕಾಕಾಸಾಬ ಚೌಗಲಾ ವಯಸ್ಸು : ೫೦ ಬೇವನೂರು

ಮಾಹಿತಿ : ಕಲ್ಲಪ್ಪ ಮಾಕಾಳೆ : ವಯಸ್ಸು : ೬೦ ಬೇವನೂರ.

ಮಾಹಿತಿ : ಕೃಷ್ಣಾ ಲಕ್ಷ್ಮಣ ಹೊನಕಾಂಡೆ ವಯಸ್ಸು : ೬೨, ಬಳ್ಳಿಗೇರಿ.

೮) ಶರಣಚೇತನ ಸಂಪುಟ -೬ ಜನೇವರಿ -೨೦೦೮ ಸಂಚಿಕೆ -೯ ಪುಟ-೧೯

೯) ಮಾಹಿತಿ:- ಸುಭಾಸ ಮಠಪತಿ ವಯಸ್ಸು : ೪೫, ಮಲಾಬಾದ

ಅಧ್ಯಾಯ -೪

ಅಧ್ಯಾಯ -೪

ಅಪ್ಪಣ್ಣ ಕವಿಯ ಪರಿಚಯ

ಕಡು ಬಡತನದಲ್ಲಿ ಹುಟ್ಟಿದ ಕವಿ ಅಪ್ಪಣ್ಣ ಒಂದು ಹೊತ್ತಿನ ಊಟಕ್ಕಾಗಿ ಪರಿತಪಸಿದವರು. ನಾಳೆಯ ಬಗ್ಗೆ ಯೋಚಿಸಿದೆ ಇಂದಿನದನ್ನು ಎದುರಿಸಿ ಬದುಕಿದ ಛಲವಂತ. ಚಿಕ್ಕ ವಯಸ್ಸಿನಲ್ಲಿಯೇ ಊರಿನಲ್ಲಿನಡೆದ ಒಂದು ಆಕಸ್ಮಿಕ ಘಟನೆ ಸಂಭವಿಸಿತು. ಇವರು ಬಳ್ಳಿಗೇರಿಯನ್ನು ಬಿಡುವಂತೆ ಮಾಡಿತು. ಸೊಲ್ಲಾಪುರಕ್ಕೆ ಹೊಟ್ಟೆಯ ಪಾಡಿಗಾಗಿ ಕವಿ ಹೋಗಿದ್ದು ಸುದೈವವೆಂದೇ ಹೇಳಬೇಕು. ಹೊಟ್ಟೆಯ ಆಸೆ ಕವಿಯ ಜೀವನಕ್ಕೆ ಪ್ರಮುಖ ತಿರುವು ನೀಡಿತು. ಕಟ್ಟಿಗೆ ಕಾರಖಾನೆಯಲ್ಲಿ ಮರ ಕೊಯ್ಯುವ ಕೆಲಸದಲ್ಲಿರುವಾಗಲೇ ಸಾಕಷ್ಟು ಪ್ರಭಾವಶಾಲಿಯಾದ ಲಾವಣಿಗಳು ಇವರ ತಲೆಯನ್ನು ಕೊರೆಯಲು ಆರಂಭಿಸಿದವು. ಅದರ ಪರಿಣಾಮವಾಗಿ ಕವಿಯೊಳಗಿನ ಕವಿಗೆ ಉಸಿರು ಬಂದಂತಾಗಿ ಕಂಡು ಕೇಳಿದ ಕಥೆಗಳೆಲ್ಲ ಗೀತೆಯ ರೂಪ ತಾಳಿದವು. ಮರಳಿ ಬಳ್ಳಿಗೇರಿಗೆ ಬರುಷ್ಟರಲ್ಲಿ ಕವಿ ಸಾಕಷ್ಟು ಪಳಗಿದವನಾಗಿದ್ದನು. ಅವರ ದೈನಂದಿನ ಬದುಕು ಕೃತಿ ರಚನೆಯ ಕಡೆಗೆ ಅವರನ್ನು ಆಕರ್ಷಿಸಿತು. ಅವರೊಬ್ಬ ವಸ್ತಾದರಾಗಿ ಹೊರಹೊಮ್ಮಿದರು.

ಅವರು ' ಶಕ್ತಿ'ಯ ಆರಾಧಕರಾದರು. 'ಪೇಶ್ವೆಗಳ ಆಡಳಿತದಲ್ಲಿ ಹೆಚ್ಚಿನ ಪ್ರೋತ್ಸಾಹ ಪಡೆದ ಲಾವಣಿಗಳ ಬೆಳವಣಿಗೆ ಲಂಗು ಲಗಾಮು ಇಲ್ಲದೆ ಮುಂದುವರೆಯಿತು. ವಿವಾಹಪೂರ್ವ ಮತ್ತು ವಿವಾಹೋತ್ತರ ಉನ್ಮತ್ತ ಸಂಗತಿಗಳನ್ನು ಹೊಸೆದು ಹೆಂಗಸರ ನೆರವಿನೊಂದಿಗೆ ಹಾಡಿಸುವ ಮೂಲಕ ಲಾವಣಿಗಳನ್ನು ಹಾಡಿಸಿದರು. ವೀರತನದಿಂದ ಅವು ಶೃಂಗಾರ ಭಾವದ ಕಡೆಗೆ ಚಾಲನೆ ಪಡೆದವು. ಬಹುಶಃ ಈ ಸಂಗತಿ 'ನಾಗೇಶಿ' ಪರಂಪರೆಗೆ ಪ್ರೇರಣೆ ನೀಡಿರಬೇಕು' ಎಂಬುದನ್ನು ವೀರೇಶ ಬಡಿಗೇರರು ಉಲ್ಲೇಖಿಸಿದ್ದಾರೆ. ಅದು ಸತ್ಯವೂ ಆಗಿದೆ.

ಸೊಲ್ಲಾಪುರಕ್ಕೆ ಉಪಜೀವನಕ್ಕಾಗಿ ತೆರಳಿದ ಅಪ್ಪಣ್ಣ ವಸ್ತಾದರು ಸೊಲ್ಲಾಪುರದಿಂದ ಬರಿಗೈಲಿ

ಬಂದರು. ಆದರೆ ತಾವೊಬ್ಬ ಪದರಚನಾಕಾರರಾಗಿ ಹೊಮ್ಮಿದ್ದರು. ಅವರು ಅಪಾರವಾದ ಬಂಧುಬಳಗ ಹೊಂದಿದವರಾಗಿದ್ದುದು ವಕ್ತೃಗಳಿಂದ ತಿಳಿಯುತ್ತದೆ.

ವೃತ್ತಿ ಹಳಬಗಾರಿಕೆ ಹೀಗಾಗಿ ಊರಲ್ಲಿ 'ಹಳಬರ ಅಪ್ಪಣ್ಣ' ಎಂದೇ ಪ್ರಸಿದ್ದರು. ತಳವಾರ ಜನಾಂಗಕ್ಕೆ ಕೃಷ್ಣದೇವರಾಯನ ಕಾಲದಿಂದಲೂ ಪ್ರಮುಖ ಸ್ಥಾನ ಲಭ್ಯವಿರುವದು ತಿಳಿಯುತ್ತದೆ. '' ತಳವಾರ ಹುದ್ದೆ ಹಾಗೂ ವೃತ್ತಿ ಗ್ರಾಮೀಣ ಜನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ತಳವಾರರು ಮೂಲತಃ ಬೇಡ ಜನಾಂಗಕ್ಕೆ ಸೇರಿದವರು ಹೆಚ್ಚು. ಇಲ್ಲಿ ತಳವಾರ ಎಂದರೆ ಬೇಡ, ನಾಯಿಕ, ವಾಲ್ಮೀಕಿ' ಎಂದು ಕರೆಯುತ್ತಾರೆ.

ಇದರಲ್ಲಿ ಸುಮಾರು ೧೮ ಪರ್ಯಾಯ ಪದಗಳಿದ್ದು ಪ್ರಾದೇಶಿಕವಾಗಿ ಹೆಸರುಗಳಿಂದ ಕರೆದುಕೊಂಡಿದ್ದಾರೆ. ಇವರು ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿದ್ದು ಈ ನಾಡಿನ ಮೂಲ ನಿವಾಸಿಗಳಾಗಿದ್ದಾರೆ. ಕನ್ನಡ ನಾಡಿನ ಚರಿತ್ರೆ, ಸಂಸ್ಕೃತಿ, ಸಾಹಿತ್ಯಕ್ಕೆ ಗಮನಾರ್ಹ ಕಾಣಿಕೆ[೮] ಬಂದಿರುವದು ತಿಳಿಯುತ್ತದೆ.

ಮೂಲದ ಬಗ್ಗೆ ಹೆಚ್ಚು ತಿಳಿದು ಬಂದಿಲ್ಲ. ಅಪ್ಪಣ್ಣನವರು ಚೂಡಪ್ಪಾ ಹಾಗೂ ರಾಯವ್ವ ದಂಪತಿಗಳ ಮಗನಾಗಿ ಜನಿಸಿದನು. ಇವರಿಗೆ ದುಂಡಪ್ಪ ಎಂಬ ಸಹೋದರನಿದ್ದನು. ಊರ ಹಳಬಗಾರಿಕೆ ಚೂಡಪ್ಪನವರ ಕೈಯಲ್ಲಿ ಹಾಗೂ ರಾಯವ್ವ ಮನೆತನದ ಕೆಲಸದಲ್ಲಯೇ ನಿರತವಾಗಿದ್ದಳು. ರಾಯವ್ವನ ಸ್ವಂತ ಊರು ಅಥಣಿ ತಾಲೂಕಿನ ವಡೇರಹಟ್ಟಿ. ತಂದೆ, ತಾಯಿ ಅನಕ್ಷರಸ್ಥರಾಗಿದ್ದರು. ಯಾವುದೇ ಅಕ್ಷರ ಜ್ಞಾನ ಇರಲಿಲ್ಲ. ಒಕ್ಕಲುತನದಲ್ಲಿಯೇ ಕಾಲ ಕಾಳೆಯುತ್ತಿದ್ದರು. ಮಿಯಾಲಾಲ ಮುಸಲ್ಮಾನರು. ಚಾಂದಸಾಬ ಬೇಗಂ ಅವರ ಪರಿಚಯದಿಂದ ಅಪ್ಪಣ್ಣನನ್ನು ಸೋಲ್ಲಾಪುರದ ಕಟ್ಟಿಗೆ ವಕಾರದಲ್ಲಿಯೇ ಕೆಲಸ ನಿರ್ವಹಿಸಲು ಕರೆದು ಕೊಂಡು ಹೋದರು. ಆಗ ಅವರಿಗೆ ಸುಮಾರು ೨೫ ವರ್ಷಗಳ ವಯಸ್ಸು. ಬಿತ್ತುವ ಕಾರ್ಯದಲ್ಲಿ ನಿರತನಾಗಿದ್ದರು. ಚೂಡಪ್ಪನವರ ಹಾಗೂ ರಾಯವ್ವಳ ಪ್ರೀತಿ ಪ್ರೇಮದ ಪ್ರತೀಕ. ವಿದ್ಯಾತಾಯಿ ಒಲಿದಳು. ಸಹೋದರ ದುಂಡಪ್ಪನು ತಾಯಿಯ ತವರೂರು ವಡೇರಹಟ್ಟಿಯಲ್ಲಿ ಇದ್ದನು. ಸುಮಾರು ೮೦ ಏಕರೆ ಜ ಮೀನು ಇತ್ತು. ಅನಂತಪೂರದ ಎಂಕಪ್ಪನವರ ಮನೆಯಿಂದ ಸತ್ಯವ್ವಳನ್ನು ಅಪ್ಪಣ್ಣ ವಸ್ತಾದರಿಗೆ ಕೊಟ್ಟು ಮದುವೆ ಯಾಯಿತು. ಇವರು ಮದುವೆಯಾದ ನಂತರ ಹಾಡು ಬರೆಯುವದು ಪ್ರಾರಂಭವಾಯಿತು. ಮನೆಗೆಲಸ ಮಾಡುವದನ್ನು ಬಿಟ್ಟು ಕಾವ್ಯ ರಚನೆಯಲ್ಲಿ

ತೊಡಗಿದರು. ಇವರು ಒಬ್ಬಂಟಿಯಾಗಿ ಕಾವ್ಯ ಕೃಷಿ ಆರಂಭಿಸಿದರು. ಮುಸಲ್ಮಾನರ ಮೌಲಾ ಎನ್ನುವವರು ಇವರ ಇಳಿ ವಯಸ್ಸಿನಲ್ಲಿ ಗೆಳೆತನ ಮಾಡಿದರು. ಇವರು ಶಾಖಾಹಾರಿಗಳು ಮತ್ತು ಮಾಂಸಾಹಾರಿಗಳು, ಇವರು ಯಾವುದೇ ಚಟಕ್ಕೆ ಅಂಟಿಕೊಂಡಿರಲಿಲ್ಲ. ಇವರ ವ್ಯಕ್ತಿತ್ವ ಶುಚಿತ್ವ ಹಾಗೂ ಎತ್ತರವಾದ ನಿಲುವು ಹೊಂದಿದ್ದರು. ಬೇಡರ ಕುರಿತು ಇವರು ಹಾಡು ರಚಿಸಿದರು. ಈ ಹಾಡು ಹಾಡಿದವನಿಗೆ ಬ್ಯಾಡರಹಟ್ಟಿಯ ಬೇಡರು ಬಕ್ಷಿಸು ಕೊಟ್ಟರು. ''ಹೂಡಿ ಹೊಡೆಯುವ ರೈತರೇ ಶ್ರೇಷ್ಠ.'' ''ಕೋಟಿ ವಿದ್ಯೆಯಲ್ಲಿ ಮೇಟಿ ವಿದ್ಯೆಯೇ ಮೇಲು'' ಊರಿನಲ್ಲಿ ಸೋಮವಾರ ಯಾರೂ ಎತ್ತಿ ಹೊಡೆಯುವದನ್ನು ನಿಲ್ಲಿಸಬೇಕು ಎಂದು ತಿಳಿಸುತ್ತಿದ್ದನು. ಇವರು ಸುಮಾರು ೮೦-೯೦ ವರ್ಷಗಳ ಕಾಲ ಸಂತೃಪ್ತ ಜೀವನ ನಡೆಸಿದ್ದಾರೆ. ದಿನ ಸರಾಸರಿ ಜನರ ಕೆಲಸದಲ್ಲಿ ಕಾಯಕ ಮಾಡಿ ಜೀವಿಸಲು ತಿಳಿಸಿದರು. ಅವರು ಮರಣಿಸುವ ಕಾಲಕ್ಕೆ ಇವರು ಗುರು ಸಿದ್ರಾಯ ಬೈರಿಯನ್ನು ಹಲವಾರು ಬಾರಿ ಪ್ರಶಂಸಿದ್ದಾರೆ. ಲೌಕಿಕವನ್ನು, ಶಾಸ್ತ್ರವನ್ನು, ಅಧ್ಯಾತ್ಮವನ್ನು ಕುರಿತು ಇವರು ಅನೇಕ ಕಾವ್ಯ ಕೃಷಿ ಮಾಡಿ ಯಶಸ್ವಿಯಾಗಿದ್ದಾರೆ. ತಮ್ಮ ಕೊನೆಯ ದಿನಗಳನ್ನು ಅತೀ ಸಂತೋಷದಿಂದ ಕಳೆದಿದ್ದಾರೆ.

''ದ್ರವ್ಯ ಗಳಿಸಿಬೇಕಾದದ್ದು ಎಂಥಾದ್ದು ಜನರಿಗೆ ಕಾಣಿಸದ್ದು . ನಾವು ಗಳಿಸಿದ ಹಣ, ಸಂಪತ್ತು, ಇವು ಸತ್ತಾಗ ಅಳವುದಿಲ್ಲ'' ಎಂದು ಹೇಳುತ್ತಿದ್ದರು. ಬಬಲೇಶ್ವರ ಬಂಗಾರೆವ್ವ, ಬಾಡಗಿ ದುಂಡವ್ವ, ಗ್ಯಾನೂರು ಲಚ್ಚವ್ವಾ, ಜನವಾಡ ಬುದ್ದವ್ವಾ, ಬಳ್ಳಿಗೇರಿ ಲಕ್ಷ್ಮೀಬಾಯಿ, ಬಳ್ಳಿಗೇರಿ ಬೋರವ್ವ , ಗೂಗವಾಡ ಸತ್ಯವ್ವ, ಶಾಂತವ್ವ, ಅನಂತಪೂರದ ತೆಂಗೆವ್ವಾ ಮೊದಲಾದವ ರು ಇವರ ಶಿಷ್ಯರು . ಆರೋಗ್ಯವಂತವಾಗಿದ್ದರು. ಕಪ್ಪು ಬಣ್ಣ , ದುಂಡು ಮುಖ. ಅವರು ಅಪಾರವಾದ ಬಂಧು ಬಳಗವನ್ನು ಹೊಂದಿದ್ದರು. ಅವರು ಎರಡು ಹೊತ್ತಿನ ಊಟಕ್ಕೆ ಯಾವುದೇ ರೀತಿಯ ಕೊರತೆ ಕಂಡು ಬರಲಿಲ್ಲ. ಅವರು ಸಮಾಧಾನಿಗಳು, ನೇರನುಡಿ, ಸಿಟ್ಟು ಇರಲಿಲ್ಲ. ಎಲ್ಲರನ್ನು ಸಂತೈಸುವ ಭಾವ ಇತ್ತು. ನ್ಯಾಯ. ನೀತಿಗಳಿಂದ ಜೀವನ ನಡೆಸುತ್ತಿದ್ದರು. ಅವರು ಯಾವತ್ತೂ ನಾಳಿನ ಚಿಂತೆ ಮಾಡುತ್ತಿರಲಿಲ್ಲ. ಅವರು ಜೀವನದಲ್ಲಿ ಅನುಭವಿಸಿದ ನೋವು ಹೇಳತೀರದು. 'ದಾನ ಎಂದರೆ ಏನು ? ಸಮಾಧಾನ ವೇ ಶ್ರೇಷ್ಠ. ಎಲ್ಲವನ್ನು ದೇವರಿಗೆ ಅರ್ಪಿಸಿದವರು. ದಿನಾಲು ಚಹಾ ಸೇವನೆಯ ನಂತರ ಬಲಭೀಮ ದೇವರಿಗೆ ನಮಸ್ಕರಿಸುತ್ತಿದ್ದರು. ಭೂತ, ದೇವರ ಹೇಳುವುದು, ಶಕುನ ಹೇಳುವದು ಇಂತಹ ಮೂಢ ನಂಬಿಕೆಗಳನ್ನು ಟೀಕಿಸುತ್ತಿದ್ದರು. ಹಾಗೂ ಒಂದೊಂದು ವೇಳೆ ಏಕಾದಶಿ ಉಪವಾಸ ಮಾಡುತ್ತಿದ್ದರು. ದೇವರು ಕೊಟ್ಟದ್ದನ್ನು ತಿನ್ನಬೇಕು. ಇಲ್ಲದಿದ್ದಲ್ಲಿ ಉಪವಾಸ ಇರಬೇಕು. ದೆವ್ವ ದೇವರನ್ನು ನಂಬುತ್ತಿರಲಿಲ್ಲ.

ಅಪಾರವಾದ ವಿದ್ವತ್ತನ್ನು ಹೊಂದಿದ್ದರು. ಊರಿನ ಎಲ್ಲ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಇವರು ಅಪಾರ ಬಂಧು ಬಳಗ ಹೊಂದಿದ್ದರು. ಇವರ ವಂಶ ಚಿತ್ರ ಹೀಗಿದೆ.

ಚೂಡಪ್ಪ ರಾಯವ್ವ

ಅಪ್ಪಣ್ಣ

ರಾವಸಾಬ	ಶ್ರೀಮಂತ	ಅಣ್ಣಪ್ಪ	ಬಸಪ್ಪಾ	ಮಲ್ಲವ್ವ	ಅಬಾಯವ್ವಾ	ಗೌರವ್ವ
ಪ್ರಕಾಶ	ರಾಮು	ಯಲ್ಲವ್ವ	ರಘುನಾಥ			ಬಸಪ್ಪ
ಅಪ್ಪಣ್ಣ	ಲಕ್ಷ್ಮಣ	ಚಂದವ್ವ	ಸೋಮಲಿಂಗ			ಪುಟ್ಟವ್ವ
ಸುರೇಶ	ಮಹಾದೇವ	ಪುಟ್ಟವ್ವ				ರುಕ್ಮವ್ವ
ಗಂಗವ್ವ	ಸುಸಲವ್ವ	ರಾಜವ್ವಾ				ಸೋಮಲಿಂಗ
ಮಾನವ್ವ						ರಘುನಾಥ
ಲಕ್ಷ್ಮೀಬಾಯಿ						

★ ★ ★

೪ ಅಡಿ ಟಿಪ್ಪಣಿಗಳು

★ ೧) ಡಾ|| ವಿರುಪಾಕ್ಷಿ ಪೂಜಾರಹಳ್ಳಿ : ಕರ್ನಾಟಕದಲ್ಲಿ ತಳವಾರಿಕೆ :
ಪ್ರ. ಕ.ವಿ.ಹಂಪಿ. ಪುಟ-೧

ಅಧ್ಯಾಯ - ೫

ಅಧ್ಯಾಯ -೫

ಅಪ್ಪಣ್ಣ ಕವಿಯ ಲಾವಣಿಗಳು

ಅಪ್ಪಣ್ಣ ಕವಿಯು ಆಳವಾದ ಅನುಭವ ಹೊಂದಿದ್ದನು. ಲೋಕದ ಪ್ರತಿಯೊಂದು ವಸ್ತುವನ್ನು ತನ್ನ ಕಾವ್ಯಕ್ಕೆ ಬಳಸಿಕೊಂಡಿದ್ದಾನೆ. ಸಮಾಜದ ಆಚರಣೆ, ಸಂಪ್ರದಾಯಗಳು ಅವು ಒಳಗೊಂಡಿರುವ ಪರಂಪರೆಯನ್ನು ಸಾರುತ್ತವೆ. ಲಾವಣಿಗಳು ಮುಖ್ಯವಾಗಿ ಹರದೇಶಿ ಸಂಪ್ರದಾಯದ 'ಶಿವ' ನನ್ನು ಸ್ತುತಿಸಿ ಹೆಚ್ಚು ಎಂದು ಸಾಬೀತು ಪಡಿಸಿದರೆ, ಅಪ್ಪಣ್ಣ ಕವಿಯ ಲಾವಣಿಗಳು ಶಕ್ತಿಯನ್ನು ಪ್ರತಿನಿಧಿಸಿ ಈ ಸೃಷ್ಟಿಯ ಹುಟ್ಟಿಗೆ, ಬೆಳವಣಿಗೆಗೆ, ಹಾಗೂ ಕಾಪಾಡುವಿಕೆಗೆ ಸ್ತ್ರೀಯು ಅನಿವಾರ್ಯ ಎನ್ನುವ ತತ್ತ್ವವನ್ನು ಸಾರುತ್ತವೆ. ನಾಗೇಶಿ ಸಂಪ್ರದಾಯದ ಆಳವಾದ ತತ್ತ್ವಗಳು ಅಪ್ಪಣ್ಣ ವಸ್ತಾದನ ಲಾವಣಿಗಳಲ್ಲಿ ಕಾಣಿಸಿಗುತ್ತದೆ.

ಪರರನ್ನು ನಿಂದಿಸದೇ ತನ್ನ ಕಾಯಕವನ್ನು ತಾನು ನಿರ್ವಹಿಸುವುದು ಸೃಷ್ಟಿಯ ಅಂತರಂಗ. ಈ ಸೃಷ್ಟಿಯು ಚರಾಚರ ವಸ್ತುಗಳಿಗೆ ಬದುಕುವ ಹಕ್ಕನ್ನು ನೀಡಿದೆ. ಅವುಗಳನ್ನು ಪೋಷಿಸುವ ಜವಾಬ್ದಾರಿಯನ್ನು ಹೊಂದಿದೆ. ಅಂತಹ ಸೃಷ್ಟಿಯ ಪಾರಂಪರಿಕ ಸತ್ಯವು ಜೀವಿಯ ಉಳಿವಿಗೆ ನೆರವಾಗಿದೆ. ಅಪಾರ ಸಹಿಷ್ಣುತೆ, ತಾಳ್ಮೆ, ಕ್ಷಮಾ ಗುಣವನ್ನು ಹೊಂದಿರುವ ಭೂತಾಯಿ ಸಕಲರಿಗೂ ಮಂಗಳವನ್ನೇ ಬಯಸುವವಳು. ಅಂತಹ ತಾಯಿ ಪಾರ್ವತಿಯಾಗಿಯೂ, ಲಕ್ಷ್ಮೀಯಾಗಿಯೂ, ಸರಸ್ವತಿಯಾಗಿಯೂ ವಿವಿಧ ಅವತಾರಗಳಲ್ಲಿ ಕಾಣಸಿಗುತ್ತಾಳೆ. ಅವಳ ಅವತಾರದ ಅಡಿ ನಿಜವಾದ ಬದುಕು ಸಾಗಿಸುವುದು ಮನುಷ್ಯನ ಸಹಜ ಕ್ರಿಯೆಯಾಗಬೇಕು ಎಂಬುದು ಕವಿಯ ಲಾವಣಿಗಳ ಆಶಯವಾಗಿತ್ತು.

ಕೌಟುಂಬಿಕ ನೋವು-ನಲಿವು ಬಡತನಗಳನ್ನು ಮೆಟ್ಟಿ ನಿಲ್ಲುವ ಸ್ವಾತಂತ್ರ್ಯ ಮನೋಭಾವ, ಕವಿಯ ಲಾವಣಿಗಳಲ್ಲಿ ಲಭ್ಯವಿರುವ ಸಾರ. ಅನ್ನದಾತನು ತನ್ನ ಸಂಗಡಿಗ ಎತ್ತುಗಳೊಡನೆ ಭೂ ಉಳುಮೆ ಮಾಡುವುದು, ಆತ ಬೆವರು ಸುರಿಸುವದು ತಾಯಿಗೆ ಹರುಷ ತರುತ್ತದೆ. ಹೀಗಾಗಿ ರೈತನ ಜೀವನ ಸಮಾಧಾನ, ಸುಖದಾಯಕವಾಗಲೀ ಎಂಬುದು ' ರೈತನ ಪದ' ದಿಂದ ತಿಳಿದು ಬರುತ್ತದೆ. ಹೀಗೆ ಒಂದೊಂದು ನೆಲೆಗೂ ಒಂದೊಂದು ಉದಾಹರಣೆಯನ್ನು ನೀಡಲಾಗಿದೆ.

ಎತ್ತುಗಳು ಪರಮಸ್ನೇಹಿ. ರೈತನ ಜೀವಾಳ ಬದುಕಿನುದ್ದಕ್ಕೂ ಇತರರ ಏಳ್ಗೆಗಾಗಿ ಜೀವ ಸವೆಸಿದ ತ್ಯಾಗ ಜೀವಿಗಳು. ಅವುಗಳು ಮೂಕ, ಬಾಯಿಲ್ಲದಿದ್ದರೂ, ಒಡೆಯನ ಕಷ್ಟಗಳಿಗೆ ಹೆಗಲು ಕೊಟ್ಟು ಒಡೆಯನ ಪ್ರೀತಿ ವಿಶ್ವಾಸದಲ್ಲಿಯೇ ತಮ್ಮ ಜೀವಮಾನವನ್ನು ಮುಗಿಸಿ ಬಿಡುತ್ತವೆ. ಇಂತಹ ಎತ್ತುಗಳನ್ನು ಪ್ರತಿ ಸೋಮವಾರ ಮೈ ತೊಳೆದು ಸಿಂಗರಿಸಬೇಕು. ಅವುಗಳನ್ನು ಹೂಡುವುದಾಗಲೀ, ಅಂದು ಗಾಡಿಯಲ್ಲಿ ಕುಳಿತು ಕೊಳ್ಳಬಾರದೆಂದು ತಿಳಿಸುತ್ತಿದ್ದರು. ಅವರು ಸ್ವತಃ ಕಾಲಲ್ಲಿ ಚಪ್ಪಲಿ ಹಾಕಿಕೊಳ್ಳುತ್ತಿರಲಿಲ್ಲ. ಸೋಮವಾರ ದಿವಸ ನಿಯಮ ಪಾಲಿಸುತ್ತಿದ್ದ ವಿಚಾರ ತಿಳಿಯುತ್ತದೆ. ಇದು ಅವರ ಬರವಣಿಗೆಯಲ್ಲಿಯೂ ಎದ್ದು ಕಾಣುವ ವಿಚಾರವಾಗಿದೆ. ಕ್ಷೇತ್ರ ಕಾರ್ಯದ ಅಧ್ಯಯನದಲ್ಲಿ ಇದುವರೆಗೂ ನನಗೆ ದೊರೆತ ಲಾವಣಿಗಳು ನೂರಕ್ಕೂ ಹೆಚ್ಚು. ಅವುಗಳನ್ನು ಬಳ್ಳಿಗೇರಿಯ ಅಪ್ಪಣ್ಣ ಕವಿಯ ಮಗ ರಾವಸಾಬನ ಹತ್ತಿರ ಕಾಣಬಹುದು. ಈ ಲಾವಣಿಗಳನ್ನು ಹಳ್ಯಾಳದ ಬಾಬು ವಸ್ತಾದ ಎಂಬುವವರು ಪ್ರತಿ ಮಾಡಿರುತ್ತಾರೆ. ವಿಸ್ತೃತವಾದ ಕ್ಷೇತ್ರ ಕಾರ್ಯ ಕೈಗೊಂಡಲ್ಲಿ ಇನ್ನೂ ಹೆಚ್ಚಿನ ಪ್ರಮಾಣದ ಲಾವಣಿಗಳು ಸಿಗುವ ಸಂಭವವುಂಟು. ಆದರೆ ಅಧ್ಯಯನಕ್ಕೆ ಕಾಲದ ಮಿತಿ ಇರುವದರಿಂದ ಅವೆಲ್ಲವುಗಳನ್ನು ಒತ್ತಟ್ಟಿಗೆ ಸಂಕಲಿಸುವುದು ಸಾಧ್ಯವಾಗಿಲ್ಲ. ಈಗ ನಮಗೆ ಲಭ್ಯ ವಿರುವ ಲಾವಣಿಗಳನು ಅಧ್ಯಯನದ ಅನುಕೂಲತೆಗಾಗಿ ಅವುಗಳನ್ನು ವರ್ಗೀಕರಿಸುವುದು ಉಚಿತವೆನಿಸುತ್ತದೆ.

ಅಪ್ಪಣ್ಣ ಕವಿ ರಚಿತ ಲಾವಣಿಗಳು ಅಪಾರ. ವಿಷಯ ವೈವಿಧ್ಯಮಯ. ಅನುಭವ ಅನನ್ಯ. ಜೀವನದ ಎಲ್ಲ ರಂಗಗಳಲ್ಲಿಯೂ ಅನ್ವಯವಾಗುವ ಸಾಹಿತ್ಯ ಅವರಿಂದ ರಚಿತವಾಗಿರುವದು ವೇದ್ಯವಾಗುತ್ತದೆ. ಅಧ್ಯಯನದ ಅನುಕೂಲತೆಗಾಗಿ ಅವುಗಳನ್ನು ವಸ್ತು ಆಧಾರಿತವಾಗಿ ಹೀಗೆ ವಿಂಗಡಿಸಬಹುದು.

★ ಅಧ್ಯಾತ್ಮ ಅಥವಾ ಸೈದ್ಧಾಂತಿಕ ಲಾವಣಿಗಳು ಅಧ್ಯಾತ್ಮದ ಹೊಳವು ಲಾವಣಿಗಳಲ್ಲಿ ಹಾಸು ಹೊಕ್ಕಾಗಿದೆ. ಅಧ್ಯಾತ್ಮವನ್ನು ಗ್ರಾಮೀಣ ಜನರಿಗೆ ಮುಟ್ಟಿಸುವ ಮಾಧ್ಯಮಗಳು ಲಾವಣಿಗಳು ಅದು ಅತ್ಯಂತ ಕ್ಲಿಷ್ಟ ವಿಷಯ. ಅದನ್ನು ಸರಳ ಗೊಳಿಸಿ ಆ ತತ್ವಗಳಿಗೆ ರಾಗ ಸಂಯೋಜಿಸಿ ಸುಶ್ರಾವ್ಯವಾಗಿ ಹಾಡುವದರಿಂದ ಅವು ಜನರ ಮನ ಮುಟ್ಟುತ್ತವೆ. ನಮ್ಮ ಬಹುಪಾಲು ಲಾವಣಿ ಕವಿಗಳ ಉದ್ದೇಶ ಅದೇ ಆಗಿತ್ತು. ಈ ಅಧ್ಯಾತ್ಮಿಕ ಅಥವಾ ತಾತ್ವಿಕ ಲಾವಣಿಗಳಲ್ಲಿ ಮುಖ್ಯವಾಗಿ ಎರಡು ತತ್ವಗಳು ಕಾಣಸಿಗುತ್ತವೆ. ೧) ಪುರುಷ ತತ್ವ ೨) ಪ್ರಕೃತಿ ತತ್ವ ಇವುಗಳನ್ನೆ ಹರದೇಶಿ -ನಾಗೇಶಿ, ಕಲ್ಗಿ - ತುರಾಯಿ ಎಂದು ಕರೆಯುವರು.

ಸಮಾಜದಲ್ಲಿ ಹದಗೆಡುತ್ತಿರುವ ಮನುಷ್ಯ ಸಂಬಂಧಗಳು, ಹಾಸು ಹೊಕ್ಕಾಗಿರುವ ಅನೈತಿಕ ಬದುಕಿನ ಪ್ರಲಾಪನೆ, ಅಜ್ಞಾನದ ಹುಂಬುತನ, ವಿಚಾರ ಸಾಮರ್ಥ್ಯದ ಅಪಕ್ವತೆ, ಸಮರ್ಥ ವಿಚಾರದ ಕೊರತೆ, ಶೆಂದಿ ಸರಾಯಿ ಪ್ರಭಾವದ ಕುಡಿತದ ದಾಸಾನಾಗುವ ದಾಸ್ಯ ಭಾವ, ಗುರುವಿನ ಮಾರ್ಗದರ್ಶನದ ಮಹಿಮೆ, ಲಯತಪ್ಪುವ ಬದುಕು, ವ್ಯವಹಾರಿಕ ನೆಲೆಯನ್ನು ಚಿತ್ರಿಸುವ ಲಾವಣಿಗಳು.

★ ಪ್ರಕೃತಿ ಆರಾಧನೆಯ ಲಾವಣಿಗಳು

ಎಲ್ಲ ಜೀವರಾಶಿಗಳ ಆವಾಸ ಸ್ಥಾನ ಸೃಷ್ಠಿ ಪ್ರತಿಯೊಂದಕ್ಕೂ ಕಾರಣ ಸೃಷ್ಠಿ, ಈ ಸೃಷ್ಠಿಯ ಸ್ಥಿತಿ, ಲಯಗಳ ಕುರಿತು ತಾರ್ಕಿಕವಾಗಿ ಚರ್ಚಿಸುತ್ತವೆ. ಸೃಷ್ಠಿಯ ಸಮಾನತೆ, ಎಲ್ಲವನ್ನು ಸಹಿಸುವ ಸೇವಾಮನೋಭಾವ, ನಿಸ್ವಾರ್ಥ ಧರ್ಮಗಳನ್ನು ಇವು ವಿವರಿಸುತ್ತವೆ. ಬುದ್ದಿವಂತ ಮನುಷ್ಯ ಸೃಷ್ಠಿಯ ರಹಸ್ಯವನ್ನು ಬಿಚ್ಚಿಡಲು ಪ್ರಯತ್ನಸುತ್ತಿರುವಂತೆಯೇ ಅದು ಮತ್ತೆ ಮತ್ತೆ ನವನವೀನ ರೀತಿಯಲ್ಲಿ ಗೋಚರಿಸುತ್ತದೆ. ಅದು ವಿಸ್ಮಯಕಾರಕವೂ ಆಗಿದೆ.

★ ಸ್ವಾತಂತ್ರ್ಯ ಹಾಗೂ ರಾಜಕೀಯ ಲಾವಣಿಗಳು

ನಮ್ಮ ಇತಿಹಾಸ ವರ್ಣರಂಜಿತವಾದುದು. ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಸಂದರ್ಭ ಲಾವಣಿಗೆ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಹೆಚ್ಚುಗಾರಿಕೆ, ಉಮೇದುಗಾರಿಕೆಯನ್ನು ತಂದುಕೊಟ್ಟಿತು. ವ್ಯಕ್ತಿ ಮತ್ತು ವ್ಯಷ್ಠಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರ ಶೂರರ ಕಥಾನಕಗಳು ಈ ಸಂದರ್ಭದ ಪ್ರಮುಖ ಆಕರ್ಷಣೆಯಾಗಿದೆ. ತನ್ನ ಜನರ ಹಕ್ಕುಗಳಿಗಾಗಿ, ಸ್ವಾತಂತ್ರ್ಯಕ್ಕಾಗಿ, ಅವರ ಬದುಕಿನ ಭವ್ಯತೆಗಾಗಿ ಹೋರಾಡಿದ ಮಡಿದ ಸಾಂಸ್ಕೃತಿಕ ವೀರರು ಹಾಡಿನ ವಸ್ತುಗಳಾದರು. ಬ್ರಿಟಿಷರ ದಾಸ್ಯದಿಂದ ಭಾರತಾಂಬೆಯ ದಾಸ್ಯದ ನೊಗವನ್ನು ಕಿತ್ತೆಸೆಯಲು ನಡೆದ ಪ್ರಯತ್ನ ಗಂಭೀರ. ದೇಶಾಭಿಮಾನ, ಸ್ವಾಭಿಮಾನಕ್ಕೆ ಕೊಡಲಿ ಪೆಟ್ಟು ಬಿದ್ದಾಗ ಅದನ್ನು ಕಂಡು ರೋಸಿಹೋದವರು ಬಹಳ ಅಂತಹ ಸಂಧಿಗ್ಧತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಅನಿವಾರ್ಯವಾಗಿತ್ತು. ಆ ಹೋರಾಟದ ಮುಂದಾಳು ಗಾಂಧಿ. ಇವರ ಮುಂದಾಳತ್ವದಲ್ಲಿ ತನ್ನ ಜನರ ಸ್ವಾತಂತ್ರ್ಯ ಬದುಕುವ ಹಕ್ಕಿಗಾಗಿ ಹೋರಾಡಿದವರು ಅನೇಕರು. ಅಂತಹ ಮಹಾಪುರುಷರಲ್ಲಿ ದಲಿತ ಬಾಂಧವರ ಆರೋತ್ತರ, ದುಃಖ ದುಮ್ಮಾನಗಳಿಗೆ ಆಸರೆಯಾಗಿ ನಿಂತವರು ಬಾಬಾಸಾಹೇಬ ಅಂಬೇಡ್ಕರ. ಅಂಬೇಡ್ಕರರನ್ನು ಕುರಿತು ಅಪ್ಪಣ್ಣ ಕವಿಯ ರಚನೆ ಹೀಗಿದೆ.

ರತ್ನಾಗಿರಿ ಜಿಲ್ಲಾದಾಗ ಕೇಡ ತಾಲೂಕಿನ
ಪೈಕಿ । ಅಂಬೆವಾಡಿ ಅಂತ ಸಣ್ಣ ಹಳ್ಳಿಗೆನ್ನುವರು।
ಹಂಥಾ ಹಳ್ಳಿವಳಗ । ಅಂಬೇಡಕರರು ಜನಿಸಿ ಬಂದಾರು ।
ಅವತಾರ ಪುರುಷ ಹುಟ್ಟಿ ರಾಜ ಘಟಾನಾ ಘಳಿಸಿ ಕೊಂಡಾರು ।
ಹಿಂದ ಉಳಿದ ಮಂದಿನೆಲ್ಲಾ ಮುಂದ ತಂದ
ಅಂಬೇಡಕರ । ಬಂದು ಬಳಗ ಎಲ್ಲಾ ಜಾತಿ -ಒಂದೇ ಕುಲದವರು
ಈ ಘಾತಕ ಹೊಲ್ಯಾಗ । ಸೂತಕ ಯಾಕ ಬಂತ ಅನ್ನುವರು ॥ ೧ ॥
ಸೃಷ್ಟಿ ವ್ಯವಹಾರಕಾಗಿ ದೇವರ । ಮನು ಮಾನವರನ ಹುಟ್ಟಿಸಿದಾನ
ಹೇಳುತ ಬಂದಾರ । ಇಂದಿನವರಿಗಿ ಬಿಟ್ಟ ಆಡುವರು ।
ಜಾತಿ ಪದ್ದತಿ ಮುರ್ಖ ಮಾನವರ ಹುಟ್ಟಿ ಪೀಳ ಬೆಳಿಶ್ಯಾರು
ಆಕಾರ ಆದ ಬಳಿಕ ಮುಂದ । ನಾಲ್ಕು ಜಾತಿ ಮಾಡಿ
ಬಿಟ್ಟ ಲೋಕನಾಥನಲ್ಲಿ । ಏಕ ಬ ಳಕಿ ಮಾಡಬಲ್ಲರು ।
ಯಾವ ದೇವರ ಬಂದ ಮುಟ್ಟರೆಂತ । ರಟ್ಟಿ ಹಿಡಿದ ಜಗ್ಗಿ ವಗದಾರು ॥ ೨ ॥
ಬ್ರಾಮ್ಮಣರಿಗಿ ವಿದ್ಯೆ ಸಾಧನ । ಕ್ಷತ್ರಿಯರಿಗಿ ಯುದ್ದ ಸಾಧನ ।
ವೈಶ್ಯರಿಗಿ ವ್ಯಾಪಾರ ಸಾಧನ । ನೇಮಿಸಿ ಬಿಟ್ಟಾರು ।
ಶೂದ್ರರಿಗಿ ಮೂರು ವರ್ಗದ ಆಳ ಆಗಿ ಬಾಳರೆಂದಾರು ।
ನಮ್ಮ ದಲಿತ ಬಾಂಧವರನ । ಕೇವಲ ಊರ ಹೊರಗ ಇಟ್ಟಾರು ।
ಏನರೆ ಒಂದ ಕೆಲಸಕ್ಕಾಗಿ ಹೊಲ್ಯಾ ಊರಾಗ । ಬರಬೇಕಾದ್ರ
ಗೆಜ್ಜಿ ಕಟ್ಟಿದ ಬಡಿಗಿ ಕೈಯ್ಯಾಗ ಹಿಡಿರಿ ಅನ್ನವರು ।
ಊರ ಅಗಸಿ ಹೊರಗ ನಿಂತ । ಕೂಗ ಹೊಡಿರಿ ಅಂತಾರು ॥ ೩ ॥
ಮೊದಲಿನ ಪದ್ದತಿ ಬ್ಯಾರಿ ಇತ್ತ । ಹೊಲ್ಯಾ ಊರಾಗ ಬರಬೇಕು
ಆದ್ರ । ಮಣ್ಣಿನ ಪಾತ್ರಿ ಕೊರಳವಳಗ ಕಟ್ಟಿಕೊಂಬವರು ।
ಓಣಿಗಿ ಉಗಳ ಬಂದ್ರ ತಂದ ।
ಗಡಿಗ್ಯಾಗ ತುಂಬಿಕೊಳ್ಳುವುರು ।

ಕಸಬರಗಿ ಕಟ್ಟಿಕೊಂಡ ಮೂಡಿದ ಹೆಜ್ಜಿ ಅಳಸತಿದ್ರ
ನೋಡ್ರಿ। ನಮಗ ಬೈಯತಾರ ಅಂದಾರ ರೈತ ಬಾಂಧವರ।
ಮಾನವರ ಹೊಟ್ಟಿಲಿ ಹುಟ್ಟಿ ಜನರ ಸಂಗೆಲ್ಲಾ ।
ದಾಳಿ ತಂದ್ರ ಹರಿಜನ ಮ್ಯಾಲಾ ।
ಬಿತ್ತುವ ಅಡವಿ ಅವರಿಗಿಡಲಿಲ್ಲಾ ।
ಎತ್ತೆಮ್ಮಿ ಕಟ್ಟು ತ್ರಾಣಿಲ್ಲಾ ।
ಅವರ ತುಟಿ ತುಪ್ಪ ಕಂಡಿಲ್ಲಾ।
ಹಬ್ಬ ಹುಣವಿ ಮಾಡಿ ಉಣಲಿಲ್ಲಾ ।
ಹೊಟ್ಟಿಕೊಳ ಕಟ್ಟಿಆಗಿ। ಬಿಕ್ಕಿ ಬೇಡುದ ತಪ್ಪಲಿಲ್ಲಾ॥ ೧ ॥
ನಮ್ಮ ದಲಿತ ಬಾಂಧವರಿಗೆಲ್ಲಾ ।
ದನಾಕರಾ ಕಟ್ಟುವ ಹುಕಮಿಲ್ಲಾ।
ಕಟ್ಟಪ್ಪಣೆ ಆದಿತಲ್ಲಾ ।
ಪರವಾನಕಿ ಅಂತು ಸಿಗುವದಿಲ್ಲಾ।
ಹಂದಿ ನಾಯಿ ಸಾಕುರೋ ಅನಗಲಾ ।
ಕತ್ತಿ ಹೊರ್ತ ಜನಾವರ ಇಲ್ಲಾ।
ಇವು ಮೂರು ಸಾಕಿದವಗ ರೊಕ್ಕಿಸ್ತಾ
ಅನ್ನವರು ಒಕ್ಕಳ ಮುಟ್ಟಜನರೆಲ್ಲಾ॥ ೨ ॥
ಹೆಚ್ಚಾತ ಹಿಂದು ಮಂದಿ ಶೀಲಾ ।
ಹರಿಜನರನ ಅಂತೂ ಸೇರುವದಿಲ್ಲಾ।
ಮುಟ್ಟಗಿಟ್ಟರೆಂತಾರ ಮ್ಯಾಲ ಮ್ಯಾಲಾ ।
ಅವರ ಇರತಾರ ಇವರಂಗೆಲ್ಲಾ ।
ಅವರಿವರಿಗಿ ಏನ ಫೇರಿಲ್ಲಾ । ಜಾತಿ ಜಾಣರಿಗಿಲ್ಲಾ।
ಹೊಲಿಯರನ ಘೋಳಕ। ಹಾಕಿ ಹೋಳಿ ಆಡವರಗಿ ಅಕಲಿಲ್ಲಾ ॥ ೩ । ಕೂಡು॥
ಮುಟ್ಟಾ ಹೊಲಿವಳಗ ಹುಟ್ಟೆತಿ ಜಗವೆಲ್ಲಾ ಮುಟ್ಟಬ್ಯಾಡ

ಅನ್ನವರೆಂತಾ ದಡ್ಡ ಜನರು । ಸಾರಿ ಬಬಲ್ಯಾದಾಗ ಮೇಕ ಮುಂದು ಕಟ್ಟಿ ಮೆರದಾರು ।
ಕಣ ಕೇಳಿದವಗ । ಕುಂಡ್ಯಾಗ ಗೂಟಾ ಕೆತ್ತಿಸಿಟ್ಟಾರು ॥ ಹಿಂದ ಉಳಿದ॥
ಚೌಕ ॥ ನುಡಿಯದೊಂದೆ ಭೂಮಿ । ಕುಡಿಯುವ ದೊಂದೆ
ನೀರು । ಸುಡುವ ಅಗ್ನಿ ಒಂದೇ ಬೇಧ ಇಲ್ಲ ಇದರಾಗ।
ಕುಲಗೋತ್ರ ಪೀಳ ನಡುವ ಬೆಳಿತ । ನಮ್ಮ ಬೂಲೋಕದಾಗ ।
ಸಾರಿ ಹೇಳಿದ ಸರ್ವಜ್ಞ ಕವಿ ನಮ್ಮ ಮುರ್ಖ ಮಾನವನ ।
ಕುಲದ ಕೂಗಾಟ ಹೆಚ್ಚಿಗಿ ನಡಿತ ಸ್ವರ್ಗದ ಬೊಬ್ಬಾಟ
ಆತ ಭಕ್ತ ಭಂಡಾರಿ ಬಸವಣ್ಣನವರಿಗಿ ಬಿತ್ತ ಕವಿಮ್ಯಾಗ ।
ಜಲ್ಮಾ ತೊಟ್ಟ ಹುಟ್ಟಿ ಬಂದ । ನಮ್ಮ ಮಾನವರ ಕುಲದಾಗ ॥ ೧॥
ಹಿಂದು ಮಂದಿ ನಾವ ಶ್ರೇಷ್ಠ । ಉಚ್ಚ ಕುಲಾ ಅಂತಾರ
ಶೂದ್ರರನ ತುಗೊಬಾರದಂದ್ರ ತಮ್ಮ ಜ್ಯಾತ್ಯಾಗ
ಶ್ರೀ ಬಸವಣ್ಣನವರ ಕೂಡ್ಯಾರ ಕುಲದ ಕೂಗಾಡದಾಗ
ಎಷ್ಟೋ ಶೂದ್ರರ । ಲಿಂಗಾಯತರ ಆದ್ರ ಬಸವಣ್ಣನವರ ಕಾಲದಾಗ ।
ತ್ರಿಕಾಲ ಜ್ಞಾನಿ ಬಸವಣ್ಣನವರ ತೀರಿಕೊಂಡ ಹೋದ ಬಳಿಕ
ಮತ್ತಿಷ್ಟು ಹದಗೆಟ್ಟಿತ ಶೂದ್ರರ ಪರಿಸ್ಥಿತಿ ಆಗ ।
ಕುಲಾ ಹದಿನೆಂಟ ಜಾತಿ ಪಂಗಡ ಆದು ಮರಭೂಮಿ ಮ್ಯಾಗ ॥ ೨॥
ಮಹ್ಮದ ಪೈಗಂಬರ ಜನ್ಮ ಜನಸಿ ಬಂದ್ರ ಜಗದವಳಗ ।
ಅಸಲ ಜಾತಿ ಮುಸಲ್ಮಾನರ ಅಂದ್ರ ನಾಡಾಗ ।
ಕ್ರಿಶ್ಚಿಯನ ಮತ ಉದ್ದಾರ ಆತ । ಯೇಸು ಹುಟ್ಟಿದ ಮ್ಯಾಗ ।
ದೇವ ದೈತರ ಇಳದ ಬಂದ್ರ ಈಗಿನ ಕರ್ಮದ ಕಾಲಾಗ ।
ಭಾರತದೊಳಗಿನ ಹರಿಜನರಿಗೂ ಘೋಳಾಟ । ಹೆಚ್ಚ ನಡಿತ
ಒಬ್ಬ ಬಾಬಾ ಸಾಹೇಬ ಅನ್ನುವರು ಅವಾಗ ॥ ೩॥ ಚಾಲಿ ॥
ಇಳಿದ ಬಂದ ಸ್ವರ್ಗ ಸ್ಥಾನ ಬಿಟ್ಟಾ।
ಹರಿಜನ ಜಾತಿ ಜನ್ಮ ತೊಟ್ಟಾ। ಗರ್ಭದಲ್ಲಿ ವಸ್ತಿ ಕೊಟ್ಟಾ।

ದಿನಮಾನಗಳದ ಅವಚಟ್ಟಾ।
ಹುಟ್ಟಿಬಂದಾರ ಅವತಾರ ತೊಟ್ಟಾ ಸೋಮವಾರ।
ಭೂಮಿಗಿ ಪಾದಿಟ್ಟಾ । ಹೋಳಿ ಹಬ್ಬ ಇತ್ತ ಮುಂದ ।
ಹೋಳಿ ಕಾಮ ಅಂತ ಕೇಳಿತ ಮಂದಿ ಟಾಳಿಕೊಟ್ಟಾ ॥ ೧॥
ತಾಯಿ ಭೀಮಾವತಿ ಮಲಿಕೊಟ್ಟಾ।
ಮುದ್ದ ಕುಡತಾಳ ಎತ್ತಿ ಲಟಲಟಾ ।
ತಂದಿ ರಾಮಜಿ ನೋಡಿ ಕಣ್ಮುಟ್ಟಾ। ಈ ಪೃಥ್ವಿ ಕುಮಾರನ ಆಟಾ।
ಬಲ ನಿಲವಿಕಿ ಕೂಸಿನ ಮಾತಾ। ಕಿವಿ ಗಣಪತಿ ಗತಿ ಇದ್ದು ।
ಥೇಟಾ ಭೀಮರಾವ ಅಂತ ಹೆಸರಿಟ್ಟಾ ।
ಹದಿನೆಂಟನೂರ ಹತ್ತೊಂಭತ್ತ ಇಸ್ವಿ ಹುಟ್ಟಿದ ಮಿತಿ ಹೇಳ್ಯಾರ।
ಬರದಿಟ್ಟ ಆ ಊರಾಗ ಶ್ಯಾಣ್ಯಾ ಶಾಸ್ತ್ರಿ ರಾಮಬಟ್ಟಾ।
ಅವನ ರಕಸ್ಯಾರ ಉಣ್ಣುಶೀದಾ ಕೊಟ್ಟಾ।
ಸಕಲ ಶಾಸ್ತ್ರ ತುಗೊಂಡ ಬಂದ ಗಂಟಾ ।
ಊದ ಹಾಕಿ ಮುಂದ ದುಡ್ಡಿಟ್ಟಾ।
ಕೂಸಿನ ಭವಿಷ್ಯ ಕೇಳ್ಯಾರ ಅದೃಷ್ಟಾ।
ಓದಿ ಹೇಳ್ಯಾನ ಮಾಡಿ ಮುಖ ಪಾಟಾ ।
ಮಗ ಅಲ್ಲಮ ದೇವರ ಆಟಾ ।
ಇವನ ಕೀರ್ತಿ ಬೀರತತಿ ಮೂರು ಲೋಕದಾಗ ।
ದೂರತನಕಾ ಬೋರಿಟ್ಟಾ॥ ೩ ॥ ಕೂಡ॥
ಬಲವುಳ್ಳಾವ ಬಾಲ ಭಾಗ್ಯವಂತ ಆಗತಾನ ಸಾರಿ।
ರಾಮು ಭಟ್ಟರು ಹೇಳಿದರು। ಕೇಳಿ ತಾಯಿ ತಂದ ಹರುಷ ಆಗಿದರು।
ಊರ ಜನರಿಗೆಲ್ಲಾ ಸಕ್ರಿ ಬೀರಿದರು ॥ ೨॥ ಚೌಲ ॥
ತಂದಿ ಮಗನಿಗಿ ಶಿಕ್ಷಣ ಕಲಸಲಾಕ ।
ಸಾತಾರ ಜಿಲ್ಲಾಕ ಇಟ್ಟಾನ ಒಯ್ದು।

ಆರೆ ಕನ್ನಡ ಮುಸಲ್ಮಾನಿ ಬಾಳ ಬದ್ದ ಬರಿದು ।
ತೋರಸಿದ ತನ್ನ ಗುರುವಿನ ಕರಿದು ।
ಶೂದ್ರರ ಮಗನಾದ ಭೀಮರಾಯನು ।
ನಾಲ್ಕು ಭಾಷಾ ತೋರಸ್ಯಾನ ಬರದು ।
ವ್ಹಾವ್ಹಾ ಅಂದ ಗುರು ಶಿಷ್ಯಾನ ಕರದು ॥ ೧॥
ಸಾತಾರಿ ಸಾಲಿ ಮುಗಿಸಿ ಮುಂಬಯಿಗಿ ಹೆಸರ ಹಚ್ಯಾನು ।
ಎಪ್ಲಿನ್ ಟನ್ ಹೈಸ್ಕೂಲಿಗಿ ಬಂದು ।
ಗೊತ್ತಾತ ಹರಿಜನ ಹುಡುಗ ಅನ್ನವುದು ।
ಜಗಳಾ ತಗದು ಸಾಲಿ ಹುಡುಗರು ಬಂದು
ಶಿಕ್ಷಣ ಸಿಂಹಾಸನ ಎಲ್ಲಾ ಮೈಲಿಗಿ ಆತ ಇಂದ
ಕೆಟ್ಟ ಹೊಲ್ಯಾ ಮುಟ್ಯಾನ ಬಂದು ।
ಹಿಂಗ ಅಂದ ಪೆಟ್ಟ ಕೊಟ್ಟಾರು ಒಂದು॥ ೨॥
ಭೀಮರಾವ ಅಂಬೇಡಕರಗ ಶಿಡಿಲ ಬಡಿದಾಂಗ
ಆತ ಧಿಕ್ಕಾರ ಅಂದಾನು ಎದ್ದು । ಖೋಡಿ ದೈವ ಅಂದ ದೇವರಿಗಿ ಬೈದು।
ಸಾಲಿ ಮಾಸ್ತರನ ಮುಂದ ನಿಂತ ಕೈ ಮುಗಿದು।
ವಿದ್ಯಾದಾನಾ ಮಾಡ್ರಿ । ಬುದ್ದಿವಂತ ಗುರು ಅಲ್ಲಿಂದು ॥ ೩ ॥ ಚಾಲಿ॥
ಬ್ರಮ್ಹ ದೇವರ ಬಂದ ಸ್ವಪ್ನದಾಗ ।
ಆ ಕಂದ ಹೇಳ್ಯಾರ ಅಂಬೇಡ್ಕರಗ ।
ಹಸ್ತ ಇಟ್ಟಾನ ಅವನ ತಲಿಮ್ಯಾಗ।
ನೀರ ಬಿಟ್ಟಾನ ಅವನ ಕೈಯಾಗ ।
ಮಹಾ ಪಂಡಿತ ಆಗು ಜಗದಾಗ।
ಪಂತೋಜಿ ಪಂಡಿತರ ವಳಗ ಪೈಲಾ ವರ್ಗ ।
ಪಾಸಾದ ಮುಂಬಯಿ ಹೈಸ್ಕೂಲದಾಗ ॥ ೧ ॥
ಮುಂದ ಹೋದ ಅಮೇರಿಕಾದಾಗ ।

ಕೋಲಂಬಿಯಾ ಕಾಲೇಜದಾಗ।

ಹೆಸರ ಹಚ್ಯಾನ ಶಿವಾಲಯದಾಗ।

ಎಮ್ ಎ ಪರೀಕ್ಷೆ ಪಾಸ ಆದ। ಪಂಡಿತ ಹೌದ ಜಗದಾಗ ॥ ೨ ॥

ತಿರಗಿ ಬಂದ ಈ ಭಾರತದಾಗ।

ಎಮ್ ಎ ಎಲ್ ಎಲ್ ಬಿ ಪಾಸಾ ಆದ ಮ್ಯಾಗ।

ಭೆಟ್ಟಿ ಆದ ಬಡೋದಿ ಸರಕಾರಗ।

ಸಾಯಿಜರಾವ ಗಾಯಕವಾಡ ಅವಗ।

ನೌಕರಿ ನೇಮಶ್ಯಾರ ಅಂಬೇಡ್ಕರಗ।

ಕಲೆಕ್ಟರ ಆದ್ರ ಜಿಲ್ಲಾದ ಮ್ಯಾಗ।

ಬಾರಿ ಅಮಲ ಘಳಿಸಿದಾನ ಹಿಂದುಳಿದ ಹರಿಜನ ವಳಗ ॥ ೩ ॥ ಕೂಡು॥

ಹಿಂದು ಜನರ ವಂದಾಗಿ ಮಾತಾಡತಾರ ।

ಭಲೆ ಭಲೆ ಸೊಕ್ಕಿನ ಹೊಲಿಯಾರು।

ಮುಟ್ಟಿ ರಾಜ ಸಿಂಹಾಸನೆಲ್ಲಾ ಕೆಡಸುವರು।

ನೌಕರಿ ಬಿಟ್ಟ ಹ್ವಾದರು ಕೆಳಗಿನ ಅಮಲದಾರರು ॥ ಹಿಂದುಳಿದ ॥ ೩ ॥ ಚೌಕ ॥

ಡಾಕ್ಟರ ಅಂಬೇಡಕರ ಬಾಬಾಸಾಹೇಬರು। ಕುಡಿಯಾಕ ಬೇಡಿದ ನೀರಾ।

ಯಾರೂ ಕುಡಲಿಲ್ಲ ಅಂವಗ ಹ್ವಾದರ ದೂರಾ।

ಅಂತಾನ ಮೊದಲ ಇದು ನನ್ನಕಡಿ ಗೈರಾ।

ದಬ್ಬಿ ಇವರನ ನಾ ಒಬ್ಬ ನೀರ ಕುಡಿಯುದೇನ

ಸಬ್ಬ ಜನಾ ಉಳದತಿ ದೂರಾ।

ಹೆಂಗ ತಾಳ್ಯಾರ ಏನೋ ನನ್ನ ಬಾಂಧವರಾ ॥ ೧ ॥

ಶಿಕ್ಷಣ ಸಿಂಹಾಸನ ಎಲ್ಲಾ ಮೈಲಿಗಿ ಆತ ಇಂದ

ಕೆಟ್ಟ ಹೊಲ್ಯಾ ಮುಟ್ಯಾನ ಬಂದು।

ಹಿಂಗ ಅಂದ ಪೆಟ್ಟ ಕೊಟ್ಟಾರು ಒಂದು॥ ೨॥

ಭೀಮರಾವ ಅಂಬೇಡಕರಗ ಶಿಡಿಲ ಬಡಿದಾಗ

ಆತ ಧಿಕ್ಕಾರ ಅಂದಾನು ಎದ್ದು । ಖೋಡಿ ದೈವ ಅಂದ ದೇವರಿಗಿ ಬೈದು।
ಸಾಲಿ ಮಾಸ್ತರನ ಮುಂದ ಕೈ ನಿಂತ ಕೈ ಮುಗಿದು।
ವಿದ್ಯಾದಾನಾ ಮಾಡ್ರಿ ಬುದ್ದಿವಂತ ಗುರು ಅಲ್ಲಿಂದು ॥ ೩ ॥ ಚಾಲಿ॥
ಬ್ರಮ್ಹ ದೇವರ ಬಂದ ಸ್ವಪ್ನದಾಗ ।
ಆ ಕಂದ ಹೇಳ್ಯಾರ ಅಂಬೇಡ್ಕರಗ ಹಸ್ತ ಇಟ್ಟಾನ ಅವನ ತಲಿಮ್ಯಾಗ।
ನೀರ ಬಿಟ್ಟಾನ ಅವನ ಕೈಯಾಗ ।
ಸಂಘ ಬೆಳಸಿ ಕೂಡ್ಯಾರ ಬಂದ ಹರಿಜನಾ।
ಹಿಂದುಳಿದ ಜನರಿಗೆಲ್ಲಾ ಕಟ್ಟಪ್ಪಣೆ ಮಾಡ್ಯಾನ ನೀರಾ ॥೩॥ ಚಾಲ ॥
ಬ್ರಿಟಿಷರ ಸ್ವರಾಜ್ಯ ಕೊಡಲಾಕಾ। ತಾರ ಮಾಡ್ಯಾರ ಹಿಂದೂ ಸ್ಥಾನಿಕಾ ।
ಗಾಂಧಿ ಮುಂದಾಳಿದ್ದ ಭಾರತಕಾ ।
ಮಹಾತ್ಮಾಗಾಂಧಿ ತಾರ ಮಾಡಿದ ಹಿಂದೂ ಸ್ಥಾನದ
ಮುಂದಾಳೆಲ್ಲಾ ಬರ್ರಿ ನೀವು ದುಂಡು ಮೇಜಿನ ಲಂಡನ ಸಿಂಹಾಸನಕಾ ॥೧॥
ಮಂತ್ರಿ ಮಂಡಳ ಹೋತ ಲಂಡನ್ನಕಾ । ಗಾಂಧಿ ಸ್ವರಾಜ್ಯ ಬೇಡಿದ ತನ್ನ ಹಕ್ಕ ।
ಅಂಬೇಡಕರ ಇದ್ದ ಅವನ ಬಲಕಾ । ಅದರಾಗ ಬೇಡಿದವ ಅರ್ದಾ ಹಕ್ಕಾ ।
ಹಿಂದುಳಿದ ಹರಿಜನ ಪಾಲಕಾ । ಗಾಂಧಿ ಒಪ್ಪಿಗಿ ಕುಡಲಿಲ್ಲಾ ಅದಕಾ ।
ಬ್ರಿಟಿಷ ಅಂತಾರ ನಿಮ್ಮ ಹಿಂದೂಸ್ಥಾನ ಒಂದಾಗಿ ಬರುತನಕಾ ।
ಎಂದು ಕುಡುದಿಲ್ಲ ತಿರಗಿ ಕಳಿಸಿದಾರ ಹಿಂದಕಾ ।
ಈ ಮಾತ ಗಾಂಧಿಗಿ ಹತ್ತಿತ್ತ ಜೀವಕಾ ।
ಇಪ್ಪತ್ತೊಂದು ದಿನಾ ನಿಂತ ಉಪವಾಸಕಾ ಹೋಗಿ ಬಿದ್ದಾಗ
ಯರೋಢಾ ಜೇಲಕಾ। ಸುದ್ದಿ ಹಬ್ಬಿತ ನಾಲ್ಕು ಜಿಲ್ಲಾಕ।
ಬಂದ ಕೂಡ್ಯಾರೆಲ್ಲಾ ಜನ ಲೋಕಾ ।
ಗಾಂಧಿಯ ಮರಣಕ ಅಂಬೇಡಕರ ಗುರಿ ಆದ
ಅಂತ ತಿಳಿದ ಬಂದಿತ ಹಿಂದೂ ಸ್ಥಾನಕಾ ॥ ೩॥ ಕೂಡ ॥
ಮಹಾಪಂಡಿತ ಪಂತೋಜಿ ಜನಕಾ।

ನೀವು ಎಲ್ಲಾರು ಬರ್ರೀ ಲಂಡನಕಾ ।
ಗೋತ್ತಾದಿತ ಹಿಂದೂ ಸ್ಥಾನಕಾ ॥
ಕಾಂಗ್ರೇಸ ಸಂಘದವರ ಬಂದ ಕೂಡಿದಾರ ಹಿಂದೂ ಸ್ಥಾನದ ಪ್ರಮುಖ ಜನರು।
ಉಪವಾಸ ಬಿಡಸಬೇಕು ಅನ್ನುವರು ।
ಬಿಡಲಾರೆನೆಂದ್ರ ಗಾಂಧಿ ಮಹಾತ್ಮಾರು ॥ ೪ ॥ ಚೌಕ॥
ಡಾಕ್ಟರ ಬಾಬಾಸಾಬ ಅಂಬೇಡಕರ ಕುತ್ತ ತನ್ನ ಮನದಾಗ ಹಾಕ್ಯಾನ ತಾಳಿ ।
ಇಂದ ಗಾಂಧಿ ಸತ್ತರ ಗತಿ ಏನ ನಾಳಿ। ಇದ ನನ್ನ ಮ್ಯಾಲ ಬರುವುದ ದಾಳಿ ।
ಯೇಳಕೋಟಿ ನನ್ನ ದಲಿತ ಬಾಂಧವರ ಮ್ಯಾಲ ಹಿಂದು ಜನರರೆದ್ದರ ಹಾವಳಿ।
ಹೊಡೆ ಬಿದ್ದಂಗ ಆದಿತ ಮ್ಯಾಲ ಹೊಡೆ ಮಳ್ಳಿ ॥ ೧॥
ಗಾಂಧಿ ಸಭಾಕ ಡಾಕ್ಟರ ಅಂಬೇಡಕರ ಹ್ವಾದ್ರು ಸೈನ ಸಭಾ ಕೂಡೇತಿ ಟೋಳಿ ।
ಅಂಬೇಡಕರ ನೋಡಿ ಕೊಟ್ಟಾರ ತಾಳಿ । ಮೋಹನದಾಸ ತಗದ ಮಾತಿನ ಎಳಿ ।
ಗಾಂಧಿ ನಿಮ್ಮ ದಶಿಂದ ಉಪವಾಸ ತಗದಾನ ಭಾರತದ ಮುಟ್ಯೆತಿ ನಿಮ್ಮ ಕಾಗಾಳಿ ।
ಬಾಯಾಗ ಹಾಕಿದ ತುತ್ತ ಬಂದಿರಿ ಉಗಳಿ ॥ ೨॥
ಗಾಂಧಿ ಅಂಬೇಡಕರ ಬಾಷಣ ನಡದಾವಲ್ಲಿ ಅಂಬೇಡಕರ
ಸಾರಿ ಹೇಳ್ಯಾನ ಹೊಗಳಿ. ರಾಜ ಘಟನಾ ತುಂಬಿದ ಹೊಳಿ
ಅದರಾಗ ಶೀಲ ಅಂಬುವ ಮೈಲಿಗಿ ತೂಳಿ। ತೊಲಿಯದಿದ್ರ
ನನ್ನ ದೇಹಾ ನಿನ್ನ ಮುಂದ ಕೊರಳ ಕೋದ ಇಟ್ಟಿನ ಹೋಳಿ
ಏನ ಅಂಬೂದ ತಿಳಿದ ಹೇಳಿರಿ ನಾಳಿ ॥ ೩॥ ಚಾಲ ॥
ಅಂಬೇಡಕರ ತಗದ ಕಲ್ಪನಾ । ಗಾಂಧಿ ಸ್ವರಾಜ್ಯ ಗಾಂಧೀಗಿ ಬಿಟ್ಟಾನಾ।
ಹಿಂದು ಗ್ರಂಥ ಸುಟ್ಟಾನಾ । ನಮ್ಮ ದಲಿತ ಬಾಂಧವರ ಅವಮಾನಾ ।
ಇದರಿಂದ ಆಗೇರಿ ಉತ್ಪನ್ನಾ । ಯಾವ ಪ್ರಾಣಿ ಬರದ ಇಟ್ಟೋ ಇದನಾ ।
ಹರಿಜನರನ ಹಿಂದ ದಬ್ಬಿ ಹಂದಿ ನಾಯಿ ಮುಟ್ಟುವುದು
ಹಿಂದು ಮಂದಿ ಧರ್ಮನಾ ।ಅಂಬೇಡಕರ ಆಡಿದ ವಚನಾ ।
ಖರೆ ಅಂತಾರ ಪಂಡಿತ ಜನಾ । ಏಕ ಆಗು ಲೇಖ ಬೇಡ್ಯಾನಾ ।

ಗಾಂಧೀ ವಂದೇ ಮಾತರಂ ಅಂದಾನಾ । ಕೈ ಪತ್ರ ಕರಾರ ಕೊಟ್ಟಾನಾ ।
ಉಪವಾಸ ಗಾಂಧಿ ಬಿಟ್ಟಾನಾ ದೇಶದ
ಮುಂದಾಳೆಲ್ಲಾ ಬಂದ ಒಂದೇ ಪಂಗ್ತಿಲೇ
ಕುಳಿತ ಒಂದೇ ಮಾತರಂ ಎಂದ ಮಾಡಿ ಹೋಗ್ಯಾರ ಬೋಜನಾ ॥೨॥
ಭಾರತದ ಸ್ವಾತಂತ್ರ್ಯ ದೊರತ ಸ್ವದ್ದೇನಾ ।
ರಾಜ ಘಟನಾ ಬರೀಯುವ ಸ್ವದ್ದೆನಾ ರಾಜ ಘಟನಾ ಬರಿಯ ಯಜಮಾನಾ।
ಅದನ ಬರಿದಾವ ಅಂಬೇಡ್ಕರನಾ ।
ಹಿಂದೂ ಸ್ತಾನದ ಹಣೇಬರ ನೋಡಿ ಪುನ್ನಾ ।
ಬರದಿಟ್ಟ ಸೇರ್‍ಯಾಕ ಸ್ವರ್ಗಸ್ತಾನ ಬೋಜು ಬುಜಪ್ಪ ಅಂತಾರ ಮಾಡಿ ಶರಣಾ ।
ಲೋಕಮಾನ್ಯ ಜನ್ಮಾ ತೊಟ್ಟ ಇನ್ನೊಮ್ಮೆ ಕುಡಿರಿ ದರಶೀಣಾ ॥ ೩ ॥ ಕೂಡು ॥
ಸರಾಸರಿ ಕವಿ ಮಾಡಿ ಸಾರಿ ಹೇಳಿದ ಅಪ್ಪಣ್ಣ
ಊರ ಬಾಳಿಗೇರ್‍ಯಾಗ ಬೀರದರು ।
ಬೋರಿಟ್ಟ ಅವನ ಶಿಷ್ಯಾರು ಹಾಡುವರು ।
ಗುರು ಶಿದ್ರಾಮ ಬೈರಿಗಿ ಅವರು ಬೇಡುವರು॥ ॥ ಹಿಂ ಹಿಂದುಳಿದ । ಚೌಕ ॥

★ ಕೃಷಿ, ರೈತ ಸಂಬಂಧಿತ ಲಾವಣಿಗಳು

ಇಲ್ಲಿ ರೈತನ ಬದುಕು, ಯಾವ ನಕ್ಷತ್ರದಲ್ಲಿ ಬಿತ್ತನೆ ಮಾಡಬೇಕು ಎಂಬುದರ ಕುರಿತು ಮಾಹಿತಿ ನೀಡುವ ರೈತನ ಪದ ಎಂಬ ಲಾವಣಿ ಇದೆ. ಕೃಷಿಗೆ ಸಂಬಂದಿತ ಮಾಹಿತಿಯೂ ಇವರ ಲಾವಣಿಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಏಕೆಂದರೆ ಭಾರತದ ಬಹು ಪಾಲು ಜನ ಕೃಷಿ ಕಾರ್ಮಿಕರು. ಅವರಿಗೆ ಯೋಗ್ಯವಾದ ಮಾಹಿತಿ ಲಭ್ಯವಾಗುವದು ಗ್ರಾಮೀಣ ಪ್ರದೇಶಗಳಲ್ಲಿ ಹಾಡಿನ ಮುಖಾಂತರ. ಇದು ರೈತನು ಉಳುಮೆ ಮಾಡುವ ದೈವಿ ನೆಲೆಯನ್ನು ಬಿಂಬಿಸುತ್ತದೆ. ಹದವರಿತು ಬಿತ್ತನೆ ಮಾಡಿದಾಗ ಮಾತ್ರ ಅವನು ಸಕಲ ಜೀವ ರಾಶಿಗೂ ಅನ್ನವನ್ನು ಪೂರೈಸಬಲ್ಲ.

★ ಸಾಮಾಜಿಕ ಲಾವಣಿಗಳು ನನಗೆ ದೊರೆತಿರುವ ಲಾವಣಿಗಳಲ್ಲಿ ಸುಮಾರು ೧೦ ಲಾವಣಿಗಳು ಸಮಾಜದ ಅತಿ ಚಿಕ್ಕ ಘಟಕವಾದ ಕುಟುಂಬದ ಕುರಿತು ತಿಳಿಸುತ್ತವೆ. ಈ ಕುಟುಂಬಗಳ ಸಮೂಹವೇ ಸಮಾಜ. ಸಮಾಜದಲ್ಲಿ ದಿನನಿತ್ಯ ನಡೆಯುವ ಆಶೆ, ಸರಸ ವಿರಸ, ರಸ ಘಳಿಗೆಗಳನ್ನು

ಸಂಘಟನೆ ವಿಘಟನೆ ವಿವರಿಸುವ ಲಾವಣಿಗಳು ಇಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಸಮಾಜದ ಮೂಢ ನಂಬಿಕೆ, ಅನಾಚಾರ, ಜಾತೀಯತೆ ಮುಂತಾದವುಗಳನ್ನು ಲಾವಣಿ ಕವಿಗಳು ಎತ್ತಿ ತೋರಿಸುವದರೊಂದಿಗೆ ಸಮಾಜವನ್ನು ತಿದ್ದಲು ಪ್ರಯತ್ನಿಸಿದ್ದಾರೆ. ಈ ಅಂಶವನ್ನು ಇಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಉತ್ತಮರ ಅಡಗತಾರ ಅಂತ ಬಬಲಾದ್ಯಾವರ ಹಿಂದಕ ಸಾರಿದ ಸೂಚಿತ್ತೋ ।
ಭಲೆ ಭಲೆ ಬುದ್ಧಿವಂತ ಪಂಡಿತರ ಕುಲಾಬುಡಮೇಲ ಆಗಿ ಹೋತೋ । ೧॥
ಊರ ಹೋಗಿ ಹೊಲೆಗೇರಿ ಸೇರೂದ ಕಾಲಮಾನ ಸರಿ ಆಗಿ ಬಂತೋ ।
ಹಿಂದಕ್ಕ ಇದ್ದ ಊರ ಯಾಕ ಸೇರಿದ್ದಿಲ್ಲ ಹೊಲಗೇರಿ ಎಲ್ಲಿ ಹೋಗಿತ್ತೋ ॥ ೨॥
ಪೂರ್ಣ ವಿಚಾರ ಮಾಡ್ರಿ ಧೋರಣ ತಿಳಿದ ಏನ ಕಾರಣ ಕುಲಾನಾಸ ಆತೋ ।
ಗುರುವಿನ ಮ್ಯಾಲ ಎರಡನೇ ಮಾಡಿದವರ ಕುಲಾ ದೀಪ ನಾಶ ಆತೋ ॥ ೩॥
ಹೊಲಗೇರಿ ಸ್ಥಳದಲ್ಲಿ ಎಲವಿನ ಹಂದರ ಹಾಕಿ ಶೀಲವಂತರ ಮದಿವಿ ಆತೋ।
ಹಾದ್ರ ಹವಸ ಎಮ್ಮೆದ್ವಾರ ಮೆರುಣಿಗಿ ಮಾದರ ಗೇರ್‍ಯಾಗ ಹೊಂಟಿತೋ ॥ ೪॥
ಗುಜ್ಜರ ಮಾರೋಡ್ಯಾರ ಗುದ್ದಾಟ ನಡದೀತ ನಮ್ಮ ಕುಲಾ ಶೀಲ ಅಂತೋ।
ಹಾರೂ ಬಣ ಜಿಗ್ಯಾರ ದೊರಿಂದ ಹರಳಿ ಹೊಡದ್ರ ದಾರ ನೀವ ದೂರ
ಹಾಯರಿ ಅಂತೋ ॥ ೫।
ಬೋಳ್ಯಾರ ಹೋಗಿ ಮುಂದ ಸೂಳ್ಯಾರ ಆದಾರ
ಅಂತ ಸತ್ಯ ಶರಣರ ಸುಚ ಇತ್ತೋ।
ಬಡಜಿ ಬಟ್ಟರ ಎಲ್ಲಾ ಕೆಟ್ಟ ಹೋದಾರ ಅಂತ ಮೇಕ ಮುಂಗಲಿ ಕಟ್ಟತ್ತೋ । ೬॥
ಪೋತಿ ಪುರಾಣ ಯ್ಯಾವ ಪ್ರಾಣಿ ಬರದ ಇಟ್ಟ ಸೂತಕ
ಹೊಲ್ಯಾಗ ಯಾರ ಬಂತೋ ।
ಕತ್ತಿನಾಯಿ ಮುಟ್ಟಿದರ ದೋಷ ಇಲ್ಲ ಹೊಲಿಯರಗಿ ಏನ ಆಗಿತ್ತೋ ॥ ೭ ॥
ಕೂಡು । ಧರ್ಮ ತಪ್ಪಿ ಹೊಲಿ ಮಾದ ಮಾಡಿದ ಕರ್ಮ
ತಾವ ತೀರಸ ಬೇಕಾತೋ ॥ ೧ ಚೌಕ ॥
ಶೇರಲಿಲ್ಲ ಹೊಲಿಯಾರನ ಉತ್ತಮರ ಸತ್ತದನಾ ಹೊರಾವ ಅಂತು ।

ಧನ್ಯಾ ಆಗಲಿಲ್ಲ ಹೊಲ್ಯಾ ಆದನಂತದನಾ ಹರಿಕಿ ಕೊಟ್ಟತು ॥೧॥
ಸತ್ತ ದನಾ ಹೊತ್ತ ಓದ ಮಣ್ಣ ಕುಡುದ ಹೊಲ್ಯಾರಲ್ಲಿ ಧರ್ಮ ಇತ್ತು।
ಧರ್ಮಾ ಬಿಟ್ಟ ಮುಂದ ದನದ ಚರ್ಮಾ ಸುಲದ ಮುಂದ
ಮಾಂಸ ತಿನುವುದು ನಡದೀತು ॥ ೨॥
ಗಾಯತ್ರಿ ಗೋಮಿತ್ರಾ ಶೆಗಣಿ ಸುದ್ದ ಜಗವೆಲ್ಲಾ ಪವಿತ್ರ
ಆದೀತು ಇಷ್ಟ ಎಲ್ಲಾ ಪವಿತ್ರ ಆಗಿ ತೊಗಲ ಆಗಿಲಿಲ್ಲ ಹೊಲ್ಯಾರಿಂದ ಕೆಟ್ಟತು॥ ೨॥
ಮಾದುರ ಘಾತಕ ಹೊಲ್ಯಾಗ ಸೂತಕ ಬರಲೆಂತ ಆಕಳ ಸ್ರಾಪ ಆದೀತು ॥ ೪॥
ಅನ್ನ ವಸ್ತ್ರ ಧನ ದ್ರವ್ಯ
ಹೊಲಗೇರ್ಯಾಂದ ಮಾದ್ರಗೇರಿ ಸೇರಿತಾ॥ ೫॥
ಹೊಲಗೇರಿ ಕೆಟ್ಟ ಹೋಗಿ ಬಳಿಕ ಆದಿತ ಹೊಲ್ಯಾಗ ಸೂತಕ ಬಂದಿತು ।
ಜಗತಾಯಿ ಗಾವಿತ್ರಿ ಚರಮದ ಪುಣ್ಯ ಮಾದರ ದೈವ ತೆರದೀತು. ॥೬॥
ಕೂಡು ॥ ಮಾತಂಗಿ ಅಂದ ಮಾದರಗೆರ್ಯಾಗ
ಆಕಳ ಚರ್ಮದ ಪೂಜ್ಯಾ ನಡದೀತು ॥ ೨ ॥ ಚೌಕ ॥
ಮಾದರ ಹುಡುಗಗ ಮಬ್ಬ ಹರಿಬಂತ ರಂಡಿ ಒಂದ ಇಟ್ಟಾ।
ಚರಮದ ಪೂಜಿ ಅವನ ಮನಿಯಾಗ
ನಡದೀತ ನೋಡ್ಯಾಳ ಕಣ ಮುಟ್ಟಾ॥೧॥
ಹಿಂತಾ ಚರಮದ ಚಪ್ಪಲಿ ಮಾಡಿ ಕುಡ ಆಡೋಣ ಲಲ್ಲಾಟ ॥ ೨॥
ಇಲ್ಲದಿದ್ದರ ನಂದು ನಿಂದು ಇಂದಿಗಿ ಹೆಣೆತಾಗ ಆಡೋ ಮುಟ್ಟೊ ॥ ೨॥
ರಂಡಿ ಮಾತ ಕೇಳಿ ಗೊಂಡಿ ಚಪ್ಪಲಿ ಮಾಡಿ ಕೊಟ್ಟಾನ ಆಯಕಟ್ಟಾ ।
ಚರಮದ ಅಟ್ಟಿ ಹಾಕಿ ಕೆರುವ ಹೊಲದ ಇಟ್ಟ ಬೇಡಿದವರಿಗಿ ಕೊಟ್ಟಾ॥ ೩ ॥
ಆಕಳ ಹೊಲಿ ಮಾದರಿಗಿ ಸ್ರಾಪ ಕೊಟ್ಟಿತು ಎಲೋ
ಕರ್ಮಕಿರೇ ಬ್ರಾಷ್ಠಿ ಕೀಳ ಜಾತಿ ಆಗಿ ಯೆಳ ಬೇಲಿ
ಅಟ್ಟಿ ಇರಹೋಗೋ ಕರ್ಮಿಷ್ಠಾ ॥ ೪॥
ಮೈಲಿಗಿ ಜನರನ ಮುಟ್ಟ ಬ್ಯಾಡಂತ ಗುರು ಶಿಕ್ಷೆ ಕೊಟ್ಟಾ।

ಶಿಕ್ಷೆ ಕೊಟ್ಟ ಊರ ಹೊರಗದಬ್ಬಿ ದಾರ ಕಂಬಳಿ
ಕೋರಿ ಕೊಟ್ಟಾ ಮಾದರ ದ್ರವ್ಯ ಮಾರೋಡ್ಯಾರ ಮನಿಗೋತ
ಉಳಿರೆಂಪಗಿ ಕೊಟ್ಟಾ। ತುತ್ತ ರೊಟ್ಟಿಗಾಗಿ ಚುಚ್ಚಿ
ಕುಡೋಗರೆಂತ ಗುರು ನೇಮಿಸಿ ಬಿಟ್ಟಾ ॥ ಕೂಡು॥
ಪೈಲಾ ಹೊಲಗೇರಿ ದುಸರಾ ಮಾದಾರಗೆ ಮೂರನೇ ಕೇರಿ ಉತ್ತಮಗೇರಿ ಉಳೀತು ॥ ೩
॥ ಚೌಕ ॥ ಶಿವಭಕ್ತ ಅಂತಾರ ನಮ್ಮ ಕುಲಾ
ಹೆಚ್ಚ ಕೂಗ್ಯಾರ ಕುಲಕ ವಬ್ಬರಾ।
ಅಂಗಕ ಸಮಾನವಾದ ಲಿಂಗ ಕಟ್ಟಿ ಗುರು
ತೋರಿದ ಶಿವಮಂತ್ರಾ ॥ ೧॥
ಲಿಂಗಪೂಜಾದ ನೇಮ ಮಾಡಲಿಲ್ಲ ಇವರು
ಗುರು ಹೇಳಿದ ಪ್ರಕಾರಾ।
ಲಿಂಗಕ ಎಂದೂ ನೀರ ಬೆಟ್ಟಿ ಮಾಡಸಲಿಲ್ಲ ಮಂಗನಂತಾ ಜನರಾ ॥ ೨ ॥
ಘಾತಕರ ಹೊಟ್ಟಿಲೆ ಸೂತಕ ಜನರ
ಹುಟ್ಟಿ ಜಾತಿ ಕೆಡಿಶ್ಯಾರ ಇವರಾ।
ಖಟಕರ ವ್ಯಾಪಾರ ಮಠದಾಗ ನಡದಿತ ತಪ್ಪಿ ಹ್ವಾದು ಆಚಾರಾ ॥ ೩ ॥
ಕಂಡ ಜನರ ಎಲ್ಲಾ ಕಂಡಾತಿಲ್ಲಾಕ ಹತ್ತಿರ ಶೀಲವಂತ
ಶಿವಭಕ್ತರಾ। ಪಚ್ಚಿ ನಿಮ್ಮ ಹಿಂಗಾಲ ನಾ ಹಡ್ಡಿ ಶಿಕ್ರ
ನಮ್ಮ ಕೈಯಾಗ ಅಂತಾರ ಹೊಲ್ಯಾ ಮಾದಾರಾ।
ಬಾಳದಿನದ ಸಿಟ್ಟ ಇತ್ತ ಹೊಲ್ಯಾ ಮಾದರಿಗಿ ಎಂದ ಸಿಕ್ಕಾಗ ಇವರಾ।
ಸಿಕ್ರ ಬಿಟ್ಟ ಗಿಟ್ಟಿನಾ ಬೆನ್ನ ಮ್ಯಾಲ ಇರತಿನಂತ
ಮಾದರಗೇರಿ ಬಂತ ಇದರಾ ॥ ೪॥
ಸುದ್ದಿ ಕೇಳಿ ಸುಳ್ಯಾರದಂಡ ಸುತ್ತ ಹಾಕಿತ
ಫೇರಾ ಹೊಲ ಮಾದರ ಗೇರ್ಯಾಗ ಹೊರ ಪ್ಯಾಟಿ
ಇಟ್ಟಾರ ಗೋವಾದ ಪಾತ್ರ ದವರಾ। ೬॥ ಕೂಡು ॥

ಯಮ ಪಾಸಿದ ನಾರ್‍ಯಾನ ವ್ಯಾಪಾರ
ನೋಡಿ ಜನಾ ಮರಳ ಆತು ॥ ೪॥ ಚೌಕ॥
ಸುಳ್ಯಾರಿಗಿ ಮರಳ ಆಗಿ ಊರಾನ ಪರಮುಖರೆಲ್ಲಾ
ಕೇರಿ ಲಾಯಸನ ತಗಿಶ್ಯಾರು । ಗ್ವಾಡಿ ಕವನೆಳ್ಳಲೆ ಮೂರು
ಚೆಂ ಜಿ ಹೋಗಿ ಮೊದಲ ನಂಬರ ಹಚ್ಚಾರು ॥ ೧॥
ಅವರನ ನೋಡಿ ಊರ ಹೊಲಗೇರಿ ಸೇರಿತ ಉತ್ತಮರ
ಎಲ್ಲಿ ಉಳಿದಿತು। ಹಜಾರ ಪೋಳಿ ಬಿಟ್ಟ ಸುಳ್ಯಾರ
ಮನ್ಯಾಗ ಕುತ ಏಕನಳಿ ಹೊಡದಾರು ॥ ೨ ॥
ಕುಲಗೇಡಿ ಜನರನ ಕೂನಾ ಹಿಡಿದ ತಂದ ಸುಳ್ಯಾರು ಸೂತಕ ತೋಳದಾರು ।
ಉಚ್ಚಿ ಕುಣಿಗಿ ಬಂದ ಮೆಚ್ಚಿ ಬಿದ್ದಾವಂತ ತಿಪ್ಪಿ ತೀರಥ ಕುಡಿಶ್ಯಾರು ॥ ೩ ॥
ಎಲ್ಲಾ ಜಾತಿ ಸುತ್ತಿ ಒಂದು ಸುಳ್ಳಿ ಮಾಡಿ ಕುಲದ ಕುಳಿ ಮುರದಾರು ।
ತಿಂಗಳ ತಿಪ್ಪಿಕಸಾ ಅಂಗಳಾ ಹೊಡಿಲಾಕ ಹಚ್ಚಿ ತಂಗ್ಯ ಬಾಕ್ರಿ ಕೊಟ್ಟಾರು ।
ಗುರು ಮಾರಗ ಬಿಟ್ಟ ದುರಮಾರಗ
ಹಿಡಿದವರ ಕೊರವರ ಕತ್ತಿ ಆದಾರು ।
ಸ್ವರ್ಗದ ಬಾಗಿಲ ಯರವ ಆತ ಮುಂದ
ಯಮಕೊಂಡಕ ಯಳದಾರು ॥ ೨॥
ಮನಾ ಮೈಲಿಗಿ ಆತ ಮಹಾತ್ಮಾ ಗಾಂಧಿ ತಿಳಿದ
ವಂದೇ ಮಾತರಂ ಅಂದಾರು ಕಡಿ ಆಟದ
ಕಾಲಮಾನ ಭವಿಷ್ಯ ನೋಡಿ ಬಾಳಿಗೇರ್‍ಯಾಗ ಸಾರ್‍ಯಾರು ॥ ೬ ॥
ಕೂಡು॥ ಕವಿ ಮಾಡಿ ಅಪ್ಪಣ್ಣ ಕೈಮುಗದ
ಮೀರಬಾರದು ಗುರುವಿನ ಮಾತು ॥ ಚಾಕ ॥

★ <u>ಕ್ಷೇತ್ರ ಲಾವಣಿಗಳು</u> ಭರತ ಭೂಮಿ ಸರ್ವಧರ್ಮಗಳ ಸಮನ್ವಯ ಕ್ಷೇತ್ರ. ಜಾತಿ ಬೇಧವನ್ನು ಎಣಿಸದೆ ಎಲ್ಲರನ್ನು ಸಮಾನವಾಗಿ ಕಾಣುವ ಸಾಂಸ್ಕೃತಿಕತೆ ಇಲ್ಲಿದೆ. ಅನೇಕ ಕ್ಷೇತ್ರಗಳು ಸ್ಥಳ ಮಹಾತ್ಮೆ ಇಂದ ಪ್ರಸಿದ್ಧವಾಗಿವೆ. ಕಷ್ಟದಲ್ಲಿ ಭಕ್ತರನ್ನು ಕಾಪಾಡಿದ ದೇವರು ಇಂತಹ ಕ್ಷೇತ್ರಗಳಲ್ಲಿ

ಶಾಶ್ವತವಾಗಿ ನೆಲೆಸಿದ್ದಾನೆಂಬುದು ನಮ್ಮ ಜನಪದರ ಅನಿಸಿಕೆ. ಅಂತಹ ಕ್ಷೇತ್ರಗಳು ನೂರಾರು. ಅವುಗಳಲ್ಲಿ ಮಹಾರಾಷ್ಟ್ರದ ಪಂಡರಪುರ ವಿಠ್ಠಲನಿಂದ ಪ್ರಖ್ಯಾತಿ ಹೊಂದಿದೆ. ಆಂಧ್ರದ ಶ್ರೀಶೈಲಂ ಕ್ಷೇತ್ರ ಸಾಕ್ಷಾತ ಮಲ್ಲಿಕಾರ್ಜುನನ ಕಾರ್ಯಕ್ಷೇತ್ರ. ಈ ಕ್ಷೇತ್ರಗಳನ್ನು ಲಾವಣಿ ಕಾರರು ಹಾಡಿ ಹೊಗಳಿದ್ದಾರೆ.

ಭಲೆ ಭಲೆ ಬುದ್ಧಿ ವಂತರ ಕೂಡದಿರಿ ಹಾಡಾ ನೀವು ಕೇಳುದಕಾ ।
ಜನಾ ಹೋಗುದು ಶ್ರೀಶೈಲ ಕಾ । ಪುಣ್ಯ ಭೂಮಿ ಆ ಪಟ್ಟಣಕ
ಅನಬೇಕ ಶ್ರೀಶೈಲ ಪರವುತಕಾ ॥ ೧॥
ನೀರ ಮಣ್ಣಿನಿಂದ ಆಕಾರ ನಿಂತಿತೊ ಗಗನ ಶಿಖರ ತೋರುದು ।
ಭೂ ಮತಾ ಭೂಮಿಗಿ ಅನ್ನುದು ।
ಇದೇ ಮಠದ ವಳಗ ಶ್ರೀಶೈಲ ಪರ್ವತ ಮಲ್ಲಿಕಾರ್ಜನ ಇರುವುದು ॥ ೨॥
ಶ್ರೀಶೈಲ ಅಂಬು ಕಿವಿಲೆ ಕೇಳಿದವರಿಗಿ
ದೋಷ ದೂರ ಆಗುದು । ಪರಂ ಪದವಿ ನಿಮಗ ದೊರೆಯುದು ।
ಪುಣ್ಯ ಕ್ಷೇತ್ರ ಆ ಪರ್ವತಕ ಅನಬೇಕ ಸುಪ್ರಸಿದ್ಧವಾದದ್ದು ॥ ೨॥
ಆ ಪರ್ವತ ಬೆಟ್ಟದಾಗ ಅರವತ್ತ ಕೊಳ್ಳ ಅಂತ ।
ಭಾರತ ಪುರಾಣ ಸಾರುದು।
ಸುಳ್ಳಂದಿ ಮಾತ ಖರೇ ಇದು ।
ಹಾಲಗಂಗಾನ ಹಿಡಿದ ಹದನೆಂಟ ಕೊಳ್ಳ ।
ಇವು ನಿರಿಂತರ ನೀರ ಹಿರಯವದು ॥ ೪॥ ಚಾಲ ॥
ಆ ಶ್ರೀಶೈಲದ ಆಕಾರ ಜಿಲ್ಲೆ ನಂದಿ ಕೋಟುರ ತಾಲೂಕಿನಲ್ಲಿ
ಇರುವದು ಶ್ರೀಶೈಲ ಬೆಟ್ಟಾ ।
ಆ ಬೆಟ್ಟದಾಗ ಶಿಂವಾ ಪಾರ್ವತಿ ಹೋದಾರ ಜೋತಿರಲಿಂಗ ಒಂದಿಟ್ಟಾ
ಆ ಪಾರ್ವತಿ ಹೋದಾರ ಜೋತಿರಲಿಂಗ ಒಂದಿಟ್ಟಾ ।
ಆ ಪರ್ವತ ಗುಡ್ಡ ಗಂವಾರಾ ॥ ಗಾಂಡಾಂತರ ಗವಿ ಕಾಂತಾರಾ ।
ಅದಕ ಅನ್ನೂರು ಮಿರಗನೂರ ಶ್ಯಾರಾ ।
ಸುತ್ತೆಲ್ಲ ಸುವರ್ಣಾ ಬೆಟ್ಟ ಗಗನ ಮಂಟಪಾ ಶ್ರೀಶೈಲದ ಶೆಡಗರಾ ॥ ೧॥

ಅಲ್ಲಿ ಹುಲಿ ಕರಡಿ ಸಿಂಹ ಸಾರಂಗ ತಿರಗತಿದ್ದು ಭಯಬಿಟ್ಟಾ ।
ಮದ್ದಾನಿ ಕಾಡಾಕಳ ಹಿಂಡ ಇರುವದು ತಿರಮೂಲಿ ಕೊಳ್ಳದ ಬೆಟ್ಟಾ।
ಆ ನಲಮಲೆ ಬೆಟ್ಟದ ಮ್ಯಾಲ ಗೊಲ್ಲರ ಇರುವದು ಬಿಲ್ಲ ಬಿಡುರು
ತಪ್ಪದೆ ಮುಜರಿ ಇಟ್ಟಾ। ಆ ಪರ್ವತ ಪಲ್ಲೆ ಬಹುದೂರಾ ।
ಸಮುದ್ರಬಿಟ್ಟ ಮ್ಯಾಲ ಕಂತರಾ। ಹದಿನೈದನೂರ ಅಡಿ ಎತ್ತರಾ ।
ಅದಕ ಕೈಲಾಸ ಅನ್ನೂರು ಶ್ರೀಶೈಲ ಪರ್ವತ ನಗರಾ ॥ ೨॥
ಆ ಪರ್ವತ ಲಿಂಗಕ ಐದ ಹೆಸರ ಪ್ರಸಿದ್ದವಾದುದು ಮಾತ ಕೇಳೋ ಚಿತ್ತಕೊಟ್ಟಾ।
ಆ ಶ್ರೀಶೈಲ ಪರವುತ ಮಲ್ಲಿಕಾರ್ಜುನಂತ ಕಂತಾರ ಐದ ಹೆಸರಿಟ್ಟಾ ।
ಒಂದ ಲಿಂಗಕ್ಕ ಐದ ಹೆಸರಿಟ್ಟ ಕಂತಾರ ಶಿಖರ ನೋಡಿ ಸಿರಸ್ಸಿಟ್ಟಾ।
ಆ ಶ್ರೀಶೈಲ ಅಂಬು ಹೆಸರಾ। ನಾಲ್ಕು ದಿಕ್ಕ ನಾಡಾಗ ಶ್ಯಾಹಿರಾ ।
ಕನ್ನಡ ತೆಲಗು ಎರಡು ಕೂಗತಾವ ಶಾಸ್ತ್ರ ॥ ಕೂಡು ॥
ಓದಿ ಕೊಂಡಾವಗ ಇದರ ಬೇಧ ಠಾವಿಕಿ ಶ್ರೀಶೈಲದ ಕೌತುಕಾ।
ಸುಳ್ಳಂದಾವ ಹಳ್ಳಿ ಮೂರಖಾ ॥ ಪುಣ್ಯ ಭೂಮಿ ॥ ಚೌಕ ॥
ಪುಣ್ಯ ಭೂಮಿ ಆ ಪರವುತ ಬೆಟ್ಟದಾಗ ನೀರದಾರಿ ಸುತ್ತೆಲ್ಲಾ ।
ತಂಪದವನಾ ಹಣ್ಣ ಹಂಪಲಾ ।
ತಂಪ ವನದಾಗ ಸಂಪಸ್ವರಾ ತಗದ ಇಂಪದ ರಾಗಾ ಮಾಡು ಕೋಗಿಲಾ ॥ ೧॥
ಹೊಡೆಯ ಕ್ಯಾದಿಗಿ ಕುಡಿ ಮಲಲ್ಲಗಿ ಮಿಂಚ ಹೋಳಿಯುವ ಗೊಂಚಲಾ ।
ಘನವಾದ ವನ ಸುತ್ತೆಲ್ಲಾ ।
ಹಂತಾ ವನದ ವಳಗ ಮುನಿ ಕನ್ಯೆಳು ತಪಾ ಮಾಡಿದ್ದ ಸುಳ್ಳಲ್ಲಾ ॥ ೨॥
ಗಂಗಾ ತೀರ್ಥ ತಂದ ಲಿಂಗಕ ಎರವತಿದ್ದಳ ರಂಗಾ ಹೋದ ಸುತ್ತೆಲ್ಲಾ ।
ಲಿಂಗ ಪೂಜಾ ಮಾಡುವಳು ಅನಗಾಲಾ ।
ಅಚ್ಚ ಬಿಳುಪಾದ ಮಲ್ಲಿಗಿ ಹೋವಿನ ಹಾರ ತಂದ
ಯೇರಸೂಳ ಆ ಲಿಂಗದ ಮ್ಯಾಲಾ ॥ ೩ ॥ ಚ್ಯಾಲ ॥
ಮಹಾ ಮಹಾ ಮುನಿಗಳ ಬಂದ ಕೂಡಿದಾರ ಅದೇ ।

ಲಿಂಗದ ಆ ಶೃಮಕಾ ।
ಆ ಸ್ತ್ರೀಯೇಳ ಪೂಜಾ ಮಾಡಿದ ಲಿಂಗ ನೋಡಿದಾರ ಕಣ್ಣಾ ಗಂಡ ಕೌತುಕ .
ಆ ಮಲ್ಲಿಗಿ ಹೂವಿನ ಮಾಲಿ ಲಿಂಗಕ ಹೊಳಿಯತ್ತಿತ್ತ ಥಕಥಕಾ ।
ಲಿಂಗ ಪೂಜಾ ಮಾಡಿದ ಶೆಡಗರಾ । ನೋಡಿ ಶರಣ ಮಾಡ್ಯಾರ ಶರಣರಾ ।
ಇದಕ ಕಾರಣಾ ಶ್ರೀಶೈಲ ಅಂತ ಪ್ರಸಿದ್ದ ವಾಸದಿತ ಹೆಸರಾ ॥೧॥
ಗಾದಿ ಮಾತ ಓದಿದವಗ ರಾವಿಕಿ ಬರದಿಟ್ಟಾರ ಹಿಂಗ ಜನಕಾ ।
ಆ ಮಲ್ಲಗಿ ಹೂವಿನ ಹಾರ ನೋಡಿ ಮುಸಲ್ಮಾನ್ರ ಅಲ್ಲಾ ಅಂದ್ರ ಮಲ್ಲಿಕಾ ।
ಅದರಂತೆ ಶ್ಯಾಹಿರಾ ಮಲ್ಲಿನಾಥ ಮಲ್ಲೆಶ್ಯಾ ಅನ್ನೂರು
ಹಿಂದು ಜನರ ಪರವುತಕಾ ಆ ಪರವುತ ಅಂಬಾವನ ಹೆಸರಾ ।
ಪರ್ವತಗಿರಿ ಅಂತ ನಾಡಾಗ ಆದಿತ ಜ್ಯಾಹೀರಾ ॥ ೨ ॥
ಪುಣ್ಯ ಭೂಮಿ ಆ ಪರ್ವತಕ ಹೊದಾರ ಪಾಂಡವರ ಮುಂದ ದ್ವಾಪರಕಾ ।
ಪಾರ್ಥವೀರ ಅರ್ಜುನ ಪೂಜಿ ಮಾಡಿದ ಮುಂದ ಅದೇ ಲಿಂಗಕಾ ।
ಆ ಮಲ್ಲಿಕಾರ್ಜುನಂತ ಹೆಸರ ಉಳಿದತೋ ಕಲಿಯುಗದಾಗ ಕಡಿತನಕಾ ।
ಹಿಂದ ಭಕ್ತಿ ಪರ್ವತದಾಗ ಅವರ ಹೆಸರಾ ।
ಕದಲಿ ಬನದ ವಳಗ ಅವರು ತಪಾ ತಗದವರಾ ॥ ೩॥
ಕೂಡು ಕೃತ ಯುಗದಾಗ ಮುನಿ ಕನ್ಯೆಯೊಬ್ಬಳು ಪೂಜ್ಯಾ ಮಾಡ್ಯಾಳ ನೇಮಕಾ ॥
ಪುಣ್ಯ ॥ ೨॥ ಚೌಕ ॥
ನಂದೇಶ್ವರ ಬೆಟ್ಟ ನೈರೂತ್ಯ ಮೂಲ್ಯಾಗ ನಿಂತ ನೋಡೋ ಮ್ಯಾಲಕಾ ।
ಐವತ್ತು ಮೈಲ ದೂರತಕಾ ।
ಶ್ರೀ ಶೈಲ ಶಿಖರದ ಜ್ಯೋತಿ ಹೊಳಿಯುತ್ತಿತ್ತು ನಂದೇಶ್ವರ ಬೆಟ್ಟಕಾ ॥ ೧॥
ಭೀಮ ಗದಾ ಹೊಡೆದ ಭೂಮಿ ಸೀಳಿತೋ ದ್ವಾಪಾರದಾಗ ಹಿಂದಕಾ ।
ಭೀಮನ ಕೊಳ್ಳ ಅನ್ನೋರು ಕಡೀತನಕಾ ।
ಬ್ರಮ್ಹಾ ವಿಷ್ಣು ತಪಾಮಾಡಿ ಹ್ವಾದ್ರು ಬಂದ ಅದೇ ಕೈಲಾಸ ಬಾಗಿಲಕಾ ॥ ೨॥
ಸುಗ್ಗಲದೇವಿ ಮಗಾ ಸಿದ್ದರಾಮೇಶ್ವರ ಕೊಳ್ಳ ಅಂತಾರೋ ಶ್ರೀಶೈಕಲಕಾ ।

ಬಲವಂತ ಅನಸಿದ ಎಲ್ಲದಕಾ ।

ಕಲಿ ವಳಗ ಖರೇ ದೇವರಾಗಿ ತೊರಿದ ಸೊನ್ನ ಸೊಲ್ಲಾಪೂರಕಾ ॥ ೩॥ ಚಾಲ ॥

ಬ್ರಹ್ಮ ಲಾಂಬಿಕಿ ಬಹುಭಕ್ತಿ ಮಾಡಿದ ಕಾರಣ ತೋರುದ ಚೌರಮ್ಮನ ಗುಡಿಯೋ ।

ಘಂತಿ ಮತಾ ಘಂತಾ ಕರ್ಣ ಕಟ್ಟಿಸಿದಾನ ತಪ್ಪದೆ ಬಾಯಿಲೆ -ನುಡಿಯೋ ।

ಮುತ್ಯಾ ಮುದಮಲ್ಲಪ್ಪ ಕಾಯಕ ಮಾಡಿ ಕಂಡಾನ ಕೈಲಾಸ

ಗುಡಿಯೋ ಬ್ಯಾಳಿ ಬಸಪ್ಪ ಅನ್ನದಾಹಾರ ಬಿಟ್ಟಾ ।

ಬಿದರಕ್ಕಿ ಬ್ಯಾಳಿ ಅವನ ಊಟಾ। ಬತ್ತಿಸ ಬಾವಿ ಶೆಳಿಕೊಟ್ಟಾ ।

ಮಲ್ಲಿಕಾರ್ಜುನ ಅವರ ಮಸ್ತಕ ಮ್ಯಾಲ ಹಸ್ತ ಇಟ್ಟಾ ॥ ೧॥

ಆ ಪರ್ವತ ಗಿರಿ ಎಲ್ಲಾ ಪಾರಮಾರ್ಥದ ಆಸನ

ಮಹಾತ್ವಿಕರ ಮಾತ ನೆಂಪ ಹೊಡಿಯೋ ನಿನ್ನ ದೋಷಿ

ನಾಶಮಾಡಿ ಈಸನ ವಲಸಿಕ್ವಾ ಅವರಂಗ ಮುಂದ ನೀದುಡಿಯೋ।

ಆ ರಂಗ ಭೂಮ್ಯಾಗ ಕೋತಿ ಲಿಂಗದ ಹೆಸರ ಹಿಂದ ಉಳವಾದ

ಬಾಯಿಲೆ ನುಡಿಯೋ । ಶಿಲ್ಪಕಲ್ಲ ಶ್ರೀಶೈಲದ ಗುಮ್ಮತಾ ।

ಬಲ ಚಂದ ಕಾಣುದು ಬಹು ಘಾತಾ । ಹೊಳೆಯುವ ವಜ್ರದ ಗುಮ್ಮಟಾ ॥ ೨ ॥

ಶ್ರೀಶೈಲಕ ಅನೇಕ ಪುಣ್ಯ ತೀರ್ಥಗಳು ಶರಣೇಂದ ಶಿವಮಂತ್ರ ನುಡಿಯೋ।

ಏಕ ಅಲ್ಲಾ ಹಜಾರ ನಾಮ ಖಾಸ ಹೌದ ಆ ಪರ್ವತ ಮಲ್ಲಯ್ಯನ ಗುಡಿಯೋ।

ಜಂಗಮ ದಕ್ಷಿಣಾ ದಾನಾ ಮಾಡಿ ಮುಂದ ಮೋಕ್ಷದ ಮಾರ್ಗಾ ಹಿಡಿಯೋ

ಬಾಳಿಗೇರಿ ಬಹು ಘಾತ । ಪದಾ ಮಾಡಿ ಹೇಳ್ಯಾರ ಐಕಟ್ಟಾ ।

ಸಿದರಾಮ ಬೈರಿ ಹ್ವಾದ ಮತಿ ಕೊಟ್ಟಾ ।

ಅಪ್ಪಣ್ಣ ಸಾರಿದಾನ ಕಲಿಗಿ ಬಿರದ ಬರದಿಟ್ಟಾ ॥ ೩ ॥ ಕೂಡು ॥

ಶರಣಕ ಸಂಗತಿ ಊಟಕಾ ॥ ಪುಣ್ಯ ॥ ೩ ॥ ಚೌಕ ॥

★ <u>ಶಿವ ಶರಣರ ಲಾವಣಿಗಳು</u> ೧೨ ನೇ ಶತಮಾನದಲ್ಲಿ ಧರ್ಮ ಹದಗೆಟ್ಟು ಬದುಕು ಅಂಧಕಾರದಲ್ಲಿ ಮುಳಗಿದ್ದ ಸಂದರ್ಭದಲ್ಲಿ ಬಸವಣ್ಣನವರು ಶ್ರೀ ಸಾಮಾನ್ಯನಿಗೂ ಬದುಕುವ ಹೊಸ ಆಶೆ ಮೂಡಿಸಿದರು. ಸಮಾಜದಲ್ಲಿ ಜಾತೀಯತೆಯ ಸುಳಿಯಲ್ಲಿ ಸಿಕ್ಕು ಒದ್ದಾಡುತ್ತಿದ್ದ ಬದುಕನ್ನು

ಸುಂದರವಾಗಿ ರೂಪಿಸಲು ಕಾಯಕದ ಮಹತ್ವ ಸಾರಿದರು. ಅವರ ನೇತೃತ್ವದಲ್ಲಿ ಅನುಭವ ಮಂಟಪದಲ್ಲಿ ದಿನನಿತ್ಯ ವಿಚಾರ ವಿಮರ್ಶೆ ನಡೆಯುತ್ತಿತ್ತು. ಅಂದು ಯಾವುದನ್ನು ಊಹಿಸುವದಕ್ಕೂ ಅಸಾಧ್ಯವಾಗಿತ್ತೋ ಅದನ್ನು ಸಾಧ್ಯವಾಗಿಸಿದರು. ಎಲ್ಲ ಜಾತಿಯ ಜನರು ಸರಿ ಸಮಾನರಾಗಿ ಅನುಭವ ಮಂಟಪದಲ್ಲಿ ಸಮಾನತೆಯ ಮಂತ್ರ ಪಠಿಸುವದರೊಂದಿಗೆ ಆಚರಿಸುತ್ತಿದ್ದರು. ಆ ಕಾಲದ ಎಲ್ಲ ಶಿವಶರಣರನ್ನು ರಗಳೆ ಕವಿ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾನೆ. ಅಂತಹ ಶಿವಶರಣರ ಕುರಿತು ಲಾವಣಿಕಾರರು ಲಾವಣಿ ರಚನೆ ಮಾಡಿದ್ದಾರೆ. ಅವರಲ್ಲಿ ಹರಳಯ್ಯನವರ ಕುರಿತು ಅಪ್ಪಣ್ಣ ಕವಿ ರಚಿಸಿದ ಲಾವಣಿ ತುಂಬಾ ಸ್ವಾರಸ್ಯಕರವಾಗಿದೆ.

ಹರಳಯ್ಯನವರ ಊರ ಕಲ್ಯಾಣ । ಇರಬೇಕಂತ ಬರದ
ಇಟ್ಟಾರ ಕೆಲವು ಗ್ರಂಥದಲ್ಲಿ । ಹೆಚ್ಚು ಕಾಲ ಗಳದಾರ
ಅವರು ಕಲ್ಯಾಣದಲ್ಲಿ । ಈ ಮಾತ ಸರ್ವರಿಗೂ ನೆನಪಿರಲಿ ।
ಹರಳಯ್ಯನವರ ಊರ ಖುದ್ದ ಸುರಪೂರ ।
ಅಂತ ಶಿದ್ದವಾತೊ ಶಾಸ್ತ್ರದಲ್ಲಿ । ಗುಲಬರ್ಗಾ
ಕಲಬುರ್ಗಿ ನಗರದಲ್ಲಿ ॥ ೧ ॥
ಗುಲಬರ್ಗಾದಿಂದ ಹದಿನಾರ ಮೈಲಿದೂರ । ಸುರಪುರ
ಇರವುದು ಗಿಡ ಗುಂಪುದಲ್ಲಿ । ಸಮಗಾರ ತಂಡ ಬೆಳೆದೀತ ಅಲ್ಲಿ।
ಚರಮಗಾರ ಅನ್ನುರು ಅಸ್ರಾಂತದಲ್ಲಿ ।
ಮನಿಕುಲದೇವರು ಅರಳು ಲಿಂಗೇಶ್ವರನ ಸ್ಥಾಪನ
ಮಾಡ್ಯಾರ ಮುಂಭಾಗದಲ್ಲಿ । ನಿಮ್ಮ ನಾಮದ ಬಲವು ಒಂದ ನಮಗಿರಲಿ ॥ ೨ ॥
ಅದೇ ದೇವರ ಹೆಸರ ಸಮಗಾರ ।
ವರ್ಗದವರು ಹರಳಯ್ಯ ಅನ್ನುವರು ಲೌಕಿಕರಲ್ಲಿ ।
ಸಮಾಧಾನ ಹರಳಯ್ಯನವರು ಗುಣದಲ್ಲಿ। ಸದಾ ಹೋಲಿಯುರು ।
ಪಾದರಕ್ಷಿಮನಿಯಲ್ಲಿ । ಬೀಗನ ಮಗಳ ಕಲ್ಯಾಣವತೀನ ಹರಳಯ್ಯಗ
ಕೊಟ್ಟ ಮದುವಿ । ಮುಗಶ್ಯಾರ ಶುಭ ಮೋರ್ತದಲ್ಲಿ ।
ಸತಿಪತಿ ಪ್ರೇಮ ಶಿವಭಕ್ತಿ ಮೋಡಿ ॥೩ ॥

ಭಕ್ತಿ ಭಂಡಾರ ಬಸವಣ್ಣನವರ ಭಕ್ತಿ ಬೀಜಾ ಬೆಳಸಿ ಬಿಟ್ಟಾರ ಕಲ್ಯಾಣದಲ್ಲಿ ।
ಶಿವ ಅನುಭವ ಮಟ ಕಟಿಸಿದ ಮೇಲಿ ।
ಶಿವರಶರಣರ ಬೆಟ್ಟ ಬೆಳದಿತ ಅಲ್ಲಿ ।
ಕೀಳಜಾತಿ- ಜನಾ ವೀರಶೈವ ರಾದ್ರ ಬಸವಣ್ಣನವರ ಬಂದ ಕಾಲದಲ್ಲಿ ।
ಜ್ಯಾತಿ- ಬೇಧ ಬಡದ ಓಡಿಸಿದ ಅಲ್ಲಿ ॥ ೪ ॥ ಚಾಲ ॥
ಮೇದಾರ ಕೇತಯ್ಯನ । ಮಡಿವಾಳ ಮಾಚಯ್ಯನ ।
ಮಾದರ ಚನ್ನಯ್ಯನ ಅನ್ನಾ ಉಂಡಾನು । ಲಿಂಗಾಕಟ್ಟಿ
ಜಂಗ ಜಾಂಗುಟಿನಾದ ನುಡಿಶ್ಯಾನು ॥ ೧ ॥
ಮಾವಿರ ಮಾತಂಗಿ ಮಗನಾ ಮಾರ್ಕಂಡೇಶ್ವರನ ।
ಕರಸಿ ಬಸವಣ್ಣ । ಹಸ್ತ ಇಟ್ಟಾನು ಕೋಟಿ ।
ಶರಣರ ವಳಗ ನೇಟಂಗ ಡಂಗರ ಸಾರ್‍ಯಾನು ॥ ೨ ॥
ಹಡಪದ ಹಂಪಯ್ಯನ । ಡೋಹರ ಕಕ್ಕಯ್ಯನ ।
ನುಲಿ ಚಂದಯ್ಯನ । ಆಳ ಆದಾನು ।
ಗುಡ್ಡ ಕೋಗಿ ಹುಲ್ಲಕೋದ ಮಾರಿ ಕೂಲಿ ಕೊಟ್ಟಾನು । ೩ ॥ ಚಾಲದುಸರಾ॥
ಶರಣರ ಸುದ್ದಿ ಹರಳಯ್ಯನವರ ಕೇಳ್ಯಾರು ।
ಸತಿ -ಪತಿ ಕೂಡಿ ಕಲ್ಯಾಣಕ ಬಂದಾರು ॥ ೧ ॥
ಚಪ್ಪಲದಂಗಡಿ ಸಮಗಾರ ಓಣ್ಯಾಗ ಇಟ್ಟಾರು ।
ಪಾದರಕ್ಷಿ ತಯಾರಿಸಿ ಶರಣರಿಗಿ ಪುರೋಶ್ಯಾರು ॥ ೨ ॥
ಅನುಭವದ ಮಟಕ ದಿನಾ ಬಸವ ಹೋಗುದ ನೋಡ್ಯಾರು ।
ಹರಳಯ್ಯನವರ ಬಸವಣ್ಣಗ ಬೆಟ್ಟಿ ಆದಾರು ॥ ೩ ॥ಕೂಡು ॥
ಹರುಷ ಆಗಿ ಹರಳಯ್ಯ ಕುಣದಾಡಿದ ಬಸವಣ್ಣನವರ ಬೆಟ್ಟಿಆಗುತಲಿ ।
ಮುಗಳ ನಗಿ ನಕ್ಕ ಅವನ ನೋಡುತಲಿ । ಸಮಗಾರಾಂವ ಅಂದ ನಾ ಕುಲದಲ್ಲಿ ॥
ಹರಳಯ್ಯನವರ ॥ ೧ ಚೌಕ ॥
ಅನುಭವದ ಮತಕ ದಿನ್ನಾ ಬಸವ ಹೋಗುತ್ತಿದ್ದ । ಹರಳಯ್ಯಾ

ಮುಂದ ನಿಂತ ಕೈ ಮುಗಿದು। ಶಿವ ಶರಣಾರ್ಥಿ ಅಂದ ಪಾದಕ ಬಿದ್ದು।
ಬಸವಣ್ಣ ಶರಣ ಅಂದ ಉಪಕಾರ ಹೆಂಗ ತೀರಸಲಿವಂದು।
ತಿರಗಿ ಬಸವಣ್ಣಗ ಚಿಂತಿ-ಬಿತ್ತು ಹರಳಯ್ಯಂದು ॥ ೧ ॥
ತಿರಗಿ ಬಸವಣ್ಣ ಎಡರಸಾರೆ ಶರಣಾರ್ಥಿ ಅಂದ ।
ಹರಳಯ್ಯನ ಭಕ್ತಿಗಿ ವರಗೈದು । ಲಿಂಗ ಕಟ್ಟ್ಯಾನ ।
ಹರಳಯ್ಯನ ಕೊರಳಾಗ ತಂದು । ಭಸ್ಮ
ವಿಭೂತಿ ಹಣಿಯಮ್ಯಾಲ ಬರದು । ಖಂಡಿತ ಮಾತ ಇದು
ಮಂಡಲ ಈಶ್ಯಾನ ಆಣಿ । ಕೆಂಡದಂತ ಮಗ ಹುಟ್ಟುವದು.
ಪಾಂಡಿತ್ಯ ವಳಗ ಉಂಡ ಆಡುವದು ॥ ೨ ॥
ಇಷ್ಟ ಸಾರಿ ಬಸವಣ್ಣ ಹೊಂಟ ಹ್ವಾದ ಹರಳಯ್ಯ ।
ನಿಂತ ಅಲ್ಲಿ ದಿಂಗವಡೆದು । ಬಸವಣ್ಣ ಮಾಡಿದ ವಜ್ಜಿ ಹೊರಲಾರದು ।
ಅವನ ಉಪಕಾರ ಹೆಂಗ ನಮಗ ತೀರುವದು ।
ಮನಿಗಿ ಬಂದ ಹರಳಯ್ಯಾ ಮಡದಿಗಿ ಅಂದಾ ಗಂಡ ।
ಕೂಸ ನಮಗ ಹುಟ್ಟುವದು । ಬಸವಣ್ಣ ಸಾರಿ ಹ್ವಾದ ಕೈ ಬಡುದು । ೩ ॥ ಚಾಲ ॥
ಇಷ್ಟ ಗಂಡ ಹೇಣತಿಗಿ ಹೇಳಿದಾಗ । ಹರುಷ ಮನದಾಗ।
ಅಂತಾಳ ಗಂಡಗ। ಮಡಿಲಿಂದ ತೊಡಿ ಚರ್ಮ ಶೀಳರಿ ।
ಪಾದರಕ್ಷಿ ಹೊಲದಬಸಣ್ಣಗ ಒದ ಮೆಡಸರಿ ॥ ೧ ॥
ನಾವ ಇರುನು ಅವನ ಪಾದ ತೆಳಗ ।
ಪವಿತ್ರ ಜಾಗಾದಾಗ । ಸ್ವರ್ಗದ ಸುಖದಾಗ।
ಅಂದಾಳ ಅಸೂರ್ತಿ । ಅವನ ಪಾದಕ ನಾವು ಮುಕ್ತರಿ ॥ ೨ ॥
ತಮ್ಮ ಚರ್ಮ ಸುಲದಾರ ಸರಿಬಾಗ ।
ಕಟ್ಯಾರ ವಸ್ತ್ರದಾಗ । ಇಟ್ಟಾರ ಮಣಿಮ್ಯಾಗ ।
ಪಾದರಕ್ಷಿ ಹೊಲದ ಮ್ಯಾಲಿಟ್ಟ ಲಿಂಗ ಮುದ್ದರಿ ।
ವಜನ ಇದ್ದು ಪಾದರಕ್ಷಿ ಮಲ್ಲಿಗಿ ಹೂವಿನ ಸರಿ । ೩॥ ಚಾಲ॥

ಪಾದರಕ್ಷಿ ಓದಾರ ಅನುಭವದ ಮಠಕಾ ।

ಬಸವಣ್ಣಲಿಂಗ ಪೂಜಿಗಿ ಕುತ್ತ ವ್ಯಾಳೆಕಾ ॥ ೧ ॥

ಲಕ್ಷದ ಮ್ಯಾಲೆ ತೋಂಭತ್ತಾರು ಸಾವಿರ ಶರಣರ

ಕೂಡ್ಯಾರ ಪೂಜ್ಯಾಕಾ ।

ನೋಡಿ ಹರಳಯ್ಯ ಸರದಾನರಿ ಹಿಂದಕಾ ॥ ೨ ॥

ಮುಟ್ಟ ಅಂದಾರ ಕೂಡಿದ ಜನಲೋಕಾ ।

ಇಷ್ಟ ತಿಳಿದ ಹೋದಾನ್ರಿ ಬೈಲಕಾ ॥ ಕೂಡು ॥

ಸತಿ-ಪತಿ-ನಿತ್ತ ಬಜನಿ ಮಾಡತಾರ ಮಹಾದ್ವಾರ

ಮುಂಭಾಗದಲ್ಲಿ । ನಮ್ಮ ಶಿವಭಕ್ತಿ ಮಠಕ ಹೋಗಿ ಮುಟ್ಟಲಿ ।

ಹೆಂಗ ದೊರದಾನ ಬಸವಣ್ಣ ನಮಗಿಲ್ಲಿ । ಹರಳಯ್ಯನವರು ॥ ೨॥ ಚಾಕ ॥

ರಂಗಾ ಹೋದ ಅಂಗಳದಾಗ ಹರಳಯ್ಯಾ ಲಿಂಗ ಪೂಜಾ

ಹೊರಗ ನಡಿಸಿದಾನು । ಲಿಂಗ ಬಿಚ್ಚಿ ಅಂಗೈಯ್ಯಾಗ ಹಿಡಿದಿದ್ದಾನು।

ಮಡಿ ಮೀಸಲ ನೀರ ತಂದ ಎರಿಯುವನು ।

ಟಣಾ ಟಣಾ ಲಿಂಗ ಗೇನ ಚೊಟಿ ಜಿಗಿತ

ಮಠದ ಒಳಗ ಸಾಗ ಅಂದಾನು । ಬಸವಣ್ಣ ನೋಡಿ ಓಡಿ ಬಂದಾನು ॥ ೧ ॥

ಓಡಿ ಬಂದ ಬಸವಣ್ಣ ಹರಳಯ್ಯನ । ಅಪ್ಪಿಕೊಂಡ ಮುದ್ದಾಡಿದನು ।

ಕಯ್ಯ ಮುಗದ ಹರಳಯ್ಯ ಹಿಂದ ಸರದಾನು । ನಾ ಕುಲದಲ್ಲಿ

ಸಮಗಾರಾಂವ ಅಂದಾನು । ಮುಟ್ಟ ಬ್ಯಾಡ್ರಿ ಕೀಳ ಜಾತ್ಯಾವನಾ

ಹೇಳಿ ಕಯ್ಯ ಮುಗದ ನಿಂತಾನು । ಪಾದರಕ್ಷಿ ಮುಂದ ತಂದ ಇಟ್ಟಾನು ॥ ೨॥

ಪಾದರಕ್ಷಿ ಥೇಟ ಶಿವನ ವಾನ ಇದ್ದು ।

ಬಸವಣ್ಣ ನೋಡಿ ಶರಣ ಮಾಡ್ಯಾನು ।

ತೆಲಿಮ್ಯಾಗ ತಗೊಂಡು ಕುಣಿದಾಡಿದನು ।

ಹರಳಯ್ಯ ಮೆಟಕೊರಿ ಅಂತ ಹೇಳ್ಯಾನು ।

ಹೇ ಚೀ ಮುರ್ಖಾ ಶರಣಾ ಇದು ನನಗೆ

ಸಲ್ಲುದಿಲ್ಲ ಶಿವ ಶಿವ ಎಂದು ಭೂಮಿಗೆ ಎರಗಿದನು।
ಹರಳಯ್ಯಾ ಕೈ ಮುಗದ ಎಬ್ಬಿಶ್ಯಾನು ॥ ೩॥ ಚಾಲ॥
ಬಸವಣ್ಣ ಪಾದರಕ್ಷಿ ಇಟ್ಟ।
ಪೂಜ್ಯಾ ಮಾಡಿ ಬಿಟ್ಟ। ಆಶೀರ್ವಾದ ಕೊಟ್ಟ।
ಹರಳಯ್ಯಾನ ಮಚ್ಚಿಗಿ ಹೆಚ್ಚಾಗಿ ಜನ ಮೆಚ್ಚಲಿ।
ನಿನ್ನ ಪಾದರಕ್ಷಿ ದೇವರ ಮುಂದ ಪವಿತ್ರ ಆಗಲಿ ॥ ೧ ॥
ಮಾನವರಿಗೀ ಸಲ್ಲದೀ ಮೆಟ್ಟ । ಬಸವ ಹೇಳಿ ಬಿಟ್ಟ
ತಿರಗಿ ತಗದಕೊಟ್ಟ ಇಡರಿ ಓದ ದೇವರ ಮುಂಭಾಗದಲ್ಲಿ।
ಪಾದರಕ್ಷೆ ಪೂಜಾ ಜಗದಾಗ ಸದಾ ನಡೆಯಲಿ।
ಸತಿ ಪತಿಗೆ ಹೇಳಿ ಹಚಿಕೊಟ್ಟ।
ತುಗೊಂಡಾರ ಗಂಟ। ಭಕ್ತಿ ಬೆಳಸಿಟ್ಟ। ಹ್ವಾದ್ರ ಅದಕ್ಕೈಲಿ।
ಶಿವ ಶಿವ ಅನ್ನುತ ಬಾಯಿಲಿ ॥ ೩ ॥ ಚಾಲ ದುಸರಾ ॥
ಮಧು ಅರಸನ ಪುಂಡಾಟಿಕಿ ನಡಿದಿತ್ತ ಕಲ್ಯಾಣದಾಗ।
ಲಕ್ಷದ ಮ್ಯಾಲ ತೋಂಭತ್ತಾರು ಸಾವಿರ ಶರಣರ ಮ್ಯಾಗ ॥ ೧ ॥
ಮಧು ಅರಸ ಭೆಟ್ಟಿ ಆದ ಹರಳಯ್ಯಗ ನಡುದಾರ್‍ಯಾಗ।
ಥಕಾಥಕಾ ಹೊಳಿತ್ತಿದ್ದು ಪಾದರಕ್ಷಿ ಹರಳಯ್ಯನ ಬಗಲಾಗ ॥ ೨॥
ನೋಡಿ ಕಸಕೊಂಡ ಮಧು ಅರಸ ಮೆಟಗೊಂಡ ತನ್ನ ಕಾಲಾಗ।
ಧಣಾ ಧಣಾ ಉರಿಲಾಕ ಹತ್ತ ಉರ್ಪ ಹೆಚ್ಚಾಗಿ ಹೊಟ್ಯಾಗ ॥ ೩ ॥ ಕೂಡ ॥
ಮಧು ಅರಸ ಬಬ್ಬಿ ಹೊಡದ ಬಗಳತಾನ ಅಳತಾನ ಕುತ್ತ ತನ್ನ
ಬಳಗದಲ್ಲಿ। ಸಂಕಟ ಹೆಚ್ಚಾಗಿ ಅಂತಾನ ಹೆಂಗ ಮಾಡಲಿ। ಬಂದು
ಬಳಗ ಬಿಟ್ಟ ನಡದೀನ ಅಗಲಿ ॥ ಹರಳಯ್ಯನವರು ॥ ೩ ॥ ಚೌಕ ॥
ಬಿಜ್ಜಳ ರಾಜ್ಯಾನ ಮಂತ್ರಿ ಮಧು ಅರಸನ ಕಾವಲಗಾರ ಬಂದಾರ ಓಡಿ।
ಮನಿಗಿ ಓದ ಮನಿಗಿಶ್ಯಾರ ಹಾಸಿಗಿ ಮಾಡಿ।
ಮಂದಿ ಮಕ್ಕಳ ಜನಾ ಅಳತಾರ ನೋಡಿ। ಏಕಾ ಏಕಿ ಹಿಂಗ ಆಗು ಕಾರಣ

ಏನ ತಂದವರನ್ನ ಕೇಳತಾರ ಜಬರಿ ಮಾಡಿ ।

ಬಂದ ಪರಮುಖ ಜನರ ಎಲ್ಲಾರ ಕೂಡಿ ॥ ೧॥

ಅದರಾಗ ಮತ್ತೊಬ್ಬ ಗೊತ್ತ ಇದ್ದಾವ ಹೇಳತಾನ ।

ಆದ ಕಥಿ ಎಲ್ಲಾ ಉಗಡ ಮಾಡಿ । ನಾ ಹೋಗಿನ್ನಿ ಸಮಗಾರ ಕೇರಿ ಕಡಿ ।

ಹರಳಯ್ಯ ಶೀಳತಿದ್ದ ತನ್ನ ಮಡದಿತೋಡಿ । ತನ್ನ ಬಲಗಡಿ ತೋಡಿ ಚರ್ಮ

ಸುಲದ ಇಟ್ಟಾನ ಎರಡೂ ಮಡಿಕಿ ಮಾಡಿ ।

ಪಾದರಕ್ಷಿ ಹೊಲದ ಮ್ಯಾಲ ಚಿತ್ರ ತಗದ ಚಂದ ನಾಗರ ಹೆಡಿ ॥ ೨ ॥

ಅದ ಪಾದರಕ್ಷಿ ಬಸವಣ್ಣಗ ಕೊಟ್ಟಾನ ನಾ ಬಂದಿನ ಕಣಮುಟ ನೋಡಿ ।

ಬಸವಣ್ಣ ತಿರಗಿ ಕೊಟ್ಟ ಶರಣ ಮಾಡಿ । ಹರಳಯ್ಯ ತುಗೊಂಡ ಬಂದ ದಾರಿ ಕೂಡಿ ।

ಬಲಾತ್ಕಾರದಿಂದ ಬಗಲಾನ ಮಚ್ಚಿ ತಗದ ಮಧು ಅರಸ

ಮೆಟಕೊಂಡ ಜುಲಮಿ ಮಾಡಿ । ಬೇಕಾಗಿ ತೆಕ್ಕಿ ಹಾದ ಬೆಂಕಿ ನೋಡಿ ॥ ೩ ॥ ಚಾಲ॥

ಕಾವಲಗಾರ ಇಷ್ಟು ಹೇಳಾಣಾ । ಕೊಂಡಿ ಮಂಚಣ್ಣಾ ।

ಕುಕ್ಕ ನಾರಾಯಣ । ದಿಡಗ ಹೋದಾನು । ಬಸಪ್ಪಯ್ಯನ ಬೇಗ ತಂದಾನು ॥ ೧ ॥

ಮಧು ಅರಸಗ ಹೆಚ್ಚಾದ ಹೈರಾಣ । ನೋಡಿದ ಬಸವಣ್ಣ । ತೆರದ

ಕಿಡಿಗಣ್ಣ ಸಾರಿ ಹೇಳ್ಯಾನು । ತಪ್ಪದ ಮಡಿ ನೀರ ತಂದ ಯರಿರಿ ಅಂದಾನು ॥ ೨ ॥

ಅವನ ದಾಶ್ಯಾರ ಇಷ್ಟ ಕೇಳಾಣಾ । ಜಿಗದ ಠಣ ಠಣಾ । ನೀರಿಗಿ

ಹೋತ ಜನಾ । ಅರಸ ಹೇಳತಾನು । ಸಾವತಿನ ಸದ್ಯೆ ನನ್ನ ಪ್ರಾಣ

ಉಳಸರೆಂದಾನು ॥ ೩॥ ಚಾಲ ದುಸರಾ ॥

ಅವನ ದಾಸ್ಯಾರ ಹೊಂಟ್ರ ನೀರಿಗಿ

ಕೊಡ ತೆಲಿಮ್ಯಾಲಾ। ನೀರ ತಂದ ಹಣಿಸಿ ಬ್ಯಾಸತ್ರ ಬ್ಯಾನಿ ಸರಿಲಿಲ್ಲಾ ॥ ೧॥

ಮಾದೇವಿ ಮನಿದಾಸಿ ನೀರಿಗಿ ಹ್ವಾದಕ್ಕಿ ಬರಲಿಲ್ಲಾ ।

ಹರಳಯ್ಯನ ಮನ್ಯಾಗ ಸಿಂಧೂ ಪುರಾಣ ಕೇಳುತ ನಿಂತಾಳ ।

ನೀರಿಗೋದ ನೆನಪ ಇಲ್ಲಾ ॥ ೨॥

ಪಕ್ಕ ಅಂತ ನೆನಪ ಆತ ನೀರಿಗಿ ಹೋಗುತ ।

ಬಿತ್ತ ಮಬ್ಬಗತ್ತಲಾ । ಹರಳಯ್ಯನ ಕೊಂಡದಾನ ನೀರ ತುಂಬಿ ಶಿವಾ

ಅಂದ ಹೊತ್ತಾಳ ತೆಲಿಮ್ಯಾಲಾ ॥ ೩॥ ಕೂಡು ॥

ಮನಿದಾಸಿ ಮಾದೇವಿ ನೀರ ತಂದ ನಾಚ ಕುತ್ತಾಳ ಒಂದ ಮೂಲಿಯಲ್ಲಿ।

ನೀರ ತಂದಿನಿ ಸಮಗಾರ ಕೊಂಡದಲ್ಲಿ।

ನೀರ ಏಲ್ಲೀವ ಅಂದ್ರ ನಾ ಏನ ಹೇಳಲಿ ॥ಹರಳಯ್ಯನವರು ॥ ೪ ॥ ಚೌಕ ॥

ಮಧು ಅರಸನ ಮೆಯ್ಯಾಗ ಉರಪ ಹೆಚ್ಚಾಗಿ ಗುರಳಿ ಎದ್ದ

ಒಣಗೆತಿ ಮೋತಿ । ಕೂಡಿದ ಜನಾ ಕೂಗ್ಯಾಡತತಿ ।

ಅರಸನದಾಸಿ ಕೊಡಾ ತಂದ ಸುರವ್ಯಾಳ ಎತ್ತಿ।

ಅರಸ ಹುಸಾರಾದ ಪೈಲೆದಗತಿ ॥ ೧॥

ಅರಸ ಹುಷಾರಾಗಿ ಎದ್ದ ಕೈ ಮುಗದ ಕೂಡಿದ ಜನಾ ಮಾತಾಡತತಿ ।

ಈ ನೀರಿನ ಗುಣಧರ್ಮ ಬ್ಯಾರೇತಿ ।

ಹ್ವಾದ ಪ್ರಾಣ ನೀರಿನಿಂದ ಉಳದತಿ । ಖರೆ ಹೇಳವ್ವ ತಂಗಿ ನೀರ ಎಲ್ಲವ ತಂದಿ।

ದಾಸಿನ ಕೇಳತಾರ ಆದ ಕಥಿ । ಹಿಂತಾ ಪುಣ್ಯದ ನದಿದಾವಲ್ಲಿ ಅತಿ ॥ ೨ ॥

ದಾಸಿ ಹೇಳತಾಳ ಸಮಗಾರ ಹರಳಯ್ಯನ । ಕೊಂಡದಾನ ನೀರ ತಂದತಿ ।

ಹಸಿದೊಗಲಿನ ನೀರತಂದಯೆರದತಿ । ಇಷ್ಟ ತಪ್ಪ ಮಾತ್ರ

ನನಕಡಿ ಆಗೇತಿ । ಇಷ್ಟ ಕೇಳಿ ಜನಾ ಠಾಳಿ ಕೊಟ್ಟಾರ ಎದ್ದ

ಶಿವಶರಣರ ಬಗಿ ಬ್ಯಾರೇತಿ । ಖರೇ ಶರಣರ ಶ್ರಾಪ ಇವಗ ತಟ್ಯೆತಿ । । ೩॥ ಚಾಲ

ಇಷ್ಟ ಕೇಳಿ ಅರಸ ಹ್ವಾದ ಓಡಿ । ಸಮಗಾರ ಕೇರಿ ಕಡಿ

ಹರಳಯ್ಯನ ನೋಡಿ। ಹೋದ ಮನಿತನಕಾ ।

ನನ್ನ ತಪ್ಪ ಮಾಪಿ ಮಾಡ್ಯಂದ ಬಿದ್ದಾನ ಪಾದಕಾ ॥ ೧ ॥

ಅರಸ ಹೇಳತಾನ ಮಾತಾಡಿ । ಬೀಗತಾನ ಕೂಡಿ ।

ಇರುನು ಜೋಗುಳ ಹಾಡಿ । ಬೇಕಾಗಿ ಹೋಗುನು ಬಂಧು ಬಳಗಕಾ ।

ಹರಳಯ್ಯನ ಮಗ್ಗ ತನ್ನ ಹೊಟ್ಟಿ ಮಗಳನ ।

ಕೊಟ್ಟ ಮದುವಿ ಮಾಡ್ಯಾರ ಬೇಲಸೇಕಾ ॥ ೨॥

ಹರಳಯ್ಯನ ಗುಂಡಾ ತೋಡಿ

ಹ್ವಾದ ನೀರನೋಡಿ। ಲಿಂಗ ಪುಜ್ಯಾ ಮಾಡಿ । ಹರಳಯ್ಯನ ಕೊಂಡ

ಖೂನ ಉಳಿತ ಮರತೇಕಾ । ವಿಜಾಪೂರ ಜಿಲ್ಲಾ ಶೇಗುಣಸಿ

ಹಳ್ಳಿ ಹಂತೇಕಾ ॥ ೩॥ ಚಾಲ ॥

ಹರಳಯ್ಯನವರ ಕಥಿ ಸಂಕಲ್ಪ ಉಳದತಿ ॥ ೧॥

ಭಕ್ತಿ ಮಾಡಿದವರಿಗಿ ಮುಕ್ತಿ ಆಗುದಂತ ಗಾದಿ

ಮಾತ ಹೇಳತತಿ । ಉಪ್ಪ ಉಂಡವರಿಗೆಲ್ಲಾ ಗೊತ್ತ ಇದ್ದ ಮಾತ

ಇದು ಗುರುಪುತ್ರಗ ತೋರಿದಾ ॥ ೨॥

ಗುರು ಶಿದ್ರಾಮಚ್ಛೆರಿ ಸಾರಿ ಸದನಕ ಹ್ವಾದ ಹೆಸರ ಹಿಂದ

ಉಳದತಿ। ದವಿ ಕೇಳರಿ ಕವಿ ಹುಟ್ಟತಾವ ಬಾಳಿಗೇರ್ಯಾಗ ದಿನ್ನಾ ಚಡತಿ ॥ ೩॥ ಶ್ಲೋಕ ॥

ಕೇಳರಿ ಕೇಳ ಶ್ಯಾವಿರಾ ಜತ್ತಿ ಪರಗಣೆ ಬಸರಗಿ ಊರಲ್ಲಿ

ಶಿವರುದ್ರಪ್ಪಾ ಬಾಮಣೆ ಇವರು ಸಮಗಾರ ವರ್ಗದಲ್ಲಿ

ಜನಿಸಿ ಬಂದವರು। ಮಂತ್ರಿ ಮಂಡಳಿ ವಾಲಗದಲ್ಲಿ ಮುಂದಾಳಾಗಿ

ಆರಿಸಿ ಬಂದವರು । ಶಿವರಶರಣ ಹರಳಯ್ಯನವರ ಶಿವ ಪುರಾಣ

ತರಿಸಿ ಸತತ ಪೂಜಿ ಮಾಡುವರು । ಮಧ್ಯೆಪ್ರಾಂತ ಗೂಗಾಡ

ಗ್ರಾಮದಲ್ಲಿ ವೇದ ಮೂರ್ತಿ ಆದಂಥ ಶಿವಯೋಗಿ ಸ್ವಾಮಿಗಳು

ಶಿವಗದ್ದಿಗಿ ಮೇಲೆ ಕುಳಿತು ಶಿವಶರಣ ಹರಳಯ್ಯನ

ಪುರಾಣ ಓದಿ ಹೆಚ್ಚಾನ ಹೆಚ್ಚು ಭಕ್ತರಿಗಿ ಜ್ಞಾನ ಅಮೃತ

ಉಣ ಬಡಿಸುವರು ॥ ಕೂಡ ॥

ಶರಣರ ಮುನ್ನುಡಿ ಸಾರಿದ ಅಪ್ಪಣ್ಣ ವರವ ಬೇಡಿದ ಶರಣರ ಬದೀಲಿ ।

ಬಾಳಿಗೇರ್ಯಾಗ ಭಕ್ತಿಭಾಗ್ಯದ ಸಾಲಿ । ದುಡದವಗ ಪಗಾರ ದೊರಿಯುವುದು ಕೂಲಿ।

॥ ಹರಳಯ್ಯನವರು ॥ ಚೌಕ ॥

ಸ್ತ್ರೀ ಲಾವಣಿಗಳು :

ನಾಗೇಶಿ ಪರಂಪರೆಯವರು ಶಕ್ತಿಯನ್ನು ಹೆಚ್ಚು ಮಾಡಿ ಹಾಡು ಹೇಳುವರು. ಸ್ತ್ರೀಯರ ಪತಿವೃತಾ ಧರ್ಮ ಅವರು ಆಚರಿಸಿದ ಗಂಡನೆ ದೇವರೆಂಬ ಮನೋಭಾವವನ್ನು ಈ ಕೆಳಗಿನ ಸತ್ಯ ಸಾವಿತ್ರಿಯ ಪದವು ಸುಂದರವಾಗಿ ಸ್ತ್ರೀಯ ಮಹಿಮೆಯನ್ನು ಸಾರುತ್ತದೆ.

ಸತ್ವದಲ್ಲಿ ಸದ್ಭಕ್ತ ಸ್ತ್ರೀಯಳು ಸತ್ಯ ಸಾವಿತ್ರಿ ಹಂತವರು ।
ಯಾರಿಲ್ಲ ಯಮಲೋಕ ಏರಿ ಹೋದವರು। ಯಮಘಾಸಿ
ಬಿಡಿಸಿಕೊಂಡ ತಂದವರು । ಅಕ್ಕರು ದ್ರಮ್ಮಾ ಸತ್ಯ ಸಾವಿತ್ರಿ
ಶರಣರೊಳಗ ಶ್ಯಾಣ್ಯಾರಿವರು। ಸತ್ಯ ಸಾವಿತ್ರಿ ಸತ್ತ ಗಂಡನ ಪ್ರಾಣ ತಿರುಗಿ
ತಂದವರು ॥ ೧॥
ಅರುಂಧತಿ ಶರಣೆ ಮಿಗಿಲಾದವರು । ಲೋಪಾಮುದ್ರಿ ಸತ್ವದಲ್ಲಿ
ಸಾತ್ವಿಕರು। ವೇದವತಿ ಹಿಡದ ಅರವತ್ತಾರ ಮಂದಿ ಒತ್ತಿ
ಬ್ರಮ್ಮ ಉತ್ತರಖಾಂಡ ಸಿಕ್ಕಂದ ಪುರಾಣದಾಗ ಸಾವಿತ್ರಿ ವಿದ್ಯಾಸ ಹಿಂಗ ಸಾರುವರು ।
ಚಿತ್ತಿಟ್ಟ ಕೇಳರಿ ಮಹಾ ಪಂಡಿತರು ಆಕೆ ಭಕ್ತಿಗೆ
ಒಳಗಾದ್ರ ದೇವರಾರು । ಸತ್ಯ ಸಾವಿತ್ರಿ ತಂದಿ ಅಶ್ವಮತಿ ಮದ್ರ
ದೇಶದ ಅರಸರವರು । ಎಲ್ಲಾ ರಾಜರೊಳಗ ಭಾರಿ ಶ್ರೀಮಂತರು ॥ ೩॥
ಮದ್ರ ದೇಶದ ಅರಸನ ಮಗಳ ಸಾವಿತ್ರಿಗಿ ದೇವಲೋಕದ ಕನ್ಯಾ
ಅನ್ನುವರು । ಚಂದ್ರಕಾಂತಿ- ಚೆಲ್ವಕಿ ನೋಡಿ ಮರಳಾದರು । ರೂಪದಲ್ಲಿ ಇಲ್ಲ
ಅಕಿ ಹಂಗ ಯಾರೂ । ಮಂಗಲ ಸೌಭಾಗ್ಯವತೀನ ಮದವಿ ಆಗ ಬೇಕಂ ತ
ಎಲ್ಲಾ ರಾಜರ ಬಂದ ಕೂಡಿದರೂ । ಕನ್ಯಾ ನೋಡಿದರೂ ॥ ೪ । ಚಾಲ ॥
ರೂಪದಲ್ಲಿ ನಾರಿ ಬಲವಕ್ರ। ಹೊಳೆತ ಮುಖಾ ನಕ್ರ । ಲಕ್ಕಂತ ಒಮ್ಮಿಗಿಲಿ।
ತಪ್ಪಿ ಹುಟ್ಯಾಳ ಭೂಮಿಯ ಮೇಲಿ ॥ ೧ ॥ ಸೂರ್ಯಬಿಂಬ ಬಿಡುದರಾಗ
ಠಳಕ । ರಂಬಿಯ ಝುಳಕ । ಮಾಡತಿದ್ದಳ ಮುಂಜಾನೆ ಮುಡಲದಲ್ಲಿ।
ರಂಗ ಹೋದ ಗಂಗಿ ಪೂಜ್ಯಾ ಮಾಡುಳು ಕೂಡಲದಲ್ಲಿ ॥ ೨॥
ಶಿವಶರಣೆ ಇಕಿಸಿ ಶಿಲೋಮಣಿ । ಪಾಲಲೋಚನಿ । ವೇಧ ವಾಣಿ

ನುಡಿಯತಿದ್ದಳ ಬಾಯಿಲಿ । ನವರತ್ನ ಧರಸಿದಾಳ ಪದಕ ತನ್ನ ಕೊರಳಲ್ಲಿ ॥ ೩॥
॥ ಕೂಡು ॥ ಸದಾ ತಾಲಿಮದಾಗ ಗಮ್ಮತ್ತ ಮಾಡಿಕೋತ ತಾಳ
ತಂಬೂರಿ ವೀಣಾ ನುಡಸುವರು । ಸಾಧುರೊಳಗ ಸತ್ಯ ಶರಣರಿವರು ।
ಪರರ ಹಿತದ ಕಾಲಾಗ ಪ್ರಾಪಂಚಿಕರು ॥ ೧ ಚಾ॥
ಹೆಣ್ಣು ನೋಡಲಕ್ಕಿ ಹೋದಾವರಂತಾರ ಕನ್ಯಾ ನಮ್ಮ ಮನಸಿಗಿ ಬಂತು ।
ಇಂದ್ರ ಸಭಾ ಕೂಡಿಸಿ ತಗದಾರ ಮಾತು । ರಾಜಪುತ್ರಿನ ನಮಗ
ಕುಡಬೇಕು । ಸತ್ಯ ಸಾವಿತ್ರಿ ತಂದಿ ಹೇಳತಾನ ಮಗಳನ ಕೇಳಿ
ಮುಗಸುನ ಮಾತು । ಈ ಮಾತ ಎಲ್ಲಾರ ಮನಸಿನ ಬಂತು ॥ ೧॥
ತಂದಿ ಹೇಳತಾನ ತನ್ನ ಮಗಳಿಗಿ ನಮ್ಮ ದೈವ ಇಂದ ತೆರಿತಂತಾ ।
ನಮ್ಮ ತಕಾ ನೆಂಟಸ್ತಾನ ಗಂಟ ಬಿತ್ತು । ನಿನಗ ಒಪ್ಪು ಹಂತಾ ವರಾ
ಚಲು ದೊರಿತು । ಇಂದ್ರ ಸಭಾದಾಗ ಮಾತ ಕೊಟ್ಟದಿನ ನಿನ್ನ ಮಾಡಿ
ಕುಡತಿ ನಂತು । ಗೆಲಸ ನನ್ನ ಮಾತು ॥ ೨॥
ತಂದಿಗ ಮಗಳ ತಿಂಗಿ ಉತ್ತರ ಕುಡತಾಳು । ಸತ್ರ ಆಗದಪ್ಪ
ಈ ಮಾತು । ಖಂಡದ ಹಾಕಿರ ಚಿಂತಿ ಇಲ್ಲ ಇಂದ ನೀ ಕುಂತು ।
ನಿನ್ನ ಮಾತಗಿ ನನ್ನ ಮನ ನುಂದಿತು । ಅಲ್ಲದವರ ಮುಂದ
ಸಲ್ಲದ ಮಾತ ಹೇಳಿ ಬೆಲ್ಲಾ ಹಚ್ಚಿದರ ಏನಾತು। ಒಲ್ಲದ ವಗತಾನ
ಹೆಂಗ ಸಲ್ಲಿತು ॥ ೨॥ ಚಾಲ ॥ ಪರಸ್ತ್ರೀಯರ ಮ್ಯಾಲ ಮನಸ್ಸಿಟ್ಟ।
ದೇವೀಂದ್ರ ಹ್ವಾದ ಕೆಟ್ಟ ಮಾತ ಸುಳ್ಳಲ್ಲಾ। ಭಗಾ ಬಿದ್ದು
ಅವನ ಮೈಯೆಲ್ಲಾ ॥೧॥ ದೊಡ್ಡ ಮರಾ ಏರಿ ತೆನೊಕಲಾ ।
ಅಲ್ಲ ನನ್ನವರಾ ಕೇಳಂದು ತರವಲ್ಲಾ । ಗೊರಲಿ ಬೆಂಕಿಗೆಂದು
ಮುಟ್ಟುದಿಲ್ಲಾ ॥ ೨॥ ನಮ್ಮ ತಕಾ ಇರಬೇಕ ನಡಿತಾನ । ಯಾವತ್ತೂ
ಬಡತಾನ । ಇರಲಿ ಅನಗಾಲಾ । ಬಿಕ್ಕಿ ಬೇಡಿ ತಿಂದ್ರು ಚಿಂತಿಲ್ಲಾ ॥ ೩॥ ಕೂಡು॥
ಇಷ್ಟ ಕೇಳಿ ಅವರು ಹೊಂಟ ಹೋದಾರು ಕನ್ಯಾ ನೋಡಲಿಕ್ಕೆ ಬಂದವರು ।
ಯಾರಿಲ್ಲ ಇಕಿನ ಆಗು ಶಾಮರ್ಥರು । ಹಿಂಗಂತ ಹಂಗ್ರ

ಅವರು ಸಾರಿದರು ॥ ಅಕ್ಕ ॥ ೨ ಚೌಕ ॥

ಮಗಳ ಕುತ್ತ ತಂದಿಗಿ ಮಾತ ಹೇಳತಾಳ ಶಿರಬಾಗಿ ಮುಂದ ನಿಂತ
ಕೈ ಮುಗಿದು । ಪೂರ್ಣದಯಾ ಇರಲಿ ನನ್ನ ಮ್ಯಾಲ ನಿಂದು । ನಾಲ್ಕು
ದಿಕ್ಕ ನಾಡೆಲ್ಲಾ ನೋಡಿ ಆಗಕ್ಕಿ ನಾ ನನ್ನ ತಕ್ಕಾ ಚಲುವರಾಗದು
ನೋಡಿದವರ ಹೌಂದ ಅನ್ನುವಂಗ ಬಂದು ॥ ೧॥ ಇಷ್ಟ
ಅಕಿ ಹೊಂಟ ಹೋದಾಳೋ ಸತ್ಯ ಸಾಗರ ನದಿ ದಂಡಿ ಹಿಡಿದು ।
ಉತ್ರಖಾಂಡ ಅರಣ್ಯಕ ಹೋದಾಳ ದಾರಿ ಹಿಡಿದು । ಹುಲಿಕರಡಿ
ತಿರುಗತಿದ್ದು ಗುಡಗ ಹೊಡೆದು । ಊರ ಕೇರಿ ಮಂದಿ ಮಕ್ಕಳಿಲ್ಲ
ದಂಗಾತ ನಡದಾಳ ಮುಂದ ಹಂಗ ಸುಳುಹಿಡಿದು । ಮಾಯಾ
ಮಾಡಿದ ಮಾದೇವ ತಿಳಿಗುಡುದು ॥ ೨ ॥ ನೋಡಿದರ ಕತ್ತಲಿ
ಗವಂದಂಗ ಸುತ್ತ ಗಿಡ ಮೆಂಜೆಣ ಗೂಡ ಗವದು । ಹಕ್ಕಿ ಪಕ್ಷಿ
ಮಾತಾಡ ತಾವ ಕೈ ಬಡಿದು । ಯಾವ ಬಾಲಿ ಬಂದಾಳಿಲ್ಲ
ತಿಳಿಗುಡುದು । ದುಷ್ಟ ಮೃಗಗಳ ಕೆಟ್ಟ ಬಾಳ ಇಲ್ಲಿ ಬರತಾವ
ಮನಶ್ಯಾನ ನಾತಿಡದು । ಕುಡಿರಾವ ರಕ್ತ ಗಂಟಲ ಒಡದು । ೩॥ ಚಾಲ ॥
ಪಕ್ಷಿ ಮಾತ ಕೇಳ್ಯಾಳ ಆ ಬಾಲಿ । ಆಗುದ ಆಗಲಿ । ಅಂಜುದಿನ್ಯಾಕಾ
ನಡಾಕಟ್ಟಿ ನಡದಾಳ ಹುಲಿ ಕರಡಿ ಗವಿ ಎಡಬಲಕಾ ॥ ೧ ॥ ಹೊಕ್ಕಾಳ
ಮಿರಗನೂರ ಶ್ಯಾರ। ಸೇರ್‍ಯಾಳ ಕಾಂತಾರ । ನಡದಾಳ ಮುಂದಕಾ ।
ಊಚ ಉತ್ತೋದಿ ಪಟ್ಟಿಯ ಬನಕಾ ॥ ೨॥ ಸುತ್ತೆಲ್ಲಾ ಸುವರ್ಣದ
ಗಿಡಾ । ಗಂಗಾ ತೀರ ಧಡಾ। ನಿರಂತರ ನೀರ ಇದ್ದು ಆ ಬನಾಕಾ ।
ಯೋಳ ಸಮುದ್ರ ಕೂಡಿದ್ದು ಅಲ್ಲಿ ಪೃಥ್ವಿಸುತ್ತ ಹಾಕುದಕಾ ॥ ೩ ॥
ಯತ್ತ ನೋಡಿದರ ಚತ್ತ ಹೊಡಿಸಿದಂಗ ಘನವಾದ ವನಾಯಾರ
ಬೆಳಗಿಸಿದರು। ಇಲ್ಲಿ ಯಾರ ಇರಬಹುದು ಹಿಂತಾವನಾರಾಜರು । ಪುಣ್ಯಕ್ಷೇತ್ರ
ಅರಣ್ಯ ಇದಕ ಅನ್ನುವುರು ॥ ಅಕ್ಕ ರುದ್ರಮ್ಮಾ ॥ ೩॥ ಚೌಕ ॥
ವನದ ಶೆಡಗರ ವಯ್ಯಾರಿ ನೋಡಿದಾಳ ಅತ್ತಿ ಆಲದ ನಿತಕೊಂಡಾ ।

ಕಾಮಧೇನು ವಳಗ ಕಾಡಾತಲ ಹಿಂಡಾ । ತಂಡ ತಂಡ ತಿರುಗುವ ಹೆಡಿ ಎತ ಕೊಂಡಾ । ಹುಲಿ ಕರಡಿ ಇವ ದುಷ್ಟ ಮೃಗಗಳ ಮನುಷ್ಯನ ತಿಂಬುವ ಮುರಕೊಂಡಾ । ಆಡತಿದ್ದು ಚಿಗಿರಿ ಹಿಂಡ ಕರಕೊಂಡಾ ॥ ೧॥ ಕರುಣದಿಂದ ಕಾಲಹರಣ ಮಾಡತಿದ್ದು ಶಿವಶರಣರ ಪಾದ ಹಿಡಕೊಂಡಾ । ದುರ್ವಸನ ದೋಶೆಲ್ಲಾ ತೊಳಕೊಂಡಾ । ಸದ್ಗುಣ ದೇಹಾದಲ್ಲಿ ಹಿಡಕೊಂಡಾ । ಕುರಿಕುದರಿ ದನಾಕರಾ ಹುಲಿಮುಂದ ಸುಖಾ ದುಃಖಾ ಹೇಳುವ ತಿಳಿಕೊಂಡಾ । ಮಿಕಾ ಇವು ಗುಡ್ಡದಾಗ ಇರುವ ಗುಡಗ ಹೊಡಕೊಂಡಾ । ಇವಕಾಗಿ ಯಮ ಕಟಿಸಿದ ನರಕೊಂಡಾ । ಶ್ರೇಷ್ಟ ಪದವಿಗೆದ್ದು ಪುಣ್ಯ ಪಡಕೊಂಡಾ॥ ಭಕ್ತಿಮಾಡಿ ಮುಕ್ತಿ ಸ್ಮರಣೆ ಮಾಡತಿದ್ದು ಮೋಕ್ಷದ ಮಾರ್ಗ ತಿಳಕೊಂಡಾ ॥ ೩॥ ಚಾಲ ॥ ದೊಡ್ಡಶ್ಯಾರ ಪಟ್ಟಣದಾವ ಅರಸ । ಮಾಡತಿದ್ದ ವಾಸ । ಅದ ವನದಾಗ । ವಟವೃಕ್ಷ ಅಂದ್ರ ಒಂದ ಆಲದ ಗಿಡದ ತೆಳಗ ॥ ೧॥ ಇದ್ರ ಅವನ ತಾಯಿ ತಂದಿ । ಮಗಾ ಮೂರು ಮಂದಿ । ವ್ಯಾಳೆ ಗಳಿತಿದ್ರಿ ಘೋರ ಆರ್ಯಾಣದಾಗ। ಮೆದಿ ಹುಲ್ಲಿನ ಮನಿ ಕಟ್ಟಿಮನಗುರು ಗುಡಸಲದಾಗ ॥ ೨॥ ಅವರ ಊಟಕ್ಕ ವನದ ಭೋಜನ ತಪ್ಪಲದ ಹಣ್ಣಾ। ತುತ್ತಮಾಡಿ ಮಗಾ ಹಾಕುವ ಬಾಯಾಗ। ತಪ್ಪದೆ ಉಣಸತಿದ್ದ ವ್ಯಾಳೆ ವ್ಯಾಳೆಕ ಹಸದಾಗ ॥ ೩ ॥ ಕೂಡು ॥ ಇರಾದ ಒಬ್ಬಮಗಾ ತಾಯಿ ತಂದಿಗಿ ಮಗನ ಚಿಂತಿವಳಗ ಮರುಗುವರು । ದುಷ್ಟ ಮೃಗದೊಳಗ ನಾವು ಇದ್ದವರು । ಸುಳು ಇಲ್ಲ ಮಂದಿ ಮಕ್ಕಳ ಯಾರ್‍ಯಾರು ॥ ೪॥ ಚೌಕ॥ ತಂದಿ ಧುಮತ್ಸೇನ ಮಗಾ ಸತ್ಯವಾನ ಮಾತ ಕೇಳರಿ ಚಿತ್ತಿಟ್ಟ ಇದನಾ । ವಿಧಿ ಬೆನ್ನ ಹತ್ತಿತ ಅವರಿಗಿ ಎಷ್ಟೋ ದಿನಾ । ಲೂಟಿ ಮಾಡಿದ್ರ ಅವರ ಗಳಿಸಿದ ವತನಾ। ಮಗಾ ಹುಟ್ಟಿ ಮುಂದ ಹನ್ನೆರಡ ದರ್ಶಕ ತಾಯಿ ತಂದೀವ ಹೋದಾವ ಕಣ್ಣಾ। ಊರಬಿಟ್ಟ ಸೇರ್‍ಯಾರ ಅಡವಿ ಆರೇಣಾ ॥ ೧॥ ವಾಲ್ಮಿಕಿ ಋಷಿ ಹಾಂಗ ವನದಾಗ ಇದ್ರ

ಅವರು ಊಟ ಮಾಡತಿದ್ರ ತಪ್ಪಲ ಹಣ್ಣಾ । ಸಾಧು ಲಕ್ಷ್ಮಣ ಸಂಭಾಯಿತ ಸತ್ಯವಾನಾ ॥
ಕಾಮಧೇನು ಪೂಜೆ ಮಾಡಾವ ದಿನ್ನಾ । ವತಾವೃಕ್ಷದ ಗಿಡಕ ತೊಟ್ಟಲ
ಕಟ್ಟಿ ತೂಗುತ್ತಿದ್ದ ತಾಯಿ ತಂದಿನಾ ನಿತ್ಯ ಸೇವಾ ಮಾಡಾವ
ತಪ್ಪದೆ ದಿನ್ನಾ ॥ ೨॥ ಸತ್ಯವಾನ ಸದಾ ಬಜನಿ ಮಾಡತಿದ್ದ ಕುಣಿಯತಿದ್ದ
ಹಿಡಕೊಂಡ ವೀಣಾ । ಯಜ್ಞ ಕೊಂಡಕ ಹಾಕತ್ತಿದ್ದ ಪ್ರದಕ್ಷಿಣಾ ।
ಹುಲಿ ಕರಡಿ ಬಿದ್ದಿತ ಸ್ವಪ್ನಾ । ನಾಮ ಅಮೃತದ ನಾಲಿಗಿ ನಾದ ಕೇಳಿ
ಬಂದು ಎಲ್ಲಾ ಮೃಗದ ಸೈನಾ । ದೋಷ ದೂರ ಮಾಡಂತ ಹಿಡದಾವ ಚರಣಾ॥ ೩॥ ಚಾಲ॥
ಕಮಾಧೇನ ಕಾಡಾಕಳದನಾ ಕಾಯತಿದ್ದದಿನಾ ಮೇಸತಿದ್ದ ಬನ ಸಕ್ಕರಿ ಬನದಾಗ।
ನೀರ ಕುಡಿಸತ್ತಿ ಬಂದ ಗೌರಿ ಶಂಕರಿ ನದಿಯಾಗ ॥ ೧ ॥
ಸ್ನಾನ ಮಾಡತಿದ್ದಳ ಸಾವಿತ್ರಿ ಅದೇ ನದಿಯಾಗ । ದಿನ್ನಾ ಹರಿಯಾಗ ।
ಗಂಗಾ ತೀರದಾಗ। ಚಂದ್ರಕಾಂತಿ- ಚೆಲ್ವಿಕಿ ಆಕಿ ಬಿಂಬ ಹೊಳೆದ ನೀರಾಗ।
ಹೊಳಿತಿತ್ತ ಬಿಂಬ ಆಕಿರೂಪ ಚಿತ್ರಗೊಂಬಿ ಹಂಗ ॥ ೩ ॥ ಕೂಡು ॥
ಸತ್ಯವಾನಗ ಸಾವಿತ್ರಿ ದರ್ಶನಾತ ಏಕಾಂತ ಇಬ್ಬರು ಮಾತಾಡಿದರು ।
ಹೆಂತಾವರ ಅಂತಾನ ನಿನ್ನ ಹಡದವರು । ದೇವಲೋಕದ ಒಡಿಯಾರ
ದೇವಗನ್ಯಾರು॥ ಚೌಕ ॥ ಸತ್ಯವಾನಗ ಸಾವಿತ್ರಿ ಹೇಳತಾಳ ವೇದ ಮಂತ್ರ
ಬೋಧಿಸಿ ಅವಗ । ಸೌಭಾಗ್ಯವಂತಿ- ಸತಿ ಬೇಕ ನಿನಗ । ಯಮಾ ಘಾಸಿ
ತಪ್ಪುವದು ಆಕಿದಿಂದ ನಿನಗ । ಸತ್ವದಲ್ಲಿ ಸತ್ಯವಾನ ಶ್ರೇಷ್ಠ ಅಂತ
ಸುದ್ದಿ ಹೋತ ಇಂದ್ರ ಸಭಾದಾಗ । ಮೋಕ್ಷ ಇಲ್ಲ ಸತಿ ಇಲ್ಲದ ನಿನಗ ॥ ೧॥
ಸತಿ ಇಲ್ಲದೆ ಯಾವ ಯತಿಗೆ ಮೋಕ್ಷ ಇಲ್ಲಾ ಶೃತಿ ಶಾಸ್ತ್ರ ಹೇಳತಾವ ಹಿಂಗ ।
ಮೋಕ್ಷಕ ಸೂತ್ರಧಾರಿ ಸತಿ ನಿನಗ । ಸತಿ ದಿಂದ ಸದ್ಗತಿ ತಿಳಿಸ್ವರ್ಗದಾಗ ।
ಸತಿ ಬೇಕ ನಿನ್ನ ಪ್ರಾಣ ಸಂಕಟಕ ಲಗ್ನ ಆಗತೀನ ನಾ ನಿನಗ। ಹೇಳತಾಳ
ಅವಗ॥ ೨॥ ಮಾತ ಮುಗಿಸಿಕೊಂಡ ಮನಿಗಿ ಹೋದಾಳಕಿ ಹರುಷ
ಆಗಿ ತನ್ನ ಮನದೊಳಗ । ತಂದಿಗಿ ಹೇಳತಾಳ ಹೋಗಿ ಮನಿಯಾಗ । ಬತ್ತ
ಬಾಸಿಂಗ ಬಲಾನಂದ ಬಳಗದಾಗ। ವಾರಿಗಿ ಗೆಳತ್ಯಾರೊಳಗ ನನಗ ವಗತಾನ

ಚಲುದೊಂತ ವರಾ ನನಗ ಒಪ್ಪು ಹಂಗ। ಕಣ್ಣ ತೆರೆದ ಮಾದೇವ ಕೈಲಾಸದಾಗ ॥ ೩ ॥ ಚಾಲ ॥ ಮಗಳ ಮಾತಿಗಿ ತಂದಿ ಕಬಲಾದ । ನಾರದಾಗ ಬಂದ ತಗಸ್ಯಾರ ಹೊತ್ತಿಗಿ । ಚಲು ಮೊರ್ತ ಹುಡಿಕಿ ತಗಿರಿ ನನ್ನ ಮಗಳ ವದವಿಗಿ ॥ ೧ ॥ ನಾರದಸ್ವಾಮಿ ಹೇಳತಾರ । ನಿನ್ನ ಪತಿ ಹೆಸರ । ಹೇಳವ್ವ ಒಳಿತಾಗಿ । ಲಗ್ನ ಸುಭಾ ತಿಳಿತಾವ ತಾಂವಾಗಿ ॥ ೨॥ ಹೇಳತಾಳ ಹೆಸರ ಸತ್ಯವಾನ । ಆಗಕಿ ನಾ ಅವನ । ತಿರಗತಾನ ಭಗವೆ ತೊಟ್ಟ ಬಾವಾನಾಗಿ । ಕುರುಡರ ಆದಾರ ತಾಯಿ ತಂದಿ ಕಣ್ಣಿಲ್ಲ ಅವರಿಗಿ ॥ ೩॥ ಮನಿಮಾರ ಅವರಿಗಿ ಮೊದಲ ಇಲ್ಲರಿ ಘೋರ ಆರ್‍ಯಾಣ ವಾಸ ಮಾಡುವರು । ಕಾಡವನದ ಹಂಪಲ ತಿಂಬುವರು । ಮೆದಿ ಹುಲ್ಲಿನ ಮನಿವಳಗ ಮಲಗುವರು ॥ ೬ ॥ ಚೌಕ ॥ ಸತ್ಯ ಸಾವಿತ್ರಿಗಿ ನಾರದ ಹೇಳತಾನ ಮೋರ್ತ ತಗದ ನೋಡಿ ಮುಂದಿಂದು । ನಿನ್ನ ಮುತ್ತೊಂದಿತನ ಹೋಗುದು ಕಳದು । ಈ ಗಂಡ ಸಾಯಾವ ಮದಿವಿ ಆದಿಂದು। ಸತ್ಯವಾನ ಆದ್ರ ಇಟ್ಟಕುಂಕುಮ ಒಟ್ಟ ಕಟ್ಟಿದ ಗುಳಿದಾಳಿ ಹರದ ಹೋಗುವದು । ಅವನ ಮರಣ ನಿನ್ನ ಮುಂದ ಆಗುವದು ॥ ೧॥ ಸತ್ರ ಅಷ್ಟೇ ಹೋತ ಆದ್ರ ಆಗಕ್ಕಿ ಅವನ ಆಗು ಕಾರಣಕ ಅಡ್ಡ ಬರಬಾರದು। ವಚನ ಕೊಟ್ಟ ನಾರದ ಸ್ವಾಮಿ ತಾ ತಿಳಿದು । ಹೇಳತಾನ ಆಕಿ - ತಂದಿ ಕರದು। ಸತ್ಯ ಸಾವಿತ್ರಿನ ಸತ್ಯವಾನಗ ನಿಶ್ಚಿಯ ಮಾಡ್ಯಾರ ಮದವಿದು । ನಾಳಿನ ದಿವಸ ಲಿಬ್ಬಣ ಹೋಗುವದು ॥ ೨॥ ಕೊಂಬ ಕಾಳಿ ಇಲ್ಲದ ಲಿಬ್ಬಣ ನಡದಿತ ಊರ ಜನಾ ನೋಡಾತಾರ ಬಂದು । ಹೆಂತಾ ಖೋಡಿ ದೈವ ಸತ್ಯ ಸಾವಿತ್ರಿದು । ಬಂದು ಬಳಗ ಇಲ್ಲದ ಮದವಿ ಆಗುವದು। ಅಶ್ವ ಪತಿ ರಾಜಾನ ಮಗಳ ಸಾವಿತ್ರಿ ಖೋಡಿ ಹಣೆಬಾರ ಹೆಂತಾದು । ಬೇಕಂತ ಬಾವಾನ ಲಗ್ನ ಆಗುದು ॥ ಚಾಲ॥ ಬಾಲದಾರ ಪ್ರಧಾನಿಕೂಡಿ । ಬಿಟ್ಟಾರ ರಥ ಹೂಡಿ । ತಂದಿ ಮಗಳ ಕುತ್ರ ನಡು ರಥದಾಗ । ಕುದರಿ ನಡಸತಿದ್ದ ಬಾಲದಾರ ಚಿಡಿಯ ಕಯ್ಯಾಗ ॥ ೧॥ ರಥಾ ಬಿಟ್ಟ ಘೋರ ಆರೇಣ್ಯಕ । ಬನಸಕ್ಕರಿ ಬನಕ । ಗೌರಿ ಶಂಕರ

ನದಿಯಾಗ ಅರಿಷಣ ಹಚ್ಚಿ ಅಕ್ಕಿ ಕಾಳ ಒಗದ್ರ ಒಂದ ಘಳಿಗ್ಯಾಗ ॥ ೨॥
ಸಾವಿತ್ರಿ ಸತ್ಯವಾನನ ಹೆಣತಿ । ಇದ್ದಾಳ ಗುಣವಂತಿ ಬಿಡದೆ ಶಿವಮಮಂತ್ರ
ನುಡಿಯಕ್ಕಿ ಹರಿಯ್ಯಾಗ । ಕುರುಡಂದ್ರ ಅಕಿ ಅತ್ತಿಮಾವ ಹಿಂದ ಮನಿಯಾಗ ॥ ೩॥
॥ ಕೂಡ ॥ ಸತಿ ಪತಿ ಅವರ ಸಂಸಾರ ಸರಸಿಟ್ಟ ಶೆಡಗರದಿಂದ ಕಾಲಗಳಿ
ಯವರು । ದಾನಧರ್ಮದಲ್ಲಿ ದಯಾಳ ಗುಣದವರು। ಹುಲಿ ಮಲಾ ಚಿಗರಿ
ಕೂಡಿ ಮೇಸುವರು . ಅಕ್ಕ ರುದ್ರಮ್ಮ ॥ ೨ ॥ ಚೌಕ ॥ ಮದವಿ ಆದ
ಮುಂದ ಆರ ತಿಂಗಳಿಗಿ ಸತ್ಯವಾನ ಸಾಯು ನೇಮಿತ್ತು । ಈ ಮಾತ
ಸಾವಿತ್ರಿಗಿ ಗೊತ್ತಿತ್ತು । ಆರತಿಂಗಳ ಮುಗಿಲಾಕ ಒಂದಿನಾ ಕಡಿಮಿತ್ತು
ಸತ್ಯ ಸಾವಿತ್ರಿ ದುಃಖಾ ಮಾಡಿ ಅಳತಾಳ ತನ್ನ ಪತಿಯ ಪ್ರಾಣ
ಹೋಗುದ ಬತ್ತು। ನಾಳಿನ ಹೊತ್ತು ॥ ೧ ॥ ಮರದಿನಾ ಹರ್ಯಾಗೆದ್ದ
ಸತ್ಯವಾನ ಹೊಂಟ ಕುರಣಿ ಕಟಗಿ ತರಬೇಕಂತು। ಹೇಳಿದ್ದಿಲ್ಲ ಗಂಡಗ
ಅಕಿ ಈ ಮಾತು । ಹಿಂಬಾಲ ಹೋದಾಳ ನಾನು ಬರತಿನಂತು ।
ಸರ್ಪ ಆಗಿ ಯಮಾಕಚ್ಚಿ ಮಾಯ ಆದ ಸತ್ಯುವಾನ ಬಿದ್ಯಾನ ಸತ್ತು।
ತೆಲಿ ಹೋಗಿಲ್ಲ ಕಾಳ ಕರಕೊಂಡ ಹೋತು ॥ ೨॥
ಗಂಡ ಸತ್ತಾನಂತ ಸತ್ಯ ಸಾವಿತ್ರಿ ಅಳತಾಳ ದುಃಖ ಮಾಡಿ ವಿಪರೀತು ।
ಸತ್ತ ಹೆಣಾ ತೊಡಿ ಮೇಲೆ ಹಾಕೊಂಡ ಕೂತು । ಯಮಾ ಬಂದ ಕ್ವಾನಿನ
ಮ್ಯಾಲ ಕುತ್ತು। ಮಳಾ ಹಲ್ಲ ಮಾರುದ್ದ ನಾಲಗಿ ದೂರಿಂದ ಗದ್ದರಣಿ
ಹೊಡಕೋತು । ಸತ್ಯವಾನನ ಪ್ರಾಣ ಒಯ್ಯ ಬೇಕಂತು ॥ ೩॥ ಚಾಲ ॥
ಯಮಾ ಕುತ್ತ ಕ್ವಾಣೆನ ಮ್ಯಾಲ ಬಂದ । ನಿಂತ ಹೆಣದ ಮುಂದ । ನಾರಿ
ಯಾರ ದೂರ ಸರಿಯ ಅಂದಾನು । ನಿನ್ನ ಗಂಡನ ದಂಡದಾನ ಜೀವಾ
ಬಡಿವ್ಯಾರ । ಸಿಟ್ಟಿಗೇರಿ ಯಮಾ ಸಳಯ ಒಗದ । ಪ್ರಾಣ ತುಗೊಂಡ
ಜಿಗದ ಯಮಲೋಕಕ ಹೋದಾನು । ಬೆನ್ನತ್ತಿ ಹೋದಾಳ ಸಾವಿತ್ರಿ ಬರುದ
ನೋಡ್ಯಾನು ॥ ೩ ॥ ಕೂಡ ॥ ಸತ್ಯವಾನನ ಜೀವಾ ತುಗೊಂಡ ಯಮದೇವರ
ಯಮಲೋಕ ಪಟ್ಟಣ ಸೇರಿದರು । ಸತ್ಯ ಸಾವಿತ್ರಿ ಬರುದ ನೋಡಿದರು ।

ಹೆಂತಾ ಹಟಮಾರಿ ನಾರಿ ಅಂತ ನಗುವುವವರ ॥ ೮ ಚೌಕ ॥ ತೆಳಗಿಂದ
ಏರಿಮ್ಯಾಲ ಯಮಲೋಕಕ ಹೋದಾಳ ಸತ್ಯ ಸಾವಿತ್ರಿ ಸಾಧುರಮರಿ ।
ತರಬಿ ಯಮಧರ್ಮನ ಕೇಳತಾಳ ನಾರಿ । ನನ ಗಂಡನ ಪ್ರಾಣ ತಗದ ಹೊರಗೋಗಿರಿ।
ಕದ್ದ ತಂದ ಜಿವಾಗೆದ್ದ ಒಯ್ಯಕ್ಕಿ ನಾ ಜಮಾ ಖರ್ಚು ನೆಟ್ಟಿಗ ಬರಿ ।
ನನ್ನ ಕುಂಕುಮಕ ಕುಂದ ಹೆಂಗ ಹಚ್ಚಿದಿರಿ ॥ ೧ ॥ ನನ್ನ ಆಯುಷ್ಯಾ ಸವ್ವಾ
ನೂರ ವರ್ಷ ಅತಿ ಬರದಕ್ಕಿ ಶೆಟವಿನ ಕೇಳಿಕೋರಿ । ಮುತ್ತೈದಿ ಸಾವನಂದ
ತಳಕೋರಿ। ನೀವು ನನಗೆಂಗ ರಂಡಿತಾನ ತಂದಿರಿ । ಸುಳ್ಳ ಆದ್ರ ಬ್ರಮ್ಮ
ಶೆಟವಿ ಬರದ ಬರಿ ಅದರುಷ್ಟದ ಅಕ್ಷರ ಓದಕೋರಿ । ಬರೊಬ್ಬರಿ
ನ್ಯಾಯಮಾಡಿ ತಿಳದ ಹೇಳರಿ ॥ ೨ ॥ ಯಮಲೋಕದಾಗ ಈ ಮಾತ ಗಾದ
ಹಿಡಿತದ ಬ್ರಮ್ಮಗ ಅಂತಾರ ಶೆಟವಿನ ಕರಿ । ಖಾತೆ ತಗಸಿ ನೋಡ್ಯಾರ
ಶೆಟವಿಯ ಬರಿ । ಬ್ರಮ್ಮ ಓದಿ ಹೇಳಾವ ಮ ಆತ ನೆಂಪ ಹಿಡಿರಿ ।
ಸತ್ಯ ಸಾವಿತ್ರಿ ಮುತ್ತೈದೆ ಖರೆ ಅಕಿ - ಬ್ರಹ್ಮ ಹೇಳ್ಯಾನ ಡಂಗುರಸಾರಿ ।
ಸತ್ಯವಾನನ ಪ್ರಾಣ ಹಿಂತಿರಗಿ ಕುಡಿರಿ ॥ ೩ ॥ ಚಾಲ ॥ ಗಡಬಡಿಸಿತ
ಯಮಪೂರ ಪ್ಯಾಟಿ . ಆಕಾಶದ ಘಾಟಿ । ನುಡದ ಹೇಳಿತು । ಸತ್ಯ ಸಾವಿತ್ರಿ
ಗಂಡನ ಪ್ರಾಣ ಆಕಿಗಿ ಕುಡರೆಂತು ॥ ೧॥ ಸತಿದಿಂದ ಪತಿಗೆ ಆತು
ಮುಕ್ತಿ। ಸಾವಿತ್ರಿ ಭಕ್ತಿ। ನೋಡಿ ಗಂಡನ ಜೀವ ಪಿಂಡರ ಕೂಡಿತು ।
ಅಕಿ ಮುತ್ತೊದಿತನ ಮುರು ಲೋಕಕ ಸಾರಿತು ॥ ೨ ॥
ಕೈ ಮುಗದ ಆಕಿಗಿ ಯಮಧರ್ಮ । ನಿನ್ನಿಂದ ಎಲ್ಲಾ ಕರ್ಮ
ಹುರದ ಹ್ವಾದಿತು । ಸತ್ಯ ಸಾವಿತ್ರಿ ಹೆಸರ ಹಿಂದ ಉಳಿದಿತು ॥ ೩॥
ಸತ್ಯವಾನ ಸಾವಿತ್ರಿ ಕೂಡಿ । ಸತಿ ಪತಿ ಜೋಡಿ । ಸೆಡಗರ ನಡದೇತು ।
ಸಾವಿತ್ರಿ ಕವಿತಾ ಮುಗದಿತಾ ॥ ೪ ॥ ಕೂಡು ॥ ಕವಿ ಮಾಡಿ ಅಪ್ಪಣ್ಣ
ಕೈ ಮುಗದ ಹೆಳ್ಯಾನ ಕಲತ ಅವನ ಶಿಷ್ಯಾರು ಹಾಡುವರು। ಬಿಡದೆ
ಶ್ರಿದ್ರಾಮ ಬೈರಿ ಶೇವಾ ಮಾಡುವರು । ಬಾಳಿಗೇರಿ ಬಿರದ ಹಿಂಗ ಸಾರುವರು ॥ ೯॥ ಚೌಕ ॥

ಜನಪದರು ನಾವು ಮಾಡುವ ಕಾರ್ಯಕ್ಕೆ ನಮ್ಮ ಹಣೆಬರಹ ನಿರ್ಧರಿತವಾದ ನಿಲವು ತಾಳುತ್ತದೆ. ಎಂದು ಹೇಳುತ್ತಾರೆ. ಈ ನಿಲುವಿನ ಪ್ರತಿಪಾದನೆಗೆ ಮೂಲವಾದ ಅದೃಷ್ಟ ಬರೆಯುವ ದೇವತೆಯಾದ ಶಟವಿಯನ್ನು ಅವರು ತುಂಬಾ ಭಕ್ತಿಯಿಂದ ಹಾಡಿ ಹೊಗಳಿದ್ದಾರೆ. ಅಪ್ಪಣ್ಣ ಕವಿಯು ಬ್ರಹ್ಮನಿಗಿಂತ ಶಟವಿ ಅರ್ಥಾತ್ ಹೆಣ್ಣು ಶ್ರೇಷ್ಟ ಎಂಬುದನ್ನು ಶಟವಿ ಬ್ರಹ್ಮ ಪದ್ಯದಲ್ಲಿ ನಿರೂಪಿಸಿದ್ದಾರೆ. ಅದು ಈ ರೀತಿ ಇದೆ.

ಅದರುಷ್ಟಗೆರಿ ಹರಿಬ್ರಮ್ಮ ಬರಿತಾನ ಸೆಟವಿ ಚ್ಯಾಕರಿ ಮಾನಾ ।
ನೀವು ಕೇಳರಿ ಪಂಡಿತ ಜನಾ । ಬರದ ಬರಿಕುತ್ತ ಶೆಟವಿ ತಪ್ಪಿಸಿದ್ದಾಳ
ಕೈಲಾಸದಾಗ ನಡದಿತ ಕದನಾ ॥ ೧॥ ಶ್ಯಾರ ಪಟ್ಟಣದಾಗ ಅರಸ
ಇದ್ದನೊ ಹೆಂತಾ ಪುಣ್ಯವಾನಾ । ಸತಿ ಪತಿ ಜೋಡಿ ವಗತಾನಾ।
ಧನದ್ರವ್ಯ ಏನ ಕಡಿಮೆ ಇದ್ದಿದಿಲ್ಲ ಭಾರಿ ಊರಾಗ ಮನಿತಾನಾ ॥ ೨॥
ಪುತ್ರ ಸಂತತಿ ಅವರ ಹೊಟ್ಟಿಲಿ ಇದ್ದಿದಿಲ್ಲ ಕೊಟ್ಟದ್ದಿಲ್ಲ ಭಗವಾನಾ ।
ಚಿಂತಿವಳಗ ಸೊರಗಿ ಆದ್ರ ಸಂಣ್ಣಾ । ಮಕ್ಕಳಿಲ್ಲದ ಸಂತತಿ ಸಂಪತ್ತ
ನಮಗಿಲ್ಲ ಖೋಡಿ ನಮ್ಮ ದೈವಾನಾ । ಬರಾ ಹಿಂಗ ವಲ್ಲದ ಬಂಜಿತಾನಾ।
ರಾಜ ವೈಭವ ಎಲ್ಲಾ ಹಾಳಾಗುದ ಬಂತ ಇಂದ ನಮ್ಮ ಸಿಂಹಾಸನ ॥ ೪॥
॥ ಚಾಲ ॥ ಏನ ಖೋಡಿ ನಮ್ಮ ಹಣಿಬಾರಾ। ನಮ್ಮ ಮೇಲೆ ಮುನದೊ
ಶಂಕರಾ । ಕಲ್ಲ ಮಣ್ಣಿನ ಕಟಗಿ ದೇವರಾ । ಇದ್ದೇನ ಸುಡತಿ ಸಾವಿರಾ ।
ನಮ್ಮ ವ್ಯಾಳಿಕ ಇಲ್ಲ ಒಬ್ಬರ ಮಕ್ಕಳಿಲ್ಲದ ಮರಗತೀವ ವ್ಯರ್ಥ ನಮ್ಮ ಸಂಸಾರಾ।
॥ ೧ ॥ ಇವರ ಭಕ್ತಿಗಿ ಆಗಿ ಶಂಕರಾ । ಇಳದ ಬಂದ ಆಗಿ ಅಪನವರಾ ।
ಹೋಗಿ ನೋಡ್ಯಾನ ಅರಸನ ಸದರಾ । ಅರಸ ಕುತಿದ್ದ ಬಾಗಿಲ ಇದಿರಾ ।
ಸತಿ ಪತಿ ಜೋಡ ಇಬ್ಬರಾ । ನೋಡಿ ಹರುಷಾಗಿ ಯತಿ ಪಾದ ತೋಳದ
ಅವರ ಕುಡದಾರ ತೀರಥ ನೀರಾ ॥ ೨ ॥ ಇವರ ಭಾವಕ ಮೆಚ್ಚಿ ದೇವರಾ ।
ಪ್ರಸಾದ ಕೊಟ್ಟ ಅಂಗಾರಾ । ಆಗಲೆಂದ ನಿಮಗ ಪುತ್ತರಾ । ಹಸ್ತಿಟ್ಟ
ಮಾಡಿದ ಉದ್ದಾರಾ । ಪಿಂಡ ಮಾಡಿ ಆತ ಆಕಾರಾ । ಹರುಷಾದ್ರ ಸುದ್ದಿ ಕೇಳಿ

[illegible]

ಎಲ್ಲಾ ಊರ ಜನರಾ ॥ ೩ ॥ ಕೂಡು ॥ ಅರಸ ದೇವರಿಗಿ ಕಾಯಿ ಒಡಿತಿನಂದ
ನನ್ನ ಹೆಣತಿ ಹಡಿಯಾನಾ । ತರತಿನಂದ ತುಂಬಿದ ಬಡಿಯ್ಯಾಣಾ ॥

॥ ಬರದ ॥ ೧ ॥ ಚೌಕ ॥

ದಿನಾ ತುಂಬಿ ಅರಸನ ಹೆಂಡತಿ ಉಸರ ಹಾಕಿ ಕುತಾಳ ಹಡಿಲಾಕಾ ।
ಸುಲಗಿತ್ತಿ ಬಂದಾಳ ಸುವಕ್ಕಾ । ಗಂಡ ಕೂಸ ರಾಜಪುತ್ರ ಹುಟ್ಟಿ ಬಂದ
ಬೆಳಕ ಬಿದ್ದಂಗ ರಾಜ್ಯಕಾ ॥ ೧॥ ಕೂಸಿನ ಹಣೆಬಾರ ಹರಿಬ್ರಹ್ಮ ಬರಿತಾನ
ಅದರುಷ್ಟದ ಲೆಕ್ಕಾ । ಇದು ಇರುದು ಎಲ್ಲಾರ ಪಾಲಕಾ॥
ಅರಸಕಾಯಿ ಬಾನಾ ಕೊಟ್ಟ ಕಾವಲಿಟ್ಟ ಶೆಟವಿನ ಬಾಗಲಕಾ ॥ ೨॥
ಬ್ರಮ್ಮ ದೇವರ ಕೂಸಿನ ಹಣೆಬಾರ ಕೆಟ್ಟ ಬರದ ತಿರಗ್ಯಾನ ಹಿಂದಕಾ।
ಶೆಟವಿ ನಿತಾಳ ಬಾಗಲಕಾ । ಕೂಸಿನ ಆಸಿ ಹಣಬಾರ ಏನ ಬರದಿ
ಅಂತ ಕೇಳ್ಯಾಳ ಬೆಲಸೆಕಾ ॥ ೩ ॥ ಚಾಲ ॥ ಬ್ರಮ್ಮ ಓದಿ ಹೇಳಾವ ಪ್ರಕರಣಾ ।
ಹುಟ್ಟಿದ ಹದಿಮೂರ ದೇಶೀಯ ದಿನಾ । ಆ ಕೂಸಿಂದ ಆಗುದು ಮರಾಣಾ ।
ಆಕಾಶದಿಂದ ಆದಿನಾ । ಇಳದ ಬಂದ ಶೇಷ ನಾರಾಯಣಾ । ವಿಷಕಾರಿ
ಕಚ್ಚತಾನ ಸರವತ್ತಿಗ ಹಾರುದ ಪ್ರಾಣಾ ॥ ೧॥ ಇಟ್ಟ ನುಡಿದ ಕರದ ಮರಣಾ ।
ಅಪಶಕುನಾ । ಕೇಳಿ ಶಟವಿ ಆಗಿದಾಳ ಖಿನಾ । ಹೇಳತಾಳ ಕರದ ಅರಸನ್ನಾ।
ನಾಳಿ ಹದಮೂರದೇಶಿಯ ದಿನಾ । ನಿನ್ನ ಕೂಸಿಗಿ ಆಗುದ ಮರಣಾ
ಈ ಸುದ್ದಿ ಕೇಳಿ ಬಬ್ಬಿ ಹೊಡೆದ ಅಳತಾನಾ ॥ ೨॥ ಸತಿ ಪತಿ - ಅಳತಾರ
ಒಂದೇ ಸವನಾ । ಏಳ ವ್ಯಾಳೆ ತಂದ್ಯೋ ಭಗವಾನಾ । ಮೊದಲ ಕುಡಬಾರದಿತ್ತ
ಹಿಂತಾ ಮಗನಾ । ಕಣ್ಣಾರೆ ನೋಡಿ ಕಂದಾನಾ । ಈ ಕೈಲೆ ಕುಡುದ
ಬಂತ ಮಣ್ಣಾ । ಶಿವಗ ಶ್ಯಾಪ ಕುಡತಾರ ಬಂದ ಮಂದಿ ನೋಡಿ
ಶಿಸವಿನಾ ॥ ೩ ॥ ಕೂಡು ॥ ರಾಜ ಪ್ರಜೆಗಳೆಲ್ಲ ಚಿಂತಿ ಮಾಡತಾರ ಮಾಡುದ
ಇದಕಿನ್ನೆನಾ । ಅವಧಿಗಿ ಬತ್ತ ಕೂಸಿನ ಮರಣಾ ॥ ೨॥ ಚೌಕ ॥
ತಾಯಿ ಮಗನ ಮುದ್ದಾಡಿ ಅಳತಾಳ ಎನ್ನ ಅಗಲಿ ನಡದ್ಯೋ ಕಂದಾ ।
ಏನ ವ್ಯಾಳೆ ಶಿಂವಾ ತಂದಾ। ನಾಳಿಗಿ ಕೋಲತಾನ ನನ್ನ ಬಾಲಾನ

ಕೈಲಾಸದಿಂದ ಬಂದಾ ॥ ೧॥ ಅರಸ ಪ್ರಧಾನಿಗಿ ಶೆಟವಿ ಹೇಳತಾಳ
ಸ್ವಪ್ನದಾಗ ಉಳಸತಿನ ಕೂಸಿನ ಇದರಾಂದಾ ॥ ೨॥ ಶೆಟವಿ ಆಡಿದ
ಮಾತ ಕೇಳಿ ಮಾನಾಡ ಜನಾ ಅಡ್ಡ ಬಿದ್ರ ಮುಂದ । ಇದ
ಆಗದ ಯಾರಿಂದಾ । ಕಾಂತಾ ಸಂತತಿ ತೊಟ್ಟಿಲ್ಲ ಕಟ್ಟಿ ಜೋಗುಳ
ಹಾಡುದು ನಿನ್ನಿಂದಾ ॥ ೩ ॥ ಚಾಲು ॥ ಶೆಟವಿ ಅಂತಾಳ ಭಾಷಿಯ ಕೊಟ್ಟಾ।
ಹಸ್ತ ಕೂಸಿನ ತಲಿಯ ಮ್ಯಾಲಿಟ್ಟಾ । ಹೆಂಗ ಬ್ರಮ್ಮ ಬರದ ಅದರುಷ್ಟಾ।
ಎಷ್ಟು ಕೂಸಿನ ಆಶೆ ಕಡಿಮಿಟ್ಟಾ । ಕಣಿಕಿನಂಥಾ ಪಿಂಡ ಕಣಮುಟ್ಟಾ।
ಹೆಂಗ ಮಣ್ಣಾಗ ಹಾಕಿ ಬರಬೇಕ ಕೂಸಿನ ಕೈಮುಟ್ಟಾ॥ ೧ ।
ಶೆಟವಿ ನಡದಾಳ ಅವತಾರ ತೊಟ್ಟಾ। ಸಮಜ ಹೇಳಿ ರಾಜವಾಡೆ ಬಿಟ್ಟ।
ಹಸಿ ಆನಿ ದೊಗಲ ಮಡಿ ಉಟ್ಟಾ । ಹೋದಾಳ ರಣ ಕೂದಲ ಬಿಟ್ಟಾ।
ಮಿಣಿ ಮಾದರ ಗೇರಿಗಿ ಹೊಂಟಾ। ಆ ಕೇರಿ ಒಳಗ ಹೆಣ್ಣ ಕೂಸ
ಹುಟ್ಟಿತ್ತ ಒಂದ ಅದೇ ವ್ಯಾಳೆಕಾ ಅವಚಿಟ್ಟಾ॥ ೨ ॥
ಆ ಹೆಣ್ಣ ಕೂಸಿನ ಆದರಷ್ಟಾ। ಬ್ರಮ್ಮ ದೇವರ ಸುದ್ದ ಬರದಿಟ್ಟಾ।
ಸವ್ವಾ ನೂರ ವರ್ಷ ಆಶೆ ಕೊಟ್ಟಾ । ಮಾನ ಮುತ್ತೈದಿ ಸಾವ ಅಕಿಗಿಟ್ಟಾ।
ಇದನ ಶೆಟವಿ ಕೇಳ್ಯಾಳ ಕಿವಿ ಮುಟ್ಟಾ। ಬರದ ಬರಿಯ ಬ್ರಮ್ಮ ದೇವರ
ಖಾತೆ ಕೈಲಾಸದಾಗ ಇಟ್ಟಾ॥ ೩ ॥ ಕೂಡ॥ ಮಾದರಲ್ಲಿ ಸಣ್ಣ ಶಿಸುವು ಹುಟ್ಟಿ
ಬಂತ ಪದ್ಮ ಜಾತ ಹೆಣ್ಣಾ। ಕುತ್ತ ಕೇಳರಿ ಮಾನಾಡ ಜನಾ ॥ ಬರದ ॥ ೩ ಚೌಕ ॥
ಮಾಳಯ್ಯನ ಹೊಟ್ಟಿಲೆ ಹೆಣ್ಣಕೂಸ ಕೊಟ್ಟಿದ್ದ ಅವಗ ದೇವರಾ ।
ಕಣ್ಣ ಮೂಗಲೆ ಹೆಣ್ಣ ಸುಂದರಾ । ಸವಾ ನೂರ ವರ್ಷ ಆಶೆ ಕೊಸಿಗಿಟ್ಟ
ಬರದ ಬ್ರಮ್ಮ ದೇವರಾ ॥ ೧ ॥ ಕುಂಕುಮ ಸೌಭಾಗ್ಯವತಿ ಮುತ್ತೈದಿ
ಸಾವ ಅಕಿದು ಬರದಿಟ್ಟಾನ ಪೂರಾ । ನೋಡಿ ಅದರುಷ್ಟದ ಅಕ್ಷರಾ ।
ಶೆಟವಿ ಓದಿ ನೋಡ್ಯಾಳ ಅದರುಷ್ಟದ ಅಕ್ಷರ ಕೂಸಿನ ಹಣೆ ಬಾರಾ ॥ ೧॥
ಮಾದಾರ ಮನಿಯಾಂದ ಕೂಸಿನ ಇಸಕೊಂಡ ಶೆಟವಿ ಹ್ವಾದಾಳ
ಅಂವಸರಾ । ಅರಸನ ಮಗನ ಮದವಿ ತಯ್ಯಾರಾ । ಎರಡು ಕುಸಿಗಿ

ಅರಸಿನ ಹಚ್ಚಿ ಅಕ್ಕಿ ಕಾಳ ಒಗದ್ರ ನುಡದ ಮಂತರಾ ॥ ೩ ॥ ಚಾಲ ॥

ಸತಿ ಪತಿ ಎರಡು ಜೋಡಿಲಿ । ಹಾಕಿ ತೂಗ್ಯಾರ ತೊಟ್ಟಿಲದಲ್ಲಿ ।

ಅಷ್ಟೋತ್ತಿಗಿ ಯಮಾ ಬಂದ ಅಲ್ಲ । ಬಂದ ಕುತ್ತಿದ್ದ ಮಾಳಿಗಿ ಮ್ಯಾಲಿ ।

ಮಿಡಿ ಸರ್ಪ ಆದ ಮಂದಿ ನೋಡುತಲಿ । ಕಂದನ ಕಚ್ಚು ನೆಂಗ

ಹುಕುಮ ಇಲ್ಲದ ಕೈಯಲಿ । ಈ ಕಂದನ ಕೊಂದರ ಇಲ್ಲಿ । ದೋಷ

ತಟ್ಟುದ ನನ್ನ ಪದರದಲ್ಲಿ । ಇವನ ಮಡದಿ ಹಣಬಾರದಲ್ಲಿ ।

ಮುತ್ತೈದೆ ಸಾವ ಅಕಿಗಿರಲಿ । ಹಿಂಗ ಬರದ ಆಗದ ಯಾರ ಕೈಲಿ ।

ಮರತಿರಿ ಮಾತ ನೆಂಪ ಇರಲಿ । ಯಮಾ ಅಂತಾನಾ ಬಿತ್ತ ಮುಸ್ಕಿಲಿ ।

ಆ ಕಂದನ ಕೊಲವುದು ಎಂದಿಗಿ ಆಗದ ನನ್ನ ಕೈಲಿ ॥ ೩ ॥ ಕೂಡು ॥

ಶಿವಲೋಕದಾಗ ಕಾಗಾಳ್ಯಾತ ಕೂಡ್ಯಾರ ಶಿವಲೋಕ ಜನಾ ।

ನ್ಯಾಯ ತೀರಿಸಿ ಮಾಡಿರಿ ಬೋಜನಾ ॥ ೪॥ ಚೌಕ ॥

ಹಂತಾ ಸಭಾದಾಗ ಶೆಟವಿ ಹೇಳತಾಳ ಕೇಳರಿ ಚಿತ್ತಕೊಟ್ಟಾ ।

ಬ್ರಮ್ಮ ಬರೀತಾನ ಅದರುಷ್ಟಾ । ಬರೋಬ್ಬರಿ ಇದರ ನ್ಯಾಯ

ಮಾಡಿ ನಮಗ ತಿಳಿಸಿ ಹೇಳರಿ ಇಟ್ಟಾ ॥ ೧ ॥ ಅರಸನ ಮಗನ

ಹಣೆಬಾರಾ ಬರದ ಬಿಟ್ಟ ಮಾಡಿ ಕೆಟ್ಟಾ । ಆಶಿ ಹದಿಮೂರದಿನಾ ಇಟ್ಟಾ ।

ಸವ್ವಾ ನೂರ ವರ್ಷಂದರಾಸಿ ವಂದಕ ಪ್ರಮಾಣಾ । ಸಾರಿ ಹೇಳ್ಯಾರ

ಬಾಳಿಗೇರ್ಯಾಗ ಇದನಾ । ಜೋಡ ಕಾಯಿ ತುಂಬಿದ ಬಡಿಯಾಣಾ ।

ಆರ್ತಿ ಮಾಡತಾರ ಐದು ದೀಪಾ ಹಚ್ಚಿ ಶೆಟವಿಗಿ ಐದೇಶಿ ದಿನಾ ॥ ೨ ॥ ....

ಗುರು ಶಿದ್ರಾಮ ಬೈರಿ ಶಿಷ್ಯ ಅಪ್ಪಣ್ಣನ ಕವಿ ದೈಂವಕ ಹಸನಾ ।

ಕುಂತ ಕೇಳಿರಿ ಮಾನಾಡ ಜನಾ ॥ ೩ ॥ ಚೌಕ॥

★ ★ ★

೫ ಅಡಿ ಟಿಪ್ಪಣಿಗಳು

೧) ಡಾ॥ ಬಿ.ಎಸ್. ಭಜಂತ್ರಿ : ಹುಲಕುಂದ ಲಾವಣಿ ಸಂಪ್ರದಾಯ ಒಂದು ಅಧ್ಯಯನ : ಚೈತನ್ಯ ಪ್ರಕಾಶನ ಪಂಚಗಾಂವ ಅಗಸ್ಟ ೨೦೦೨ ಪುಟ- ೨೪೮.

೨) ಅದೇ ಪುಟ - ೨೪೮.
ಅದೇ ಪುಟ -೨೪೮.

೩) ಡಾ॥ ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ಪುಟ- ೧೯೬೪ ಪುಟ -೨೭೪.

೪) ವಸಂತ ಕಲ್ಲಪ್ಪ ಹೊಸಮನಿ ಹಾಡಿದ ಪದ್ಯ

೫) ಅಧ್ಯಾಯ ೫ ರಲ್ಲಿಯ ಭಕ್ತಿಸಾರ ಹರಳಯ್ಯ ಪದ್ಯದಿಂದ ಉಲ್ಲೇಖಿಸಲಾಗಿದೆ.

೬) ಅದೇ ಅಧ್ಯಾಯದ ' ಸತ್ಯ ಸಾವಿತ್ರಿ' ಪದ್ಯದಿಂದ ಎತ್ತಿಕೊಳ್ಳಲಾಗಿದೆ.

೭) ಅಧ್ಯಾಯ ೫ ರ ಅಂಬೇಡ್ಕರ ಪದದಿಂದ ಆರಿಸಿದ ಪದ್ಯ

೮) ಅಧ್ಯಾಯ - ೫ ರಲ್ಲಿಯ 'ಜಾತಿ ಅಭಿಮಾನ' ಪದದಿಂದ ಆಯ್ದುಕೊಂಡ ಪದ್ಯವಾಗಿದೆ.

೯) ಡಾ॥ ವೀರೇಶ ಬಡಿಗೇರ : ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ ವಿಮೋಚನಾ ಪ್ರಕಾಶನ ಅಥಣಿ- ೧೯೯೯ ಪುಟ- ೩೫೭.

೧೦) ಅಧ್ಯಾಯ- ೫ ರಲ್ಲಿಯ ' ಸತಿ ಸಾವಿತ್ರಿ ಪದ್ಯದ ಸಾಲುಗಳು

೧೧) ಅದೇ ಸಾಲುಗಳು

★ ಡಾ॥ ಬಿ.ಎಸ್. ಭಜಂತ್ರಿ ಹುಲಕುಂದ ಲಾವಣಿ ಸಂಪ್ರದಾಯ ಒಂದು ಅಧ್ಯಯನ ಪುಟ -೨೬೦.

ಅಧ್ಯಾಯ - ೬

ಅಧ್ಯಾಯ ೬
ಲಾವಣಿಗಳ ಸಾಹಿತ್ಯಕ ಮೌಲ್ಯ ವಿವೇಚನೆ

''ಮೌಲ್ಯ' ಎಂದರೆ ಅಳತೆ, ತೂಗಿ ನೋಡು ಬೆಲೆ , ಎಂದರ್ಥ''[೧] ಒಬ್ಬ ವ್ಯಕ್ತಿಯ ಗುಣಾವಗುಣಗಳನ್ನು ಅವಲೋಕಿಸುತ್ತೇವೆ. ವಸ್ತುವನ್ನು ನೋಡುತ್ತೇವೆ ಕೃತಿಯನ್ನು ಓದುತ್ತೇವೆ. ಅವುಗಳನ್ನು ಎಲ್ಲ ದೃಷ್ಟಿಗಳಿಂದಲೂ ತೂಗಿ ನೂಡಲು ಮನಸ್ಸು ಪ್ರಯತ್ನಿಸುತ್ತವೆ. ಒಂದು ತನ್ನದೆ ಆದ ನಿರ್ಧಾವನ್ನು ಹೇಳುತ್ತದೆ. ಈ ರೀತಿ ದೈನಂದಿನ ಜೀವನದಲ್ಲಿ ಮೌಲ್ಯಮಾಪನ Evaluation ಸಾಮಾನ್ಯ .

ಅನೇಕ ಸಂಘರ್ಷಗಳ ಸಾಂಕೇತಿಕತೆಯನ್ನು ಪ್ರತಿನಿಧಿಸುವ ಮನುಷ್ಯ ವರ್ಗ ಪ್ರಾಣಿ ವರ್ಗದಲ್ಲಿಯೇ ವಿಚಾರವಂತ ಪ್ರಾಣಿ. ಸೃಜನಶೀಲ ಗುಣ ಅವನ ಹಿರಿಮೆಯನ್ನು ಎತ್ತಿ ಹಿಡಿದಿದೆ. ಮನುಷ್ಯನ ವೈಯಕ್ತಿಕ ಭಿನ್ನತೆಗಳು ಅವನನು ಇತರ ವ್ಯಕ್ತಿಗಳಿಗಿಂತ , ಪ್ರಾಣಿಗಳಿಗಿಂತ ಭಿನ್ನನ್ನಾಗಿ ಮಾಡಿವೆ. ಅವರವರ ವೈಯಕಿತ್ತ ಕುತೂಹಲ, ಆಸೆ ಆಕಾಂಕ್ಷೆಗಳು ಅವರನ್ನು ಒಂದೊಂದು ವಿಧದ ಕ್ಷೇತ್ರದಲ್ಲಿ ಮುನ್ನಡೆಯುವಂತೆ ಪ್ರೇರೆಪಿಸಿವೆ. ಅದರಲ್ಲಿ ಸಿದ್ದಿಯನ್ನು ಸಾಧಿಸಿದ್ದಾರೆ. ಇದರಿಂದ ಅವರಿಗ ಆನಂದ, ಕೀರ್ತಿ, ಹಣ, ಅಂತಸ್ತು ಪ್ರಾಪ್ತವಾಗಿದೆ. ಕೆವಲರು ಹವ್ಯಾಸಕ್ಕಾಗಿ ಕಲೆಯ ಬೆನ್ನು ಹತ್ತಿದರೆ, ಇನ್ನು ಕೆಲವರಿಗೆ ಕಲೆಯೇ ಜೀವನವಾಗಿದೆ. '' ಮಾನವನ ಬದುಕು ಹಲವಾರು ಜೀವನ ಮೌಲ್ಯಗಳ ಭದ್ರ ಅಡಪಾಯದ ಮೇಲೆ ನ ಇಂತಿದೆ.''[೨]

ಸಾಹಿತ್ಯವು ಒಂದೊಂದು ಕಾಲದಲ್ಲಿ ಆಚರಣೆಯಲ್ಲಿರುವ ಮೌಲ್ಯಗಳನ್ನು ಉದಾತ್ತಿಕರಿಸಿ ಸಾರುತ್ತದೆ. ಸಾಹಿತ್ಯ ವೆಂದರೆ ಆ ಕಾಲದ ಸಮಾಜ ಸಂಸ್ಕೃತಿಯ ಪ್ರತಿರೂಪ[೩] ಬರಹಗಾರರು ಏನೇ ಬರೆದಿದ್ದರೂ ಅದು ಪರೋಕ್ಷವಾಗಿ ಅಂದಿನ ಜನಜೀವನದ ಸ್ಪಷ್ಟ ಚಿತ್ರಣ ನೀಡುವಲ್ಲಿ ಯಶಸ್ವಿಯಾಗುತ್ತದೆ. ಓದುಗರನ್ನು ಆಯಾ ಸನ್ನಿವೇಶದ ರಸಭಾವಾದಿ ರಸಗಂಧದಲ್ಲಿ ವಾಸ್ತವವಾಗಿ ಮೀಯುವಂತೆ ಮಾಡುತ್ತದೆ.

ಈ ದೃಷ್ಟಿಯನ್ನು ಮುಖ್ಯವಾಗಿಟ್ಟುಕೊಂಡು ಲಾವಣಿಗಳನ್ನು ಅವಲೋಕಿಸುವದು ಇಲ್ಲಿಯ ಪ್ರಮುಖ ಆಶಯವಾಗಿದೆ. 'ಲಾವಣಿ ಸಾಹಿತ್ಯ' ಸಮಗ್ರ ಜೀವನ ಚಿತ್ರಣ ನೀಡುತ್ತದೆ. ಸಾಹಿತ್ಯದ ಮೂಲಕ ಸಕಾಲಿಕ ಸಂದೇಶವನ್ನು ಸಾರುತ್ತದೆ. ಸದಭಿರುಚಿ ಮುಡಿಸುತ್ತದೆ. ಮಾಡುವ

[illegible]

ಕೆಲಸವನ್ನು ಅಚ್ಚುಕಟ್ಟಾಗಿ ಮಾಡಲು ಹುರಿದುಂಬಿಸುತ್ತದೆ. ಸ್ಫೂರ್ತಿಯ ಸೆಲೆಯನ್ನು ಚಿಮ್ಮಿಸುತ್ತದೆ. ಜಂಜಡದ ಬದುಕನ್ನು ವಾಸ್ತವಿಕ ನೆಲೆಯಲ್ಲಿ ಯೋಚಿಸುವಂತೆ ಮಾಡುತ್ತದೆ. ಬದುಕಿಗೆ ಹೋರಾಟ ಅನಿವಾರ್ಯ ಎನ್ನುವ ಸಾರವನ್ನು ದೃಷ್ಟಾಂತಗಳ ಎಳೆಯಿಂದ ಗಟ್ಟಿಗೊಳಿಸುತ್ತದೆ. ಬಳ್ಳಿಗೇರಿ ಲಾವಣಿ ಸಂಪ್ರದಾಯವು ಈ ಭಾಗದ ಮುಗ್ಧ ಜನತೆಯಲ್ಲಿ ಅರಿವು, ಕಳಕಳಿ, ಪ್ರಾಮಾಣಿಕತೆ, ಜ್ಞಾನ ಸಂಪತ್ತಿಯ ಅಭಿವೃದ್ಧಿಗೆ ಸಹಕಾರಿಯಾಗಿದೆ. ಈ ಮೌಲ್ಯವನ್ನು ಅಧ್ಯಯನ ಮಾಡುವದು ತುರ್ತು ಅಗತ್ಯವಾಗಿದೆ. ಈ ಅಧ್ಯಯನದಲ್ಲಿ ಬಳ್ಳಿಗೇರಿ ಸಂಪ್ರದಾಯದ ಲಾವಣಿಗಳು ಸ್ಪಷ್ಟವಾಗಿ ನೈತಿಕ, ಅಧ್ಯಾತ್ಮಿಕ, ಧಾರ್ಮಿಕ, ದೇಶಪ್ರೇಮ ಮನೋಭಾವಗಳನ್ನು ಮೂಡಿಸಿವೆ. ಎನ್ನುವ ಅಂಶಕ್ಕೆ ಪುಷ್ಟಿ ಒದಗಿಸುತ್ತವೆ. ಲಾವಣಿಗಳ ಸಾಹಿತ್ಯಕ ಮೌಲ್ಯವನ್ನು ಈ ರೀತಿಯಾಗಿ ಹೆಸರಿಸಿಕೊಂಡು ವಿವೇಚಿಸಲಾಗಿದೆ.

ಸಾಂಸ್ಕೃತಿಕ ವೈಶಿಷ್ಟ್ಯಗಳು : ಬಳ್ಳಿಗೇರಿ ಸಂಪ್ರದಾಯವು ಸಂಸ್ಕೃತಿಯಿಂದ ಹೆಪ್ಪುಗಟ್ಟಿ ಮುಪ್ಪರಿಗೊಂಡಿದೆ ಸೃಷ್ಟಿಯ ಅಗಾಧತೆ, ವಿಸ್ತಾರ, ಭಯಂಕರತೆಗಳು ಇಲ್ಲಿ ಸ್ಥಾನ ಪಡೆದಿವೆ. ಇವು ಕರ್ನಾಟಕ ಮಹಾರಾಷ್ಟ್ರ ಗಡಿಯ ಮಾತೃ ಸಂಸ್ಕೃತಿಯನ್ನು ಅಭಿವ್ಯಕ್ತಿಸುತ್ತವೆ.

೧. ಐತಿಹಾಸಿಕ, ಪೌರಾಣಿಕ ಸನ್ನಿವೇಶಗಳು ಸ್ತ್ರೀಯ ಮನೋಭಿಲಾಷೆ, ಸ್ತ್ರೀತ್ವ ತ್ಯಾಗದ ಪ್ರತೀಕಗಳಾಗಿವೆ. ಸ್ತ್ರೀನೀತಿ, ಮೌಢ್ಯತೆ, ಅಜ್ಞಾನಗಳನ್ನು ಕಂದಾಚಾರಗಳನ್ನು ಸರಸಗಾಟಾಗಿ ತಳ್ಳಿ ಹಾಕುವದರೊಂದಿಗೆ ಉತ್ತಮವಾದ ಮನೋಭೂಮಿಕೆಯನ್ನು ನಿರ್ಮಿಸಿವೆ.

೨. ''ಜನಸಾಮಾನ್ಯರ ಜೀವನಕ್ಕೆ ಬಂದರೆ ಅಲ್ಲಿ ಭಾವುಕತೆ ಹೆಚ್ಚಾಗಿದ್ದಂತೆ ತೋರುತ್ತದೆ. ಧರ್ಮದ ಹೆಸರಿನಲ್ಲಿ ನಂಬಿಕೆಗಳು ತೆರೆದುಕೊಳ್ಳುತ್ತವೆ. ಜನಪದರು ಸರಳ ಜೀವಿಗಳು. ಇಂತಹ ಮುಗ್ಧ ಕಲ್ಪನೆಯೇ ಜನರನ್ನು ದೈವದತ್ತ ಪ್ರೇರಣೆಗೆ ನೀಡಿದ ಅಹ್ವಾನವಾಯಿತು.

'' ಆಗಮು ನಿಗಮು ವಾಣಿಗೆ । ಗಿರಿಜೆ ಕಲ್ಯಾಣಿಗೆ ।

ನಾ ಬೇಡಿ ಕೊಂಬುವೆನು ಶಾರದಾ ಪಾರ್ವತಿಗೆ ।

ಸುಗುಣ ಗುಣ ಮಾಯಿಗೆ । ಅಗಣಿತ ಮಹಿಮೆಗೆ ।

ದುರಿತ ವಿರೋಧಿಗೆ । ಸೊಗಸಿನ ಸೀಮೆಗೆ ।

ಪೊಗಳು ಮುನಿ ಸಂತಾನಿಗೆ ''

ಹರದೇಶಿಯವಾರಾದರೆ

'' ಗಣಪತಿ ಗಜಾನನ ನೆನೆಪಿನ ನಾನ ನಿನ್ನ ಬಂದ

ಆಗಿರಿ ಪ್ರಸನ್ನ ಕೈಮುಗಿದು ನಿಂತೇನ''[೪] ಎಂಬುದನ್ನು ಹೇಳಿದರೆ ನಾಗೇಶಿಯವರು ಶಕ್ತಿಯನ್ನು ಆರಾಧಿಸುವದರೊಂದಿಗೆ ಲಾವಣಿಗಳನ್ನು ಹಾಡಲು ಆರಂಭವಾಗುವದು ತಿಳಿಯುತ್ತದೆ.

೩. ಈ ಸಂಪ್ರದಾಯದ ಕವಿಗಳಷ್ಟೇ ಅಲ್ಲ ಎಲ್ಲ ಸಂಪ್ರದಾಯದ ಕವಿಗಳು ಪುರಾಣ ಪ್ರಸಿದ್ಧ ಮಹಾತ್ಮೆ, ಪವಾಡ, ದೇವನ ಲೀಲೆ, ಕಾಲನ ಲೀಲೆ, ಭಕ್ತಿಯನ್ನು ವೈಭವಿಕರಿಸುವರು. ದೇವರು ಒರೆಗೆ ಹಚ್ಚಿ ಕೊನೆಗೆ ಒಳ್ಳೆಯವರಿಗೆ ರಕ್ಷಣೆ ನೀಡುವ ಕಥಾನಕ ವಸ್ತುಗಳನ್ನು ಆಯ್ದು ಕೊಂಡು ಲಾವಣಿಗಳು ರಚಿತವಾಗಿರುವದು ತಿಳಿಯುತ್ತದೆ. ಸಂಪ್ರದಾಯದ ಪ್ರಮುಖ ಕವಿ ಅಪ್ಪಣ್ಣ ವಸ್ತಾದನು ಹರಳಯ್ಯ, ಸತ್ಯಸಾವಿತ್ರಿ, ಶೆಟವಿ ಬ್ರಮ್ಮರನ್ನೆ ಕುರಿತು ಲಾವಣಿ ರಚಿಸಿದ್ದಾನೆ.

'' ಶರಣರ ಸುದ್ದಿ ಹರಳಯ್ಯನವರ ಕೇಳ್ಯಾರು
ಸತಿ ಪತಿ ಕೂಡಿ ಕಲ್ಯಾಣಕ ಬಂದಾರು
ಚಪ್ಪಲದಂಗಡಿ ಸಮಗಾರ ಓಣ್ಯಾಗ ಇಟ್ಟಾರು
ಪಾದರಕ್ಷಿ ತಯಾರಿಸಿ ಶರಣರೀಗಿ ಪುರೋಶ್ಯಾರು.''[೫]

ಎಂತಹ ಅದ್ಬುತ ಭಕ್ತಿ ಭಾವ, ಅನನ್ಯ ಪ್ರೇಮ, ಶರಣರ ಮೇಲಿನ ಉತ್ಕಟ ಭಕ್ತಿಯನ್ನು ಚಿತ್ರಿಸುತ್ತವೆ. ಸತ್ಯ ಸಾವಿತ್ರಿಯ ಛಲ, ಹಠಸಾಧಿಸಿ ಗಂಡನ ಪ್ರಾಣ ತಿರುಗಿ ತರುವದು ಸಾಮಾನ್ಯರಿಗೂ ಅಸಾಮಾನ್ಯವಾದುದು.

' ಸತ್ತ್ವದಲ್ಲಿ ಸದ್ಭಕ್ತ ಸ್ತ್ರೀಯಳು ಸತ್ಯ ಸಾವಿತ್ರಿ ಹಂತವರು
ಯಾರಿಲ್ಲ ಯಮಲೋಕ ಏರಿಹೋದವರು
ಯಮ ಫಾಸಿ ಬಿಡಿಸಿಕೊಂಡ ತಂದವರು''[೬]

೪. ಈ ಸಂಪ್ರದಾಯದ ಕವಿಗಳು ಸ್ವಾತಂತ್ರ್ಯ ಪೂರ್ವ ಹಾಗೂ ನಂತರದ ಕಾಲದ ಸಂದರ್ಭಗಳನ್ನು ತಮ್ಮ ಲಾವಣಿಗಳಿಗೆ ವಸ್ತುವಾಗಿಸಿದರು. ಆ ಕಾಲದ ಅಂಬೇಡ್ಕರರ ಜಾತೀಯತೆಯ ವಿರುದ್ದದ ಹೋರಾಟ ಲಾವಣಿಗಳಿಗೆ ಪ್ರಮುಖ ವಸ್ತುವಾಗಿರುವದನ್ನು ಕಾಣುತ್ತೇವೆ ಇದು ದಲಿತ ಜನಾಂಗದ ಸಂಕಟಗಳನ್ನು ದೂರ ಮಾಡಲು ಶ್ರಮಿಸಿದ ಸಾಹಸಿಯ ಅಪರೂಪದ ಕಥಾನಕವಾಗಿದೆ.

'' ಡಾಕ್ಟರ ಅಂಬೇಡಕರ ಬಾಬಾಸಾಹೇಬರು । ಕುಡಿಯಲಾಕ ಬೇಡಿದ ನೀರಾ।
ಯಾರೂ ಕುಡಲಿಲ್ಲ ಅಂವಗ ಹ್ವಾದರ ದೂರಾ ।
ಅಂತಾನ ಇದು ನನ್ನ ಕಡಿ ಗೈರಾ।

ದಬ್ಬ ಇವರನ ನಾ ಒಬ್ಬ ನೀರ ಕುಡಿಯುದೇನ

ಸಭ್ಯ ಜನಾ ಉಳಿದತಿ ದೂರಾ । ಹೆಂಗ ತಾಳ್ಯಾರ ಏನೋ (ನನ್ನ) ಬಾಂಧವಾರಾ'' ೭

ಇಲ್ಲಿ ನನ್ನವರನ್ನುವ ಭಾವ ಜನರಲ್ಲಿ 'ಹಕ್ಕುಗಳಿಗಾಗಿ ' ಹೋರಾಡುವ ಮನೋಭಾವ, ಸ್ಫೂರ್ತಿ ತುಂಬುತ್ತದೆ''. ಅಸ್ಪೃಶ್ಯದಂತಹ ಸಾಮಾಜಿಕ ರೋಗಗಳ ನಿವಾರಣೆಗೆ ಹೆಚ್ಚು ಒತ್ತು ನೀಡಿರುವದು ಸ್ಪಷ್ಟ.

೫. ಈ ಸಂಪ್ರದಾಯದ ಲಾವಣಿಕಾರರು ಸಮಾಜದ ಆಚರಣೆಗಳನ್ನು ಕಂಡು ರೋಸಿ ಹೋಗಿದ್ದಾರೆ. ಸಭಾ ಮಧ್ಯದಲ್ಲಿ ನಿಂತು ಎಲ್ಲರನ್ನು ತೊಳೆದಿದ್ದಾರೆ. ಸಂಕಟ, ನೋವು, ಎಲ್ಲದಕ್ಕೂ ಹಾಡಿನ ಮೂಲಕವೇ ಉತ್ತರ ನೀಡಿದ್ದಾರೆ. ಸಮಾಜ ತಿದ್ದಲು ಪ್ರಯತ್ನಿಸಿದ್ದಾರೆ. ಇವರು ಅಂಬಿಗರ ಚೌಡಯ್ಯಾ, ಸರ್ವಜ್ಞರ ಚಾಟಿ ಏಟಿನಂತೆಯೇ ಯಾರ ಹಂಗು ಇಲ್ಲದೇ ಲಾವಣಿಗಳಲ್ಲಿ ಟೀಕಿಸುವದನ್ನು ನೋಡಿದರೆ ಅದು ' ಟೀಕೆಗಾಗಿ ಟೀಕೆ ಅಲ್ಲ' ತಿದ್ದಿಕೊಳ್ಳುವ ಸಲುವಾಗಿ ಟೀಕೆ' ಎಂಬ ಮಾತು ಅಕ್ಷರಶಃ ಸತ್ಯವೆನಿಸತ್ತುದೆ.

' ಸುಳ್ಯಾರಿಗಿ ಮರಳ ಆಗಿ ಊರಾನ ಪರಮುಖರೆಲ್ಲಾ ।

ಕೇರಿ ಲಾಯಿಸನ್ ತಗೀಶ್ಯಾರು । ಗ್ವಾಡಿ ಕವನೆಳ್ಳಲೆ ಮೂರು ಚೆಂಜಿ ಹೋಗಿ

ಮೊದಲ ನಂಬರ ಹಚ್ಯಾರು''[೮] ಇಂತಹ ಮಾರ್ಮಿಕ ಮಾತುಗಳು ಇಡೀ ಸಂಪ್ರದಾಯದ ಲಾವಣಿಕಾರರ ಲಾವಣಿಗಳನ್ನು ಅವಲೋಕಿಸಿದಾಗ ಗೋಚರಿಸುತ್ತದೆ.

ವಸ್ತು ವೈವಿಧ್ಯತೆ

ಕವಿಗಳು ತಮ್ಮ ಮನೋಭಿಲಾಷೆಗೆ ತಮ್ಮ ಸ್ಥಳೀಯ ಪರಿಸರದಲ್ಲಿ ಲಭ್ಯವಾಗುವ ವಸ್ತುಗಳನ್ನು ಆಯ್ದು ಕೊಂಡಿರುವುದು ತಿಳಿಯುತ್ತದೆ. ದೈವ ಭಕ್ತಿಗೆ ಪೂರಕವಾಗಿ ಆರಂಭದಲ್ಲಿ ಶಿವಸ್ತುತಿ, ಶಕ್ತಿ ಸ್ತುತಿ, ಮಾಯಕಾರ್ತಿ, ಕುರಿತು ಸ್ತೋತ್ರ ಲಾವಣಿಗಳನ್ನು ರಚಿಸಿದರು. ಇದು ಸಮೂಹದಲ್ಲಿ ಮೇಲೆ ದೈವಿ ಭಕ್ತಿ ಸೃಷ್ಟಿಸಲು ಸಾಧ್ಯವಾಯಿತು. ಸಮಾಜದ ತಿದ್ದುವಿಕೆಗಾಗಿ ಸಾಮಾಜಿಕ ವಸ್ತುಗಳನ್ನು ಆಯ್ದುಕೊಂಡರು.

ಪೌರಾಣಿಕ ಘಟನೆಗಳನ್ನು ಆಯ್ದುಕೊಂಡರು. ಸ್ತ್ರೀಯತ್ಯಾಗ, ಪತಿವೃತತ್ವ, ಸಹನೀಯಗುಣ ಸಾರುವದರೊಂದಿಗೆ ಬದುಕುತ್ತಿರುವ ಮಹಿಳೆರಿಗೆ ಮಾರ್ಗದರ್ಶಿಯಾದವು. ತನ್ನ ಸಮಾಜಕ್ಕೆ ಮಾದರಿಯಾಗುವ ಸಾಹಸ ಪ್ರದರ್ಶಿಸುವ ಗುಣ ' ಅಂಬೇಡ್ಕರ ಪದ ' ದಲ್ಲಿ ವ್ಯಕ್ತವಾಗಿದೆ. ಸಮಾಜದ ಕೆಟ್ಟ ಆಚರಣೆ ಜಾತಿಯತೆಯನ್ನು ನಿರ್ಮೂಲನೆಗೊಳಿಸುವ ಸಂದೇಶ ಸಾರಿದರು.

ಶಿಲ್ಪ

ಶಾಸ್ತ್ರದ ವಿಸ್ತಾರ, ಶೃಂಗಾರ, ಕಟಕಿ, ಪಾರಮಾರ್ಥ ವಿಚಾರ, ಹಾಸ್ಯ, ನೀತಿ, ವಿಡಂಬಣೆ ಎಲ್ಲದಕ್ಕೂ ಗೀಗೀ ಮೈಕೊಟ್ಟಿದೆ' ' ಒಂದು ವಿಷಯವನ್ನು ಸಾದ್ಯಂತವಾಗಿ ವಿವರಿಸಿ, ಕೇಳುಗನನ್ನು ಕುತೂಹಲ ಭರಿತನನ್ನಾಗಿಸುತ್ತಾ, ಆತನ ಪ್ರಶ್ನೆಗಳಿಗೆ ಉತ್ತರ ನೀಡುವ ಕ್ರಿಯೆ ಪ್ರಮುಖ. ಹೀಗಾಗಿ ಇದು ಪ್ರದರ್ಶನದ ಉದ್ದಕ್ಕೂ ಗಂಭೀರತೆಯನ್ನು ಕಾಪಾಡಿಕೊಂಡು ಬರುವ ಆಶಯ ಹೊಂದಿದೆ. ಹಾಡು ಸಾಗಿದಂತೆ ಭಾವ, ಬಂಗಿ ಬದಲಾಗಿ ಒಂದು ನವಿರಾದ ರೂಪ ದೊರೆಯುತ್ತದೆ. ಲಾವಣಿ ಪದ್ಯವು ಆರಂಭವಾಗುವುದು ಗಣ ಪದದಿಂದ. ಹರದೇಶಿಯಾಗಿದ್ದರೆ ಶಿವಸ್ತುತಿ, ನಾಗೇಶಿಯಾಗಿದ್ದರೆ ಶಕ್ತಿಸ್ತುತಿ ಇವು ಲಾವಣಿಯ ಆರಂಭಕ್ಕೆ ಮೊದಲ ಹೆಜ್ಜೆ. ಇದರಲ್ಲಿ ಚಾಲ, ದುಡಕಿ, ಚೌಕ, ಕೂಡುಪಲ್ಲ ಎಂಬ ಚೌಕಟ್ಟು ಇರುತ್ತದೆ. ಚಾಲವು ಪದ್ಯವನ್ನು ಹೌದುಹೌದು ಎನಿಸುವಂತೆ ಮಾಡುತ್ತದೆ. ಚಾಲದಲ್ಲಿ ಹಿಮ್ಮೇಳದವರು ವ್ಹಾ ವ್ಹಾ ಎಂದು ಹುರಿದುಂಬಿಸುತ್ತಾ ಮೂಲ ಹಾಡುಗಾರನನ್ನು ಮುಂದಿನ ಹಾಡಿಗೆ ಅಣಿಗೊಳಿಸಿದರೆ, ಕೇಳುಗರನ್ನು ಕುತೂಹಲಿಗಳನ್ನಾಗಿ ಮಾಡುತ್ತದೆ. ಒಂದು ಲಾವಣಿಯ ಕಥಾಸಾರವನ್ನು ಹಂತಹಂತವಾಗಿ ಕ್ರಮ ಬದ್ದವಾಗಿ ವಿವರಿಸುತ್ತಾ ಹೋಗಿ ಒಂದು ಘಟ್ಟ ತಲುಪಿದ ನಂತರ ಏರು-ಇಳುವುಗಳನ್ನು ತಿಳಿಸುವದು ದುಡಕಿ. ಪದ್ಯಗಳು ಪಲ್ಲವಿಯ ನಂತರ ನಾಲ್ಕಾರು ಪದ್ಯಗಳು ಮುಗಿದಾಗ ಚೌಕ ಬರುತ್ತದೆ. ಕೂಡು ಪಲ್ಲವು ಕಥೆಯ ಹಿಂದಿನ ಘಟನಾವಳಿಗೂ ಮುಂದಿನ ಕಥಾಸಾರಕ್ಕೂ ಸಂಯೋಜನೆಯನ್ನು ನೀಡುವದು. ಹೀಗೆ ಲಾವಣಿ ಒಂದು ಕಟ್ಟುನಿಟ್ಟಾದ ನಿಯಮವನ್ನು ಪರಿಪಾಲಿಸಿಕೊಂಡು ಬಂಧಿತವಾಗುತ್ತದೆ.

ಪ್ರಾಸ

' ಪ್ರಾಸ' ಸಾಹಿತ್ಯಿಕ ಕೃತಿಗಳ ಹೃದಯ. ಹಾಡುಗಳ ನಾದ. ಕಿವಿಗೆ ಇಂಪು ನೀಡುವುದು. ಕೇಳುವವನಲ್ಲಿ ಗುಂಯ ಗುಟ್ಟುವ ಪರಿಣಾಮ ಬೀರುವುದಕ್ಕಾಗಿ ಇದರ ಸದ್ಬಳಿಕೆ ಅವಶ್ಯಕವಾಗಿದೆ. ಪ್ರಾಸವಿಲ್ಲದ ಪದವ ಏಸು ಹಾಡಿದರೇನು'ಎಂದು ಕೀರ್ತನಕಾರ ಪುರಂದರದಾಸರು ಹೇಳಿದ್ದಾರೆ. ಇಲ್ಲಿಯ ಪ್ರತಿಯೊಂದು ಲಾವಣಿಯಲ್ಲಿ ಪ್ರಾಸಪದದ ಬಳಕೆಯಾಗಿ ಲಾವಣಿಗಳ ತೂಕ ಹೆಚ್ಚಿದೆ. ಲಾವಣಿಗಳಲ್ಲಿ ಅಂತ್ಯ ಪ್ರಾಸ ಬರುವುದು. ಈ ಪ್ರಾಸ ವೈವಿಧ್ಯತೆ ಈ ಲಾವಣಿಗಳಿಗೆ ಮೆರಗು ನೀಡುವದು.

'' ದಿನಾ ಹರಿಯಾಗ।

ಗಂಗಾ ತೀರದಾಗ ''

ರಸ

'ರಸಾತ್ಮಕಂ ಕಾವ್ಯಂ' ಎಂಬುದು ಭಾರತೀಯ ಮೀಮಾಂಸಕಾರನ ಅಭಿಪ್ರಾಯ. ಈ ಅಭಿಪ್ರಾಯಕ್ಕೆ ಬಳ್ಳಿಗೇರಿ ಲಾವಣಿ ಸಂಪ್ರದಾಯದ ಕವಿಗಳಲ್ಲಿ ಬೆಲೆ ಸಿಕ್ಕಿದೆ. ಕರುಣ, ಹಾಸ್ಯ, ಶೃಂಗಾರ, ವೀರರಸಗಳಿಗೆ ಲಾವಣಿಗಳಲ್ಲಿ ಪ್ರಾಧಾನ್ಯತೆ ನೀಡಲಾಗಿದೆ. ಶೃಂಗಾರ ರಸವಂತೂ ರಸದುಂಬಿ, ಮೈದುಂಬಿ ಹರಿದಿದೆ.

ಚಂದ್ರಕಾಂತಿ ಚೆಲ್ವಿಕೆ ಅಕಿ ಬಿಂಬ ಹೊಳಿದು ನೀರಾಗ ''

'' ಹೊಳಿತ್ತಿತ್ತ ಬಿಂಬ ಅಕಿ ರೂಪ ಚಿತ್ರ ಗೊಂಬಿ ಹಂಗ''[೧೧]

'' ಆತನ ಹೆಂಡ್ತಿ ಇದ್ದಾಳ ಬಹಳ ಪ್ರೀತಿ।

ಊಟ ಮಾಡತ್ತಿದ್ದಿಲ್ಲ ಮುಖ ನೋಡದ ಹೊರತ''

ಎನ್ನುವ ಪದ್ಯಗಳನ್ನು ಉದಾಹರಿಸಬಹುದು.

ಭಾಷೆ ''ಯಾವುದೇ ಸಾಹಿತ್ಯದ ಪ್ರಕಾರದ ಅಭಿವ್ಯಕ್ತಿಗೆ ಭಾಷೆ ಒಂದು ಮಾಧ್ಯಮ ವಾಗುವುದು''[೧] ಜನಪದ ಭಾಷೆ, ನೆಲದ ಬಾಷೆ ದೇಶಿ ಸತ್ವ ಹೀರಿ ಬೆಳೆದ ಕಸುವಿನಿಂದ ಬೆಳೆದ ಹಸು. ಅದು ನೇರವೂ, ಸರಳವೂ ಆಗಿದೆ. ಹೇಳಬೇಕಾದುದುನ್ನು ನೇರವಾಗಿ ಮುಟ್ಟಿಸುವ ಕಲೆಗಾರಿಕೆ ಈ ಲಾವಣಿ ಸಂಪ್ರದಾಯದ ಕವಿಗಳಿಗೆ ಒಲಿದು ಬಂದಿದೆ. ಬಳ್ಳಿಗೇರಿ ಮಲಾಬಾದಗಳು ಮರಾಠಿ ಪ್ರವೇಶಕ್ಕೆ ಹೆಬ್ಬಾಗಿಲು. ಹೀಗಾಗಿ ಲಾವಣಿ ಪದಗಳಲ್ಲಿ ಮರಾಠಿ ಭಾಷೆಯ ಪ್ರಭಾವ ದಟ್ಟವಾಗಿರುವದನ್ನು ಗುರುತಿಸುತ್ತೇವೆ. ಪ್ರಾದೇಶಿಕತೆ ಮೆರುಗು ಲಾವಣಿಗಳಿಗೆ ಜೀವ ತುಂಬಿದೆ. ಅಗಾಧತೆ, ವಿಶಾಲತೆ ವ್ಯಾಪಕತೆಯಿಂದಾಗಿ ಭಾಷೆ ಹೆಚ್ಚು ಗಟ್ಟಿಯಾಗಿದೆ. ಮರಾಠಿ ಭಾಷೆಯ ಹಲವು ಪದಗಳು ಕನ್ನಡೀಕರಣ ಗೊಂಡಿವೆ.

ವಸ್ತುವಿನ ಸಹಜ ಅಭಿವ್ಯಕ್ತಿಗೆ ಪ್ರಭಾವೀಕರಿಸಬಲ್ಲ ಮರಾಠಿ ಭಾಷೆ ಸಾಕಷ್ಟು ಬಳಕೆಯಾಗಿದೆ. ಮರಾಠಿ ಬಾಷೆಯ ಪದಗಳು ಪ್ರತಿ ಪದ್ಯದಲ್ಲಿ ಸಿಗುತ್ತವೆ. ಅವುಗಳನ್ನು ಬಿಟ್ಟು ಪದರಚನೆ ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಅವು ಒಳಗೆ ಸೇರಿಕೊಂಡಿವೆ. ಉದಾಹರಣೆಗೆ, ಹರಳಯ್ಯನವರ ಪದವನ್ನೆ ತೆಗೆದುಕೊಳ್ಳಬಹುದು. ವಜನ, ಥೇಟ, ಪೈಲೆ, ಖರೇ, ಮಾಪಿ, ಇತ್ಯಾದಿ. ಇದರ ಸಂಗಡ ಉರ್ದು, ಸಂಸ್ಕೃತ, ಅರಬ್ಬಿ, ಪಾರ್ಸಿ, ಹಿಂದಿ ಪದಗಳು ಬಳಕೆಯಾಗಿವೆ.

ಈ ರೀತಿಯಲ್ಲಿ ಬಳ್ಳಿಗೇರಿ ಲಾವಣಿ ಸಂಪ್ರದಾಯದ ಕವಿಗಳು ತಾವು ರಚಿಸಿದ ಲಾವಣಿಗಳಲ್ಲಿ ಎಲ್ಲ ಭಾಷೆಯ ಪದಗಳನ್ನು ಹೇರಳವಾಗಿ ಬಳಸಿರುವದು ಗೋಚರಿಸುತ್ತದೆ. ಇದು ಅವರ ಅನ್ಯಭಾಷಾ

ಪ್ರೇಮ, ಭಾಷಾ ತಿಳುವಳಿಕೆ, ಭಾಷೆಯ ಹದವರಿತ ಬಳಕೆಯ ಬಗ್ಗೆ ಹೊಂದಿದ ಅಪಾರ ಜ್ಞಾನವನ್ನು ತಿಳಿಯಲು ನೆರವಾಗುತ್ತದೆ. ಒಟ್ಟಿನಲ್ಲಿ ಈ ಸಂಪ್ರದಾಯದ ಕವಿಗಳ ಲಾವಣಿ ಸಾಹಿತ್ಯವನ್ನು ಒಂದು ತಕ್ಕಡಿಯಲ್ಲಿಟ್ಟು ತೂಗಿ ನೋಡಿದಾಗ ಅವರ ಲೌಕಿಕ ಅನುಭವ, ವಸ್ತುವಿನ ಪರಿಪೂರ್ಣ ಆಯ್ಕೆ, ಸ್ಥಳೀಯ ಪ್ರಾದೇಶಿಕ ಸೊಗಡು, ಅನ್ಯಭಾಷಾ ಪದಪ್ರಯೋಗ, ಮುಂತಾದವುಗಳು ಇಂದಿನ ಯಾವದೇ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳಿಗೆ ಕಡಿಮೇಯನಲ್ಲ ಎಂದೇ ಹೇಳಬೇಕು. ಇದು ಔಚಿತ್ಯವೂ ಹೌದು. ಪ್ರಶಸ್ತಿ- ಪುರಸ್ಕಾರಗಳಿಂದ ಸಾಕಷ್ಟು ದೂರವಿದ್ದ ಕವಿಗಳಿಗೆ ಜನತೆಯೇ ಸಲ್ಲಸಬೇಕಾದ ಆತ್ಮಗೌರವದ ಪ್ರತೀಕವಾಗಿ ಪರಿಣಮಿಸಿವೆ.

ಅನುಕರಣಾವ್ಯಯಗಳು

ಇಲ್ಲಿ ಅಭ್ಯಸಿಸಿದ ಲಾವಣಿಗಳಲ್ಲಿ ಅನುಕರಣಾವ್ಯಯಗಳು ಬಳಕೆಯಾಗಿವೆ. ಭಾವ ಸ್ಪಷ್ಟತೆಗೆ ನೆರವಾಗುವ ಅನುಕರಣಾವ್ಯಯಗಳು ಬೇಕೆ ಬೇಕು. ಸಂಪ್ರದಾಯದ ಕವಿಗಳು ಇಂತಹ ಪದಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಿ ಕೇಳುಗರ ಮೇಲಾಗುವ ಗಂಭೀರ ಪರಿಣಾಮವನ್ನುಂಟು ಮಾಡುತ್ತವೆ.

ಥಕಾ ಥಕಾ, ತಣಾ ತಣಾ, ಶಿವ ಶಿವ, ಧಣ ಧಣಾ ಇತ್ಯಾದಿ ಪದಗಳನ್ನು ಹೆಸರಿಸಬಹುದು.

ಜೋಡು ನುಡಿಗಳು

ಗ್ರಾಮ್ಯ ಪರಿಸರದ ಅಜ್ಞಾತ, ಅನಕ್ಷರತೆ ಕವಿಗಳಿಂದ ರಚಿತವಾದ ಈ ಸಂಪ್ರದಾಯದ ಲಾವಣಿಗಳಲ್ಲಿ ' ಜೋಡಿ ನುಡಿಗಳು' ಓದಲಿಕ್ಕೆ ವಿಪುಲವಾಗಿ ದೊರೆಯುತ್ತವೆ.

ಗಿಡ-ಗುಂಪ, ಬ್ಯಾನಿಗಿನಿ, ನೀರು- ನೀಡಿ, ಭೂಮಿ-ಗೀಮಿ, ಇತ್ಯಾದಿ.

★ ★ ★

೬ ಅಡಿ ಟಿಪ್ಪಣಿಗಳು

೧) ಡಾ॥ ಬಿ. ಎಸ್. ಭಜಂತ್ರಿ : ಹುಲಕುಂದ ಲಾವಣಿ ಸಂಪ್ರದಾಯ . ಪುಟ- ೨೬೬

೨) ಅದೇ ಪುಟ - ೨೬೬.

೩) ಡಾ॥ ಬಿ. ಎಸ್. ಭಜಂತ್ರಿ : ಹುಲಕುಂದ ಲಾವಣಿ ಸಂಪ್ರದಾಯ ಒಂದು ಅಧ್ಯಯನ ಚೈತನ್ಯ ಪ್ರಕಾಶನ ಪಂಚಗಾಂವ ೨೦೦೨ ಪುಟ-೩೪.

೪) ಗುರಯ್ಯಾ ಮಲ್ಲಯ್ಯಾ ಮಠಪತಿ ಸಾ॥ ಮಲಾಬಾದ ಇವರ ಹೇಳಿಕೆ ಆಧರಿಸಿದೆ.

೫) ಪರಸಪ್ಪ ಮಲ್ಲಪ್ಪಾ ತಳವಾರ ಸಾ॥ ಮಲಾಬಾದ ಇವರು ಹೇಳಿದ ಹೇಳಿಕೆಯಾಗಿದೆ.

೬) ರಾವಸಾಬ ಅಪ್ಪಣ್ಣ ಸನದಿ ಇವರ ಹೇಳಿಕೆ (ಇವರು ಅಪ್ಪಣ್ಣ ಕವಿಯ ಸ್ವಂತ ಮಗ).

ಅಧ್ಯಾಯ - ೭

ಅಧ್ಯಾಯ - ೭
ಸಮಾರೋಪ

'' ಒಬ್ಬ ಕವಿ ಅಥವಾ ಒಂದು ಸಂಪ್ರದಾಯ ಒಂದು ಯುಗದ ಪ್ರತಿನಿಧಿಯಾಗುವಂತೆ ಆ ಯುಗದ ಕಾಣಿಕೆಯೂ ಹೌದು''.[१] ಸಸಿಯು ತನ್ನ ಪರಿಸರದ ಸಾರಸತ್ವಗಳನ್ನು ಹೀರಿಕೊಂಡು ಹೆಮ್ಮರವಾಗಿ ತಾನು ಬೆಳೆದ ಪರಿಸರಕ್ಕೆ ಉಪಕಾರ ಸ್ಮರಣಾರ್ಥಿವಾಗಿ ಹೂ, ಹಣ್ಣನ್ನು ನೀಡುವದು ನಿಸರ್ಗದ ಸಮತೋಲಿತ ನಿಲುವು ಹಾಗೆಯೇ ಕವಿಯು ಕೂಡ ತಾನು ಬಾಳಿ ಬದುಕಿದ ಪ್ರದೇಶದ ಧರ್ಮ, ಸಂಸ್ಕೃತಿ, ದೈವಪ್ರಜ್ಞೆ, ಸಮಾಜದ ಸಾರಸತ್ವಗಳನ್ನು ಅರಗಿಸಿಕೊಂಡು ಅದರ ಪ್ರತಿಫಲವಾಗಿ ಸಾಹಿತ್ಯ ನೀಡಿದಾಗ ಮಾತ್ರ ಅವನೊಬ್ಬ ಯಶಸ್ವಿ ಕವಿಯಾಗುತ್ತಾನೆ.

ಇದು ಇಲ್ಲಿಯ ಲಾವಣಿ ಕವಿಗಳ ಚರಿತ್ರೆ ಹಾಗೂ ಸಾಹಿತ್ಯದ ಆಳವಾದ ಅಧ್ಯಯನ ಕೈಗೊಂಡಾಗ ಸ್ಪಷ್ಟವಾಗುವದು. ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ನೀಡಿದರು. ಸಮಾಜದ ಮೌಢ್ಯತೆಯನ್ನು ಕಟುವಾಗಿ ಟೀಕಿಸಿ ಬಿಡಲಿಲ್ಲ. ಶುದ್ದೀಕರಣಕ್ಕಾಗಿ ಮಾರ್ಗ ತೋರಿಸಿದರು.'' ಉತ್ತರ ಕರ್ನಾಟಕದ ಹೆಸರಾಂತ ಐದು ಲಾವಣಿ ಸಂಪ್ರದಾಯಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ನೀಡಿದಷ್ಟು ಕೊಡುಗೆಯನ್ನು ಹುಲಕುಂದ ಸಂಪ್ರದಾಯವೂ ನೀಡಿದಷ್ಟು ಕೊಡುಗೆಯನ್ನು ಯಾವ ಸಂಪ್ರದಾಯವೂ ನೀಡಲಿಲ್ಲ''[೨] ಎಂಬುದು ವಿದ್ವಾಂಸರ ಅಭಿಪ್ರಾಯ ಈ ಅಭಿಪ್ರಾಯವನ್ನು ಒಪ್ಪಲಾಗದು. ಬಳ್ಳಿಗೇರಿ ಸಂಪ್ರದಾಯವು ಕೊಡುಗೆ ನೀಡಿದೆ.ಇಂಥ ಒಂದು ಪ್ರಸಿದ್ಧಿ, ಹೆಗ್ಗಳಿಕೆ ಹೊಂದಿರುವ ಸಂಪ್ರದಾಯವನ್ನು ಇದುವರೆಗೆ ಆರು ಬೇರೆ ಬೇರೆ ಅಧ್ಯಾಯಗಳಲ್ಲಿ ವಿಭಜಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಅಧ್ಯಯದಲ್ಲಿ ಕಂಡುಂಡ ಫಲಿತಗಳನ್ನು ವಿಶದಪಡಿಸಲಾಗಿದೆ.

ಪ್ರಾರಂಭಿಕ ಅಧ್ಯಾಯವು 'ಲಾವಣಿಗಳ' ಮೂಲ, ಈ ಅಧ್ಯಯನಕ್ಕೆ ಪ್ರವೇಶಿಸುವಾಗ ಈಗಾಗಲೇ ನಡೆದ ಪೂರ್ವಾಧ್ಯಯನದ ಅವಲೋಕನವನ್ನು ಸಮಗ್ರವಾಗಿ ಮಾಡಲಾಗಿದೆ. ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ಅಳವಡಿಸಿಕೊಂಡ ವಿಧಾನವನ್ನು ಸೂಚಿಸುವುದು. ಲಾವಣಿಗಳ ಕುರಿತು ನಡೆದಿರುವ ಅಧ್ಯಯನಗಳು ಇನ್ನು ಒಂದು ಘಟ್ಟ ತಲುಪಿಲ್ಲ. ಅವುಗಳ ತಲಸ್ಪರ್ಶಿ ಅಧ್ಯಯನ ಸಾಗಿಲ್ಲ. ವ್ಯವಸ್ಥಿತವಾದ ಹಾಗೂ ವೈಜ್ಞಾನಿಕವಾದ ಅಧ್ಯಯನ ನಡೆಯಬೇಕಾಗಿದೆ.

ಮುಂದಿನ ಅಧ್ಯಾಯವು ಬಳ್ಳಿಗೇರಿ ಲಾವಣಿ ಸಂಪ್ರದಾಯ ಸೃಷ್ಟಿಗೆ ಕಾರಣಕರ್ತರಾದ ಅತೀ ಸಮೀಪ ಗ್ರಾಮದ ಲಾವಣಿ ಕವಿಗಳನ್ನು ಪರಿಚಯಿಸುತ್ತದೆ. ಅವರು ಕಾಲ, ಜನ್ಮ ವೃತ್ತಾಂತ, ಗುರು ಪರಂಪರೆಯಿಂದ ಇನ್ನೂ ಗೊಂದಲದಲ್ಲಿಯೇ ಇರುವುದು ತಿಳಿಯುತ್ತದೆ. '' ಹರದಾಸ ಮಲ್ಲ (೧೮೩೦-೧೯೦೦) ಮಲ್ಲಾಬಾದಿ'' [೬] ಇದು ಲಭ್ಯ ಮಾಹಿತಿ ಪ್ರಕಾರ ಸತ್ಯಕ್ಕೆ ದೂರವಾಗಿದೆ. ಮಲಾಬಾದ ಗ್ರಾಮಸ್ಥರ ಹೇಳಿಕೆಯಂತೆ ವಸ್ತಾದನ ಕಾಲ (೧೮೮೦-೧೯೬೩) ಇದಕ್ಕೆ ಅವರು ನೀಡುವ ಕಾರಣವೂ ಯೋಗ್ಯವಾಗಿದೆ. '' ಮಲ್ಲಿಕಾರ್ಜುನನ ದೇವಸ್ಥಾನ ನಿರ್ಮಾಣವಾದದ್ದು ೧೯೫೩ ರಲ್ಲಿ ಸುಮಾರು ಹತ್ತು ವರ್ಷಗಳ ವರೆಗೆ ಪ್ರತಿವರ್ಷ ನಡೆಯುವ ಕಂಬಿ ಐದೇಶಿಯ ' ಡಪ್ಪು ಹಾಡು ಗಾರಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದನು''.[೭] ಬೆಳಗಾವಿ ಜಿಲ್ಲೆಯ ಲಾವಣಿಕಾರರು ಎಂದರೆ ಕೇವಲ ತೇರದಾಳ ಭಾಗದ, ಹುಲಕುಂದ ಭಾಗದ ಲಾವಣಿಕಾರರು ಎಂದು ಅರ್ಥೈಸಲಾಗಿದೆ. ಅಥಣಿ ತಾಲೂಕಿನ ತಾಂವಶಿ, ಬೇವನೂರು, ಅಥಣಿ, ಬಡಚಿ, ಮಲಾಬಾದ, ಬಳ್ಳಿಗೇರಿ, ಅನಂತಪೂರ ಇವುಗಳು ಲಾವಣಿಗಳ ತೊಟ್ಟಿಲು. ಈ ತೊಟ್ಟಿಲಲ್ಲಾಡುವ ಕೂಸುಗಳು ನಮ್ಮ ಜಾನಪದ ಕವಿಗಳು. ಈ ಕವಿಗಳು ಬರಡು ನೆಲದ ಹಾಲನ್ನುಂಡು ಸತ್ವ ಹೀರಿ ಸದೃಢವಾಗಿ ಬೆಳೆದಿದ್ದಾರೆ. ಅವರನ್ನು ಅವರು ರಚಿಸಿದ ಸಾಹಿತ್ಯವನ್ನು ತೂಗುವ ಕೆಲಸ ನಡೆಯಬೇಕಾಗಿದೆ ಎಂದು ಎತ್ತಿ ತೋರಿಸಲಾಗಿದೆ. ಅವರ ಕೃತಿಗಳು ಪ್ರಕಟವಾಗಬೇಕಿದೆ. ತೃತೀಯ ಅಧ್ಯಾಯವು ಈ ಭಾಗದ ಲಾವಣಿಗಳನ್ನು ಪ್ರಚಾರ ಪಡಿಸುವ ಲಾವಣಿ ಹಾಡುಗಾರರನ್ನು ಪರಿಚಯಿಸುತ್ತದೆ. ಹಾಡು ರಚನಕಾರನಿಗಿಂತಲೂ ಅದನ್ನು ಹಾಡುವವರು ಜನರಿಗೆ ಹೆಚ್ಚು ಹತ್ತಿರವಾಗುತ್ತಾರೆ. ' ಕಂಚಿನ ಕಂಠದ ಚೆನ್ನಪ್ಪ , ಬಸು, ಗುಗವಾಡ ಕಾಸವ್ವ , ಗುರಪ್ಪ ನಾಟೀಕಾರರೂ ಈ ಸಂಪ್ರದಾಯದ ಮುಂದುವರಿಕೆಗೆ ಸಹಕರಿಸಿದ್ದಾರೆ. ಇವರಲ್ಲದೆ ಅಸಂಖ್ಯಾತ ಹಾಡುಗಾರರು ಮರೆಯಲ್ಲಿದ್ದಾರೆ. ಹೀಗಾಗಿ ಅಧ್ಯಾಯವು ಲಾವಣಿ ಹಾಡುಗಾರರಿಗೆ ನಿಲ್ಲಬೇಕಾದ ಪ್ರಾಧಾನ್ಯತೆ ನೀಡಿದೆ. ಇದೇ ಕವಿಗಳ ಹಾಡನ್ನು ಹಾಡುವ ಬೇರೆ ಭಾಗದ ಮೇಳ ಹಾಡುಗಾರರನ್ನು ಹೆಚ್ಚು ಮುತುವರ್ಜಿಯಿಂದ ಹುಡುಕಿ, ಹೆಸರಿಸಿದಾಗ ಮಾತ್ರ ಅಧ್ಯಯನವು ಸಾರ್ಥಕತೆಯನ್ನು, ಪರಿಪೂರ್ಣತೆಯನ್ನು ಪಡೆಯುತ್ತದೆ. ಇದು ಪರಿಮಿತ ಅಧ್ಯಯನವಾಗಿರುವದರಿಂದ ಬೇರೆ ಭಾಗದ ಹಾಡುಗಾರರನ್ನು ಈ ಅಧ್ಯಾಯದ ಅಧ್ಯಯನಕ್ಕೆ ಒಳಪಡಿಸಿಕೊಂಡಿಲ್ಲ. ಹಾಡುಗಾರರು ಎಲೆ ಮರೆಯ ಕಾಯಿಯಂತೆ ಮರೆಯಲ್ಲಿದ್ದುಕೊಂಡು ಬದುಕು ಸಾಗಿಸುತ್ತಿದ್ದಾರೆ. ಅವರು ಬದುಕಿದ ಬದುಕು, ಹಾಡಿನ ಪ್ರೇರಕ ಶಕ್ತಿ , ಪ್ರತಿಯೊಂದನ್ನು ಸಹವಿವರವಾಗಿ ಅಧ್ಯಯನ ಮಾಡಬೇಕಾಗಿದೆ.ಇವರಿಗೆ ಸರಕಾರದಿಂದ ಯಾವುದೇ ರೀತಿಯ ಮಾಶಾಸನ ದೊರೆಯುತ್ತಿಲ್ಲ. ಕನ್ನಡ ಸಂಸ್ಕೃತಿ ಇಲಾಖೆಯು ಇವರ ಕುರಿತು ಚಿಂತಿಸಿದಂತೆ ಕಾಣುವುದಿಲ್ಲ. ಅಧ್ಯಯನವು ಇಂತಹ ಬಡಕಲಾವಿದರನ್ನು ಗುರುತಿಸಿದೆ. ಅಂತಹ ಬಡ ಕಲಾವಿದರ ಜೀವನ ಚಿತ್ರಣವನ್ನು ನೀಡುವಲ್ಲಿ ಮಾಹಿತಿಯನ್ನು ಪ್ರಥಮವಾಗಿ ಸಂಗ್ರಹಿಸಿದೆ. ಇದು

ಬಳ್ಳಿಗೇರಿ ಸಂಪ್ರದಾಯದ ಲಾವಣಿ ಹಾಡುಗಾರರನ್ನು ಪರಿಚಯಿಸಿದೆ.

ಮುಂದಿನ ಅಧ್ಯಾಯವು ' ನಾಗೇಶಿ ಪರಂಪರೆಯ ' ಖ್ಯಾತಕವಿ ಸಿದ್ರಾಮಬ್ಯೆರಿ ಶಿಷ್ಯ ಅಪ್ಪಣ್ಣ ಕವಿಯ ಪರಿಪೂರ್ಣ ಚಿತ್ರಣ ನೀಡುತ್ತದೆ. ಗೆಳೆಯ ಗೋವಿಂದಗುಳಿ, ಶಿವಣ್ಣ ಈತನ ಸಮಕಾಲೀನರು. ಆದರೆ ಗುರು ಸಿದ್ರಾಮಬ್ಯೆರಿಯ ಕುರಿತು ಅಧ್ಯಯನ ಸಂಪೂರ್ಣವಾಗಿ ನಡೆದಿದೆ ಎಂದು ಅನ್ನಿಸುವುದಿಲ್ಲ. ಹೀಗಾಗಿ ಮುಂಬರುವ ಅಧ್ಯಯನಗಳು ಅಪ್ಪಣ್ಣ ವಸ್ತಾದನ ಕುರಿತು ಮಾಹಿತಿ ಕಲೆ ಹಾಕುವದರಲ್ಲಿಯೇ ನಿರತವಾಗಿದೇ ಆತನ ಗುರು ಶಿದ್ರಾಮಬ್ಯೆರಿಯ ಕುರಿತು ಬೆಳಕು ಚೆಲ್ಲ ಬೇಕಾದ ಅಗತ್ಯ ಹೆಚ್ಚಾಗಿ ತೋರುತ್ತದೆ. ಆಕಸ್ಮಿಕ ಘಟನೆಯೊಂದು ಅಪ್ಪಣ್ಣನನ್ನು ' ಲಾವಣಿಕಾರನನ್ನಾಗಿ' ರುಪಿಸಿದ್ದು ನಿಜಕ್ಕೂ ರೋಮಾಂಚನಕಾರಿ ಒಂದು ಒಳ್ಳೆಯ ಕಾರ್ಯಕ್ಕೆ ಶಿವ ಸೃಷ್ಟಿಸಿದ ಪವಾಡ ಸನ್ನಿವೇಶ ಎನ್ನಿಸುತ್ತದೆ. ಬಳ್ಳಿಗೇರಿಯ ಅಪ್ಪಣ್ಣಕವಿಯ ಜೀವನದ ಮೇಲೆ ಮೊಟ್ಟಮೊದಲು ಬೆಳಕು ಚೆಲ್ಲಿದೆ. ಪ್ರಸ್ತುತ ನಿಬಂಧದಲ್ಲಿ ವಿಸ್ತೃತ ಕ್ಷೇತ್ರ ಕಾರ್ಯದ ಮೂಲಕ ಮೊತ್ತಮೊದಲ ಸಲ ಅಪ್ಪಣ್ಣ ಕವಿಯ ಬದುಕಿನ ವಿವರಗಳನ್ನು ಇಲ್ಲಿ ದಾಖಲಸಲಾಗಿದೆ. ಈ ಮೊದಲು ಎಲ್ಲಿಯೂ ವಿವರಗಳು ಉಪಲಬ್ಧ ವಿಲ್ಲ.

ಪಂಚಮ ಅಧ್ಯಾಯದಲ್ಲಿ ಅಪ್ಪಣ್ಣ ವಸ್ತಾದರು ರಚಿಸಿದ ಲಾವಣಿಗಳನ್ನು ಸಂಗ್ರಹಿಸಿ ಕೊಡಲಾಗಿದೆ. ವಿಸ್ತೃತವಾದ ಕಥನಾತ್ಮಕ ಶೈಲಿ, ಪುರಾಣ ಪುಣ್ಯ ಪುರುಷರ ಇತಿಹಾಸ, ಸ್ತ್ರೀ ಯ ತ್ಯಾಗ ಗುಣ, ಸಮಾಜದ ಕುಂಟಲ ನೆಪಗಳೆಲ್ಲಾ ಲಾವಣಿಗಳು ವಸ್ತು ವಾಗಿರುವದು ಕಂಡಾಗ ಇವನೊಬ್ಬ ಪರಿಪೂರ್ಣ ಸಂಸಾರಿಕ. ಅನುಭವಸ್ಥ, ವ್ಯವಹಾರಿಕ, ತ್ಯಾಗಿ, ಜೀವನವನ್ನು ಬಂದಂತೆ ಸ್ವೀಕರಿಸಿದ ಸಮಾಜ ಜೀವಿ ಎಂಬಂತಾಗುತ್ತದೆ. ಇದು ಆತನ ನಿಜ ಜೀವನದಲ್ಲಿ ನಡೆದ ಘಟನೆಯಿಂದ ಸತ್ಯವೂ ಅನಿಸುತ್ತದೆ. '' ನಮ್ಮ ತಂಗಿ ಸತ್ತಾಗ ವಸ್ತಾದಗ ಯಾರೋ ಬಂದ ಹೇಳಿದ್ರಂತ: ವಸ್ತಾದರ ಮಗಳ ಸತ್ತಾಳ ಸಂಸ್ಕಾರ ಮಾಡುದಕ ನಡೀರಿ, ಪದ ರಚನೆಯಲ್ಲಿ ತಲ್ಲೀನರಾಗಿದ್ದ ವಸ್ತಾದರು ಸತ್ತರ ಸಾಯಲಿ, ಮಣ್ಣಾಗ ಹಾಕರೀ, ಇಲ್ಲಿ ನನ್ನ ಸಾಹಿತ್ಯ ಸಾಯುವುದು ಸರಿಯಲ್ಲ'' ಎಂದರಂತೆ.[೮]

ಅಪ್ಪಣ್ಣ ಕವಿಯು ರಚಿಸಿದ ಸಾಹಿತ್ಯ ಸಾಕಷ್ಟಿದೆ. ಇಲ್ಲಿ ಎಲ್ಲವನ್ನು ಅಮೂಲಾಗ್ರವಾಗಿ ಅಭ್ಯಸಿಸಿಲ್ಲ. ಈ ಪ್ರಬಂಧವು ಹೊಂದಿದೆ ವ್ಯಾಪ್ತಿಯಲ್ಲಿ ಅದು ಸಾಧ್ಯವೂ ಅಲ್ಲ. ಹೀಗಾಗಿ ಮುಂಬರುವ ಯಾವುದೇ ಅಧ್ಯಯನಗಳು ಆತನ ವಿಸ್ತ್ರತ ಸಾಹಿತ್ಯ, ಅದರ ವಿಶ್ಲೇಷಣೆ ಹಾಗೂ ಸಮರ್ಪಕವಾದ ಮಾಹಿತಿಗಳನ್ನು ಕಲೆಹಾಕಿದರೆ ಅದೊಂದು ಪಿ.ಹೆಚ್.ಡಿ. ಗ್ರಂಥವಾಗುತ್ತದೆ. ಹಾಗೆಯೇ ಮನೆಯ ಮೂಲೆಯಲ್ಲಿ ಪುಸ್ತಕದಲ್ಲಿ ಕಟ್ಟುಗಳಲ್ಲಿ ಬಿದ್ದು ಕೊಳೆಯುತ್ತಿರುವ ಸಾಹಿತ್ಯ ನಾಲ್ಕು ಜನರಿಗೆ ಕೇಳಿದಾಗ ಅದು ಫಲಪ್ರದವೆನಿಸುತ್ತದೆ. ಈ ದಿಸೆಯಲ್ಲಿ ಅಪ್ಪಣ್ಣ ಕವಿಯನ್ನು ಇನ್ನೂ ಹೆಚ್ಚು ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ. ಆತನ ಸಮಗ್ರ ಜೀವನ ಚಿತ್ರಣ ದೊರೆತಾಗ ಮಾತ್ರ ಬಳ್ಳಿಗೇರಿ ಲಾವಣಿ

ಸಂಪ್ರದಾಯದ ಅಧ್ಯಯನವು ಹೆಚ್ಚು ಬಳ್ಳಿಗೇರಿ ಲಾವಣಿ ಸಂಪ್ರದಾಯದ ಅಧ್ಯಯನವು ಹೆಚ್ಚು ಪರಿಣಾಮಕಾರಿಯೂ. ಸಂಗ್ರಹಯೋಗ್ಯವೂ ಆಗುತ್ತದೆ. ಕವಿಯ ಬರವಣಿಗೆಗೆ ನೆರವಾದ ಗೆಳೆಯರ ಬಳಗ, ಪ್ರಾದೇಶಿಕ ಭಾಷಾ ಪ್ರಯೋಗ , ಖಂಡಿತವಾಗಿ ಸ್ವೀಕರಿಸುವ, ತಿರಸ್ಕರಿಸುವ ಮನೋಭಾವಗಳು ಕವಿಯ ಸಾಹಿತ್ಯದುದ್ದಕ್ಕೂ ದೊರೆಯುತ್ತದೆ. ಕ್ಷೇತ್ರ ಕಾರ್ಯದಲ್ಲಿ ಅಪ್ಪಣ್ಣ ಕವಿಯ ಸುಮಾರು ನೂರು ಲಾವಣಿಗಳನ್ನು ಸಂಗ್ರಹಿಸಲಾಗಿದೆ. ಇವು ವಿವಿಧ ನೆಲೆಯಲ್ಲಿ ಅನಾವರಣಗೊಂಡಿವೆ. ಇವುಗಳನ್ನು ಮೊದಲು ಎಲ್ಲಿಯೂ ಈ ರೀತಿಯಾಗಿ ವಿವರಿಸಿಕೊಂಡು ಅಧ್ಯಯನ ಮಾಡಿಲ್ಲ.

ಆರನೆಯ ಅಧ್ಯಾಯವು ಈ ಸಂಪ್ರದಾಯದ ಕವಿಗಳು ರಚಿಸಿದ ಸಾಕಷ್ಟು ಸಾಹಿತ್ಯವನ್ನು ಸೂಕ್ತವಾಗಿ ಪರಿಶೀಲಿಸಿದೆ. ಕೆಲವು ಅಣಿಮುತ್ತುಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಆ ಲಾವಣಿಗಳನ್ನು ಕೇವಲ ಪ್ರಾತಿನಿಧಿಕಗಳಾಗಿ ಮಾತ್ರ ಸ್ವೀಕರಸಬೇಕು. ಏಕೆಂದರೆ ಅವಷ್ಟೇ ಒಳ್ಳೆಯ ಸಾಹಿತ್ಯವೆಂದಾಗಲಿ, ಲಾವಣಿ ಪದಗಳಾಗಲೀ ಎಂದರ್ಥವಲ್ಲ. ವೇಳೆಯ ಲಭ್ಯತೆ ಇದ್ದರೂ ಅಧ್ಯಯನದ ಸೀಮಿತ ವ್ಯಾಪ್ತಿಗೆ ಎಲ್ಲವನ್ನೂ ತಂದು ತುರುಕುವುದು ಸರಿ ಎನಿಸಲಾರದು. ಈ ಸಂಪ್ರದಾಯದ ಕವಿಗಳು ತಮ್ಮ ಅನುಭವಕ್ಕೆ ಒಳಗಿರುವ ವಿಷಯ ವಸ್ತುಗಳನ್ನು ಆರಿಸಿಕೊಂಡು ಸತ್ವಯುತವಾದ ಸಾಹಿತ್ಯ ರಚಿಸಿರುವುದು ತಿಳಿತಯುತ್ತದೆ. ಅವು ಬಿತ್ತರಿಸುವ ಸಾಂಸ್ಕೃತಿಕ, ಸಾಹಿತ್ಯಿಕ ಮೌಲ್ಯಗಳನ್ನು ಬಿಂಬಿಸುತ್ತವೆ. ವಸ್ತು, ತಂತ್ರಗಾರಿಕೆಯಿಂದ ವಿಶಿಷ್ಟತೆಯನ್ನು ತಾಳಿವೆ. ಮರಾಠಿ ಪ್ರವೇಶಕ್ಕೆ ಮೂಲ ಬಾಗಿಲುಗಳಂತಿರುವ ಕರ್ನಾಟಕದ ಗಡಿ ಭಾಗದ ಮಲಾಬಾದ, ಬಳ್ಳಿಗೇರಿ, ತಾಂವಶಿ, ಶಿವನೂರ ಗ್ರಾಮಗಳು ಮರಾಠಿ ಸಾಹಿತ್ಯದ ಸತ್ವ ಅರಗಿಸಿಕೊಂಡು ಕನ್ನಡಕ್ಕೆ ಸಲ್ಲಬೇಕಾದ ಮನ್ನಣೆಯನ್ನು ನೀಡಿವೆ. ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಕನ್ನಡ - ಮರಾಠಿ ಸಂಘರ್ಷದ ಹಾದಿಯಲ್ಲಿ ಸಂಪ್ರದಾಯದ ಕವಿಗಳು ಸುಮಾರು ೦೫-೦೬ ದಶಕಗಳ ಹಿಂದೆ ತೋರಿದ ಜಾಣ್ಮೆ ಇಂದಿನವರಿಗೆ ಸ್ಫೂರ್ತಿಯೂ ಆಗಿದೆ. 'ಅವರು ಎಲ್ಲವನ್ನು ಸ್ವೀಕರಿಸಿದ್ದು ಏನೂ ಇಲ್ಲದಂತೆ ಆಗಿದ್ದಾರೆ. ಅಲ್ಲಿ ನುಡಿಗಟ್ಟುಗಳು ವ್ಯಾಪಕವಾಗಿ ಬಳಕೆಯಾಗಿವೆ. ಮರಾಠಿ ಭಾಷಾ ಪದಗಳು, ಇಂಗ್ಲೀಷ ಭಾಷೆಯ ಪದಗಳು ಅರಬ್ಬಿ ಭಾಷೆಯ ಪದಗಳು, ಹಿಂದಿ ಭಾಷೆಯ ಪದಗಳು ಸಾಹಿತ್ಯದ ಸರದಲ್ಲಿ ಮುತ್ತು ಜೋಡಿಸಿದಂತೆ ಅಂದವೂ, ಚೆಂದವೂ ಆಗಿವೆ. ಲಾವಣಿ ಪದಗಳ ಕೊನೆಯಲ್ಲಿ ಕವಿ ತನ್ನನ್ನು, ತಾನು ರಚಿಸಿದ ಸಾಹಿತ್ಯವನ್ನು ಮರೆಮಾಚಿದ್ದರೂ ತಾನು ಪ್ರತಿನಿಧಿಸುತ್ತಿರುವ ಹರದೇಶಿ, ನಾಗೇಶಿ ಪಂಥವನ್ನು ತನಗೆ ಮಾರ್ಗದರ್ಶನ ತೋರಿದ ಗುರುವನ್ನು ಆ ಕಾಲದಲ್ಲಿ ಗುರುವಿಗೆ ಸಿಗುತ್ತಿದ್ದ ಮನ್ನಣೆಯೂ ಆಗಿರುವುದು ಅಧ್ಯನದಿಂದ ತಿಳಿಯುತ್ತದೆ. ಈ ಸಂಪ್ರದಾಯದ ಅಧ್ಯಯನದಿಂದ ಇನ್ನು ಎಷ್ಟು ಸಾಹಿತ್ಯ ಹರಿದು ಹಂಚಿ ಎಲ್ಲೆಲ್ಲೋ ಹೋಗಿ ಏನೇನೋ ಆಗಿದೆ. ಅದನ್ನೆಲ್ಲ ಕೂಡಿಹಾಕುವದು ಸಾಹಿತ್ಯಕ ಮೌಲ್ಯ ವಿಶ್ಲೇಷಿಸುವುದು ಮುಂದಿನ ಅಧ್ಯಯನಗಳಲ್ಲಿ

ನಡೆಯಯಬೇಕಾಗಿದೆ. ಸುದೀರ್ಘ ಕ್ಷೇತ್ರಾಧ್ಯಯನ ಮಾತ್ರ ಇದಕ್ಕೆ ಪೂರಕವಾಗಬಲ್ಲದು.

ಈ ಸಂಪ್ರದಾಯದ ಕವಿಗಳನ್ನು ನಾವು ಇಂದು ಊಹಿಸಿಕೊಳ್ಳುವದಷ್ಟೆ ಆಗಿದೆ. ಅನೇಕ ಜೀವನ ವೃತ್ತಾಂತವಿರಲಿ, ಭಾವಚಿತ್ರಗಳು ಅಲಭ್ಯವಾಗಿವೆ. ಅವರ ಸಮೀಪದ ಬಂಧು ಬಾಂಧವರ ಹೇಳಿಕೆಗಳು, ಮಾಹಿತಿಗಾರರು, ಗೆಳೆಯರು, ವಿದ್ವಾಂಸರು ಅಪಾರವಾಗಿದ್ದಾರೆ. ಅವರು ನೀಡಿದ ಮಾಹಿತಿ ಆಧಾರದ ಮೇಲೆ ಈ ಅಧ್ಯಯನದ ಪ್ರತಿಫಲ ಅವಲಂಬಿಸಿದೆ. ಪ್ರಕಟಿತ ಸಾಹಿತ್ಯ ಉಪಲಬ್ದವಿದೆ. ಆದರೆ ಅಪ್ರಕಟಿತ ಸಾಹಿತ್ಯ ವಿಪುಲವಾಗಿದೆ. ಹರಿದು ಹಂಚಿಹೋಗಿದೆ. ಸಾಕಷ್ಟು ಲಭ್ಯವಿರುವ ಅಪ್ರಕಟಿತ ಸಾಹಿತ್ಯವನ್ನು ಪ್ರಕಟಿಸುವ, ಸಂಗ್ರಹಿಸುವ ಕಾರ್ಯ ನಡೆಯಬೇಕಾದುದು ಈ ಅಧ್ಯಯನದಿಂದ ಕಂಡುಕೊಂಡ ಫಲಶೃತಿಯಾಗಿದೆ.

ಅಧ್ಯಯನಕ್ಕೆ ಪೂರ್ಣವಿರಾಮ ಇಲ್ಲ, ಇದು ಆರಂಭ ಇದರಲ್ಲಿಯೇ ಅನೇಕ ಅಂಶಗಳು ಬೆಳಕು ಕಾಣಲು ಇದು ಒಂದು ಹಂತ ಮಾತ್ರ. ಇಂತಹ ಹೊಳುವು ಆಧಾರಗಳನ್ನು ಕಲೆ ಹಾಕಿ ಅಧ್ಯಯನವನ್ನು ಮುಂದುವರಿಸಲು ದಿಕ್ಸೂಚಿ. ಹೀಗೆ ಇಲ್ಲಿ ಅಭ್ಯಸಿಸಲಾದ ಬಳ್ಳಿಗೇರಿ ಲಾವಣಿ ಸಂಪ್ರದಾಯವು ವಿಶಿಷ್ಟತೆಯ ಮೆರುಗನ್ನು ಹೊಂದಿದೆ. ತನ್ನ ದಟ್ಟ ಅನುಭವದ ಪ್ರಸಾರಕ್ಕೆ ಯೋಗ್ಯವಾದ ಗ್ರಾಂಥಿಕ ಸಂಪತ್ತು ಲಭಿಸಿದರೆ ಅದು ಹಾಳಾಗದ ಸಂಪತ್ತಾಗುತ್ತದೆ. ಅದು ತನ್ನ ಸೀಮೆಯಲ್ಲಿ ಮಾತ್ರ ಪಸರಿಸದೆ ಎಲ್ಲ ಕಡೆಗೂ ಸಾಧ್ಯಂತವಾಗಿ ಚಲಾವಣೆಯಾಗುತ್ತವೆ. ಈ ಲಾವಣಿಯು ಗಡಿ ಸಾಂಸ್ಕೃತಿಕ ಹಿರಿಮೆಯ ರಸವತ್ತಾದ ಕಾವ್ಯಗಳು. ಉತ್ತರ ಕರ್ನಾಟಕದ ಅಥಣಿ ತಾಲೂಕಿನ ಗಡಿ ಗ್ರಾಮಗಳಲ್ಲಿ ಪಸರಿಸುತ್ತಿರುವ, ಉಸಿರಾಡುತ್ತಿರುವ ಲಾವಣಿಗಳು ನಾಡಿನ ತುಂಬೆಲ್ಲ ಓದುಗರಿಗೆ ತಲುಪಬೇಕಾದ ಅಗತ್ಯವಿದೆ. ಅವು ಗ್ರಂಥಸ್ಥ ರೂಪ ಪಡೆಯಬೇಕಾಗಿದೆ. ಕೇವಲ ಹುಲಕುಂದ ಸಂಪ್ರದಾಯವನ್ನೆ ಬೆಳಗಾವಿ ಜಿಲ್ಲೆಯ ಲಾವಣಿ ಸಂಪ್ರದಾಯವೆಂದು ತಿಳಿದುಕೊಂಡಿರುವದು ತಪ್ಪಬೇಕಾಗಿದೆ. ಅಥಣಿ ತಾಲೂಕಿನಲ್ಲಿ ಮೇಧಾವಿ ಲಾವಣಿಕಾರರ ದಂಡೇ ಇದೆ. ಅವರನ್ನೆಲ್ಲ ಬೆಳಕಿಗೆ ತರುವುದು, ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಅವರು ಮಾಡಿದ ಕೃಷಿ ಲಭ್ಯವಾಗಬೇಕಿದೆ. ವಿದ್ವಾಂಸರಿಂದ ಕಡೆಗಣಿಸಲ್ಪಟ್ಟ ಈ ಭಾಗದ ಕವಿಗಳು ಮುಂದಿನ ಅಧ್ಯಯನಗಳಲ್ಲಿ ತಮ್ಮನ್ನು ತಾವು ತೆರೆದುಕೊಳ್ಳಬೇಕಾಗಿದೆ. ಈ ಅಧ್ಯಯನವು ಮೂಲ ಸಾಮಗ್ರಿ ಶೋಧವನ್ನು ಅವಲಂಬಿಸಿದೆ. ಪ್ರಾಥಮಿಕ ಹಂತದ ಶೋಧವು ಕ್ಷೇತ್ರ ಕಾರ್ಯದಲ್ಲಿ

ದೊರೆಯುವ ಮಾಹಿತಿಯನ್ನು ಬಲವಾಗಿ ನಂಬಿದೆ. ಇದು ಕೆಲವೊಮ್ಮೆ ಅಸ್ಪಷ್ಟವೂ, ಅಪೂರ್ಣವು ಆಗುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ದೊರೆಯುವ ಮಾಹಿತಿಯನ್ನು ಲಭ್ಯವಿರುವ ಆಧಾರಗಳ ಮೇಲೆ ಸುಲಭವಾಗಿ ವಿಂಗಡಿಸಿಕೊಂಡು ಅಭ್ಯಸಿಸಲಾಗಿದೆ. ಹೀಗೆ ಒಂದು ಸಂಪ್ರದಾಯದ ಸಿದ್ಧಿಯನ್ನು ತನ್ನದಾಗಿಸಿಕೊಂಡ ಬಳ್ಳಿಗೇರಿ ಲಾವಣಿ ಸಂಪ್ರದಾಯದ ಅಧ್ಯಯನವು ವಿವಿಧ ನೆಲೆಯಲ್ಲಿ ಅನಾವರಣ


ಗೊಳ್ಳಬೇಕು. ಈ ಕವಿಗಳ ಲಾವಣಿಗಳು ಪ್ರಕಟಗೊಳ್ಳಬೇಕಿದೆ. ಈ ದಿಕ್ಕಿನಲ್ಲಿ ವಿದ್ವಾಂಸರು ಶ್ರಮಿಸುವ ಅಗತ್ಯವಿದೆ.

ಉತ್ತರ ಕರ್ನಾಟಕದ ವಿಶಿಷ್ಟ ಲಾವಣಿ ಸಂಪ್ರದಾಯಗಳಲ್ಲಿ ಇದುವರೆಗೂ ಹಾಗೂ ಹೀಗೂ ಉಳಿದುಕೊಂಡು ಬಂದಿರುವ ಬಳ್ಳಿಗೇರಿ ಲಾವಣಿ ಸಂಪ್ರದಾಯ ಕುರಿತು ಲಭ್ಯ ಮಾಹಿತಿ, ವಿದ್ವಾಂಸರ ಅಭಿಪ್ರಾಯ ಅಭ್ಯಸಿಸಿ ಅಧ್ಯಯನ ಮಾಡಲಾಗಿದೆ. ವಿಷಯದ ಪರಿಮಿತ ಹಾಗೂ ವೇಳೆಯ ಅಭಾವವು ಅಧ್ಯನದ ಮಾರ್ಗದಲ್ಲಿ ಅನೇಕ ತಪ್ಪುಗಳು ನುಸುಳವಂತೆ ಮಾಡಿರಬಹುದು. ವಿದ್ವಾಂಸರು ಅಂತಹ ತಪ್ಪುಗಳನ್ನು ತೋರಿಸಿದಾಗ ಮುಂದಿನ ಹೆಜ್ಜೆಗಳನ್ನು ತಪ್ಪಿಲ್ಲದಂತೆ ಇಡಲು ಸಾಧ್ಯವಾಗುತ್ತದೆ. ಅಂತಹ ಎಲ್ಲ ಸಕಾರಾತ್ಮಕ ಸಲಹೆಗಳಿಗೆ, ಸೂಕ್ತ ಚರ್ಚೆಗಳಿಗೆ, ಮನಃಪೂರ್ವಕ ಸ್ವಾಗತವಿದೆ.

★ ★ ★

ಅನುಬಂಧ -೧

ಅಥಣಿ ತಾಲೂಕಿನ ನಕ್ಷೆ


ಅಥಣಿ.
ತಾಲೂಕಿನ ನಕ್ಷೆ.

ಅನುಬಂಧ -೨

ಛಾಯಾಚಿತ್ರಗಳು



ಖ್ಯಾತ ಲಾವಣಿ ಕವಿ ಅಪ್ಪಣ್ಣ ಬಳ್ಳಿಗೇರಿ.



ಮಲ್ಲಣ್ಣ ಕವಿಯ ಹಾಡಿಗೆ ವಸ್ತುವಾದ ಎಮ್. ಎಲ್. ಎ.

ಎನ್. ವಾಯ್. ಪಾಟೀಲ.



ಮಲ್ಲಣ್ಣ ಕವಿಯ ಹಾಡುಗಳಿಗೆ ಲಿಖಿತ ರೂಪ ನೀಡುತ್ತಿದ್ದ ಶಿವಬಸು ಕುಳ್ಳೊಳ್ಳಿ



ಹರದೇಶಿ ಹಾಡುಗಾರ್ತಿ ಗೂಗವಾಡ ಕಾಸವ್ವಾ

ಅನುಬಂಧ -೩.

ಮಾಹಿತಿ ನೀಡಿದವರ ವಿವರ

ಅ. ನಂ:	ಹೆಸರು	ವಯಸ್ಸು	ಊರು
೧	ರಾವಸಾಬ ಅಪ್ಪಣ್ಣ ಸನದಿ	೬೦	ಬಳ್ಳಿಗೇರಿ
೨	ಪ್ರಕಾಶ ರಾವಸಾಬ ಸನದಿ	೩೮	ಬಳ್ಳಿಗೇರಿ
೩	ಪರಸಪ್ಪ ಮಲ್ಲಪ್ಪಾ ತಳವಾರ	೬೨	ಮಲಾಬಾದ
೪	ಗುರಯ್ಯಾ ಮಲ್ಲಯ್ಯಾ ಮಠಪತಿ	೪೬	ಮಲಾಬಾದ
೫	ರಾಚಪ್ಪಾ ಗುರುಪಾದ ತಾಂವಂಶಿ	೬೩	ಬೇವನೂರು
೬	ಕಾಕಾಸಾಬ ಚನ್ನಪ್ಪ ಚೌಗುಲಾ	೫೦	ಬೇವನೂರು
೭	ದುಂಡಪ್ಪಾ ಗೂಗವಾಡ	೩೮	ಗೂಗವಾಡ
೮	ಕಾಸವ್ವ ಗೂಗವಾಡ	೫೬	ಗೂಗವಾಡ
೯	ನಾರಾಯಣ	೬೨	ಶಿವನೂರ
೧೦	ಸುಭಾಸ ಮಠಪತಿ	೪೩	ಮಲಾಬಾದ
೧೧	ದತ್ತು ಹವಾಲ್ದಾರ	೪೦	ಅನಂತಪೂರ
೧೨	ಕೃಷ್ಣಾ ಹೊನಕಾಂಡೆ	೬೧	ಬಳ್ಳಿಗೇರಿ
೧೩	ವಸಂತ ಕಲ್ಲಪ್ಪಾ ಹೊಸಮನಿ	೪೯	ಬೇವನೂರು
೧೪	ಮುತ್ತವ್ವ	೬೮	ಗೂಗವಾಡ
೧೫	ಬಸಯ್ಯಾ ಮಠಪತಿ	೫೮	ಮಲಾಬಾದ
೧೬	ವಿಠ್ಠಲ ಕಾಳೆಗೊಳ	೨೭	ಮಲಾಬಾದ

ಅನುಬಂಧ -೪

ವಿಷಯದ ಕುರಿತು ಚರ್ಚಿಸಿದ ವಿದ್ವಾಂಸರುಗಳು

೧. ಡಾ|| ವ್ಹಿ. ಎಸ್. ಮಾಳಿ.
ಅಧ್ಯಾಪಕರು ವೃಷಭೇಂದ್ರ ಪದವಿ ಕಾಲೇಜು, ಹಾರೂಗೇರಿ

೨. ಡಾ|| ಎಮ್. ಎನ್. ವಾಲಿ.
ವಿಶ್ರಾಂತ ಅಧ್ಯಾಪಕರು, ಬಿಜಾಪೂರ.

೩. ಡಾ|| ಆರ್.ಬಿ.ಚಿಲುಮಿ.
ಅಧ್ಯಾಪಕರು, ವೃಷಭೇಂದ್ರ ಪದವಿ ಕಾಲೇಜು, ಹಾರೂಗೇರಿ.

೪. ಎಸ್. ಎಸ್. ಕೋಳಿ.
ಶಿಕ್ಷಕರು.

೫. ಬಸಗೊಂಡ ಕುಳ್ಳೊಳ್ಳಿ.
ಸಾಹಿತ್ಯಾಸಕ್ತರು.

೬. ಧರೆಪ್ಪಾ ಮಸಾಳೆ.
ಸಮಾಜ ಧುರೀಣರು.

೭. ರಾಮಣ್ಣಾ ಕುಳ್ಳೊಳ್ಳಿ.
ಸಹಕಾರಿ ಧುರೀಣರು.

೮. ಶ್ರೀ ಅಣ್ಣಾಸಾಬ ವಿರುಪಾಕ್ಷಿ ಅಡಹಳ್ಳಿ
ಆಯ್ಕೆ ಶ್ರೇಣಿ ಕನ್ನಡ ಉಪನ್ಯಾಸಕರು.

ಅನುಬಂಧ -೫

ಆಕರ ಗ್ರಂಥಗಳು

೧. ಡಾ. ಗಂಗಾಧರ ದೈವಜ್ಞ : ಸಣ್ಣಾಟಗಳು ಹುಟ್ಟು ಬೆಳವಣಿಗೆ : ಮಂಟಪ ಮಾಲೆ, ೧೪೫-ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೬.

೨. ಗೊ. ರು. ಚ (ಸಂ): ಕರ್ನಾಟಕದ ಜನಪದ ಕಲೆಗಳು: . ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೯೭೭.

೩. ಡಾ. ಬಿ. ಎಸ್. ಭಜಂತ್ರಿ : ಹುಲಕುಂದದ ಲಾವಣಿ ಸಂಪ್ರದಾಯ: ಒಂದು ಅಧ್ಯಯನ ಚೈತನ್ಯ ಪ್ರಕಾಶನ, ಪಂಚಗಾಂವ-೨೦೦೨.

೪. ಡಾ. ಮಂಜುನಾಥ ಬೇವಿನ ಕಟ್ಟಿ : ಜನ ಜಾನಪದ ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೬.

೫. ಡಾ. ವೀರೇಶ ಬಡಿಗೇರ :ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು : ಒಂದು ಸಾಂಸ್ಕೃತಿಕ ಅಧ್ಯಯನ : ವಿಮೋಚನಾ ಪ್ರಕಾಶನ, ಅಥಣಿ- ೧೯೯೯.

೬. ಡಾ. ವಿರುಪಾಕ್ಷಿ ಪೂಜಾರ ಹಳ್ಳಿ: ಕರ್ನಾಟಕದಲ್ಲಿ ತಳವಾರಿಕೆ : ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೬.

೭. ಡಾ. ವ್ಹಿ. ಎಸ್, ಮಾಳಿ (ಸಂ): ಅಥಣಿ ತಾಲೂಕಾ ಸಮಗ್ರ ದರ್ಶನ . ವಿಮೋಚನಾ ಪ್ರಕಾಶನ ಅಥಣಿ ೨೦೦೭.

೮. ಡಾ. ಎಮ್.ಎಸ್, ಸುಂಕಾಪೂರ (ಸಂ) :ಜೋಗತಿ ಹಾಡು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -೧೯೭೭.

೯. ಮೋ. ರಾ. ವಾಳಂಬೆ : ಸುಗಮ ಮರಾಠಿ ವ್ಯಾಕರಣ ಲೇಖನ : ನಿತೀನ ಪ್ರಕಾಶನ ಪುಣೆ -೩೦- ೨೦೦೦.

೧೦. ಶಕುಂತಲಾ ಸಿಂಧೂರ : ಜಾನಪದ ವಿದ್ವಾಂಸ : ಡಾ|| ಬಿ. ಎಸ್. ಗದ್ದಿಗಿ ಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -೧೯೭೭.

೧೧ ಡಾ. ಹರಿಲಾಲ ಪವಾರ : ಜನಪದ ಸಾಹಿತ್ಯಕ್ಕೆ ಬಿಜಾಪೂರ ಜಿಲ್ಲೆಯ ಕೊಡುಗೆ: ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೨.

೧೨. ಡಾ. ಎಚ್. ತಿಪ್ಪೆರುದ್ರ ಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ಡಿ.ವಿ.ಕೆ ಮೂರ್ತಿ. ಮೈಸೂರ - ೧೯೬೮.

ಅನುಬಂಧ -೬

ಅಪ್ಪಣ್ಣ ಕವಿಯು ರಚಿಸಿದ ಎಲ್ಲಮ್ಮನ ಲಾವಣಿ

ಆದಿ ಬಂವಾರದಿಂದ ಆಕಾರದ ಬಂದಾಳ ಮಾಯಕಾರ್ತಿ ಮರ್ತೆಕ ।
ವುಗ್ರದೇವಿ ಅನ್ನವುರು ರೇಣುಕಾ ।
ತಾಯಿ ಮಾಯಿ ನಿನ್ನ ನಂಬಿದ ಭಕ್ತರು ಹೊದ್ರ ಮೋಕ್ಷ ಸದನಕಾ ॥ ಪ ॥
ಮೊದಲ ಎಲ್ಲಮ್ಮನ ತಾಯಿ ತಂದೆ ಊರ ಕಾಶ್ಮೀರ ದೇಶ ಪಟ್ಟಣ ।
ಅಕಿ ತಾಯಿ ತಂದಿ ಟೀಕಾನಾ ।
ತಂದಿ ರೇಣುಕರಾಜಾ ತಾಯಿ ಭೋಗಾವತಿ ಬಲ್ಲವರನ್ನಾ ಕೇಳಣ್ಣಾ ॥
ರೇಣುಕಾ ರಾಜಾನ ಹೆಂಡರ ಇಪ್ಪತ್ತೊಂದ ಮಂದಿ ಸತಿಯಾರ। ಸವಣಾ ।
ಅವರಿಗಿ ಇಲ್ಲರಿ ಪುತ್ರ ಸಂತನಾ।
ಬಂಜಿ ಅಂತ ಬಹುಮಂದಿ ಮಾತಾಡತಾರ ಕೇಳಿ ನೊಂದಿತ ಅವರ ಮನಾ॥
ಪಟ್ಟದ ರಾಣಿ ಬೋಗಾವತಿ ಅಂತಾಳ ಪತಿ ದೇವ ಮಾಡುದು ಇನ್ನೇನಾ ।
ನಮ್ಮ ಪಾಲಕ ಬಂದಿತ ಬಂಜೆತನ ॥
ಮಕ್ಕಳಿಲ್ಲದ ಬಾಳ್ವೆ ಎಷ್ಟ ಬಾಳಿದರೇಣಾ ನಮ್ಮ ದೈವನಾ ॥ ಚಾಲ ॥
ಬಟ್ಟ ಮಾಡಿ ಬ್ರಹ್ಮ ಸಿಟ್ಟಿಲೆ ಬರದಾನ ಕೆಟ್ಟ ನಮ್ಮ ಹಣೆಬಾರಾ ॥
ಮಕ್ಕಳಿಲ್ಲದ ಜನ್ಮ ಸಿಟ್ಟಿಗೆ ವಿರುದ್ಧ ಅಂತ ಕೂಗತಾವ ಶಾಸ್ತ್ರಾ ।
ಕಾಂತಾ ಸಂತತಿ ಸಂಪತಗಳಿಂದ ಈ ಸಂಸಾರ ಶಿಡಗರಾ ।
ಈ ಮಾತ ಮನಸಿಗಾತ ಪೆಟ್ಟಾ । ಹೋದಾರೋ ತಮ್ಮ ದೇಶ ಬಿಟ್ಟಾ।
ಗಾಡಾಂತರ ಸೇರ್ಯಾನ ಬೆಟ್ಟಾ। ಹುಲಿ ಕರಡಿ ವಾಸ ಮಾಡು ಮೆಟ್ಟಾ।
ಆಲ್ಲಿ ಗೌತಮರುಷಿ ಆಶ್ರಮ ಸೊಬಿಸೂತ ನಿಂತ ನೋಡ್ಯಾರ ಕಣ ಮುಟ್ಟಾ।

ಅಂತ ಕಾಡಿನೊಳ ತಪಾಮಾಡುತ್ತಿದ್ದ ಗೌತಮ ಋಷಿ ಮಹಾವೀರಾ।
ಸತಿ ಪತಿ ಅವನ ಪಾದಾ ಹಿಡಿದ ನಮ್ಮ ದೋಷಿ ಮಾಡಂದರಾ ದೂರಾ।
ಪುತ್ರ ಸಂತಾನ ನಮ್ಮ ಹೊಟ್ಟಿಲೆ ಇಲ್ಲಂತ ತಗದ ಹೇಳ್ಯಾರ ಕಣ್ಣೀರಾ ॥
ರುಷಿ ಎದ್ದ ಆಶೀರ್ವಾದ ಕೊಟ್ಟಾ।
ಮುಕಾಂಬಿಕಾ ಗಿರಿಗೆ ಹೋಗರಿ ಹೊಂಟಾ।
ಪಶ್ಚಿಮ ಸಮುದ್ರ ಕಡೆ ಬೆಟ್ಟಾ।
ಮಾವಿಂದ್ರ ಪರ್ವತದ ಬೆಟ್ಟಾ।
ಆ ಬೆಟ್ಟದ ತುದಿಯ ಮ್ಯಾಲ ಸಾಲ ಹರಿಯತಾವ
ಮೂರು ನದಿಯ ಬೋರಿಟ್ಟಾ।
ನಳನಿ, ನಂದಿ ಎರಡು ನದಿಯ ಹರಿಯುತ್ತಾವ
ಪೂರ್ವ ದಿಕ್ಕಿಗಿ ಶಾಹೀರಾ।
ಸೀತೆ ಎಂಬು ನದಿ ಪಶ್ಚಿಮ ದಿಕ್ಕಿಗಿ ಮ್ಯಾಲಕ ಹರೀತಾವ ನೀರಾ।
ಅವ ಮೂರು ನದಿಯ ನೀರಾ ಉಗ್ರ
ನರಸಿಂಹನ ಬಾಯಿಲೇ ಬೀಳತಾವ ಚದುರಾ।
ಅಲ್ಲಿ ಬಾಲ ದುರ್ಗಿ ಅರ್ಭಟಾ।
ದೇವಿ ನಿಂತಾಳ ಅವತಾರ ತೊಟ್ಟಾ।
ಅಕಿ ಪೂಜೆ ಮಾಡಿರಿ ಮನಸ್ಸಿಟ್ಟಾ।
ಇಟ್ಟ ಹೇಳಿ ಗೌತಮ ಹಚಗೊಟ್ಟಾ।
ಸತಿ ಪತಿ ಹೊದರ ತಮ್ಮ ಸಂಸಾರ ಸದ್ಗತಿ ಬಿಟ್ಟಾ ॥ ಕೂಡು॥
ಮಾವಿಂದ್ರ ಪರ್ವತ ಗಿರಿ ಏರಿ
ನೋಡಿದಾರ ಸೆಡಗರ ಸಂಪತ ಸುಖಾ।
ಗಿಡ ಬಳ್ಳಿ ಚಾಚಾವ ಗಗನಕಾ ॥ ಚೌಕಾ।
ಭುಲೋಕದಲ್ಲಿ ಬಾಲದುರ್ಗಿ ಪಟ್ಟಣಾ ಮಹಾವಿಂದ್ರ
ಗಿರಿಯ ಪರ್ವತಾ। ಅದಕ ಸ್ವರ್ಗ ಅನ್ನುವರು ಸಾಕ್ಷಾತಾ।

ರೇಣುಕಾ ರಾಜಾ ಭೋಗಾವತಿ ಹೋದಾರ
ಅಲ್ಲಿಗಿ ಪುತ್ರ ಸಂತಾನ ಬೇಡುತ್ತಾ।
ಪೂರ ಎರಡ ತಿಂಗಳ ತಪಾ ಮಾಡ್ಯಾರ ಹಣ್ಣ ತಿಂದ ಒಪ್ಪತ್ತಾ ।
ದೇವಿ ಪೂಜೆ ಮಾಡುವರು ಮಾರ ಹೊತ್ತಾ।
ಕಟೂರ ಭಕ್ತಿಗಿ ಮೆಚ್ಚಿ ವರಾ ಕೊಟ್ಟಾಳ
ದೇವಿ ಕನ್ಯಾ ರತ್ನ ಹುಟ್ಲಂತ॥
ವರಾ ಪಡದ ಮುಂದ ಕಾಶ್ಮೀರ ದೇಶಕ ಬಂದ
ಕಾರಣ ಕೇಳಿರಿ ಮುಂದ ಕತಾ ಎಲ್ಲಮ್ಮ
ಹುಟ್ಟಿದ್ದು ಕಚಿತಾ । ಬೋಗಾವತಿ ಉದರದಿಂದ ಜನಿಸಿ
ಬಂದಾಳ ದೇವಿ ಶುಕ್ರವಾರ ದಿನಾ ಸಂಜಿ ಹೊತ್ತಾ ॥ ಚಾಲ ॥
ಕನ್ಯಾರತ್ನ ಕಮಲಾಕ್ಷಿ ಜನಿಸಿ ಬಂದಾಳ
ಜನ್ಮ ತೊಟ್ಟ ಪುರಮಾನಸಿ ।
ಗ್ರಹ ಕುಂಡಲಿ ಜ್ಯೋತಿಷ್ಯ ತಗಸ್ಯಾರ ಪಂತೋಜಿ ಪಂಡಿತರ ಕರಸಿ ।
ರೇಣುಕಾ ಅಂತ ಕೂಸಿನ ಹೆಸರ ಇಟ್ಟಾರೋ
ಕೈ ಪತ್ರ ಕಾಗದ ಬರೆಸಿ।
ರೇಣುಕಾ ರಾಜನ ವುಳದ ಮಡದಿಯರು ಕೂಸಿನ ಕೊಲಬೇಕು ಅನ್ನುವರು ।
ತೋಟ್ಲಾನ ಕೂಸಿನ ನೋಡಿದರು ಮಾಯಾದ ಸರ್ಪ ಬಿಟ್ಟಾರು .
ಹಾವು ಕಚ್ಚಬೇಕಂತ ನಡೀತ। ಮಂದಿ ಮಕ್ಕಳಿಲ್ಲ ಯಾರ್‍ಯಾರು ॥
ಆ ಕೂಸ ಅವತಾರ ತೊಟ್ಟ ಆಕಾಶ ಧರುಣಿಗಿ ಏಕಾಗಿ ನಿಂತ ಗದ್ದರಿಸಿ।
ಪಂಚ ವರಣದ ಹತಿಯಾರಲೆ ಹೊಡದಾಳ। ಹಾವ ತುಂಡಾಗಿ ಬಿತ್ತ ಕತ್ತರಿಸಿ।
ಆ ಅವತಾರ ಬಿಟ್ಟ ಸಣ್ಣ ಶಿಸುವಾಗಿ ಮಲಗ್ಯಾಳು ।
ಈ ಸರ್ಪಿಗ ಕಡದವರ್‍ಯಾರು । ತೊಟ್ಟಿಲಾನ ಕೂಸಿನ ನೋಡ್ಯಾರು ।
ಕೂಸು ನಕ್ಕು ಆಡುದು ಕಂಡಾರು।
ಪಂಚ ವರ್ಣದ ಹತಿಯಾರ ನೋಡಿ ಧನ್ಯ ಧನ್ಯ ಆದಾರು।

ಆ ಹತಿಯಾರ ಮ್ಯಾಲ ಪಂಚಾಕ್ಷರಿ ಹೊಳಿತಿದ್ದು
ಕೇಳ್ಯಾರ ಶಾಣ್ಯಾರನ ಕರಸಿ।
ಆ ಶಾಸ್ತ್ರ ಹೇಳಿದಾನ ಈ ಕೂಸಿನ ಹಸ್ತಲೆ ಸರ್ಪ
ಬಿದ್ದತಿ ಕತ್ತರಿಸಿ ಮಹಾ ಮುನಿಗಳು ಯೋಗಿ
ರುಷಿಗಳು ಮಾಡಿ ಹೇಳ್ಯಾರೋ ಚೌಕಾಶಿ ಕರೆ
ದೇವಿ ಹೌದ ಅನ್ನುವರು। ನಾಗಲೋಕ ನಂದನ ವನದವರು।
ತಪ್ಪಿ ರಂಗ ಭೂಮಿ ಇಳದಾರು। ಶರಣೆಂದು ಶರಣ ಮಾಡಿದರು।
ಜಗದ ಕ್ರತಾ ಜಗದಂಬಿ ತಾಯಿ ಮಾಯಿ ಅನ್ನುವರು।। ಕೂಡ।।
ರೇಣುಕ ರಾಜಾನ ಮಗಳ ರೇಣುಕಾ ಅಂತ ಉಳಿತ ಹೆಸರ ಕಡಿತನಕಾ।
ತಾಯಿ ತಂದಿ ಇಟ್ಟಾರ ಹಿಂದಕಾ ।। ೨ ।। ಚೌಕ ।।
ರೇಣುಕಾ ರಾಜಾ ಬೋಗಾವತಿ ಅಂತಾರು ನಮ್ಮ ಮಗಳ ಬಂದಾಳು ಪ್ರಾಯಕಾ ।
ವರ ತಗಿಲಾಕ ಹೋದ್ರ ಮಗಳ ತಕಾ।
ದಾರ್‍ಯಾಗ ಕೃಷ್ಣಾನದಿ ಸ್ನಾನ ತೀರಿಸಿ ಕೊಂಡು ಸಾಗಿ ಹೋದರು ಮುಂದಕಾ ।।
ಮಲಪ್ರಭಾ ನದಿ ಕ್ಷೇತ್ರ ತೀರಿಸಿಕೊಂಡ ಹೋದಾರು ತೋರಗಲ್ಲಕಾ ।
ಕರ್ಮ ಸಿದ್ದಿ ಗವಿಯ ಬದಿಯಾಕಾ।
ಭಕ್ತಿ ಸಿದ್ದಿ ಮೋಕ್ಷ ಸಿದ್ದಿ ಅನ್ನುವರು ಸಿದ್ಧರಿರುವ ಗುಡ್ಡಕಾ ।।
ಸಿದ್ಧರಿಗಿ ಹೇಳಿ ಮುಂದ ದಾರಿ ಹಿಡದ ಹೋದ ಕಾಮಸಿಂಗ
ನಂದನ ವನದಂಗ ಮಿಂಚ ಹೋಳಿಯುದು ಲಕಲಕಾ। ಚಾಲ ।।
ವಾವ್ವಾ ಅಂದ ವರ ನೋಡಿ ರೇಣುಕಾರಾಜಾ।
ಜಮದಗ್ನಿ ಋಷಿಗಿ ಆದ ಭೆಟ್ಟಿ।
ನಮ್ಮ ಮಗಳ ರೇಣುಕಾನ ಜಮದಗ್ನಿಗಿಗೆ ಕೊಡುವದು
ನಿಶ್ಚಿಯ ಮಾಡ್ಯಾರ ಗಟ್ಟಿ। ಮಹಾ ಮುನಿಗಳು
ಕೂಡಿ ಅಕ್ಕಿಕಾಳ ಒಗದಾರ ಕಂಕಣ ಬಾಸಿಂಗಕಟ್ಟಿ।
ಸತಿಪತಿ ರಾಜರೋಳು ಮಿಗಿಲಾ।

ಧನಾ ದವಲತ್ತಕ ಏನ ಕಡಿಮೆ ಇಲ್ಲ।
ಜಮದಗ್ನಿಗೆ ಶಿವುನ ಅನುಕೂಲಾ। ಕಾಮಧೇನು ಇತ್ತ ಕಾವಲಾ।
ಪಂಚ ಪಕ್ವಾನ ಬೋಜನ ಉಣ್ಣುವರು ಅಮೃತ ಹಾಲಾ।
ನಾಲ್ಕು ಮಂದಿ ಅವರ ಹೊಟ್ಟಲೆ ಪುತ್ರರ
ಭೂಮಿಗೆ ಬಂದಾರ ಹುಟ್ಟಿ। ಸುಲೋಚನ ಎಂಬಂವ
ಮೊದಲ ಹುಟ್ಟಿದಾನ ಎಚ್ಚರ ಹಿಡಿ ಮಾತ ಗಟ್ಟಿ।
ವಿಲೋಚನ ಎಂಬಂವ ಎರಡನೆಯ ಉತ್ತರ ಸುಳ್ಯಂದಾವ
ಆದ ಖೋಟ್ಟಿ । ಬ್ರಹ್ಮ ಲೋಚನ ಹುಟ್ಟಿದ ಮ್ಯಾಲಾ ।
ಪರಸರಾಮ ಹುಟ್ಯಾನ ಸಣ್ಣ ಬಾಲಾ ।
ಈ ಮಾತ ಬಲ್ಲವವನೆ ಬಲ್ಲ। ಅಜ್ಞಾನಿಗೆ ತಿಳಿ ಮಾತ ಅಲ್ಲಾ।
ಜಮದಗ್ನಿ ಋಷಿಗಿ ಯಾವ ಮಾತಿಂತ ಏನ ಕಡಿಮೆ ಇಲ್ಲಾ।
ಕಾರ್ತಿವೀರ ಅರ್ಜುನ ಜಮದಗ್ನಿ ಜೀವ ಹೊಡದ
ಕಾಮಧೇನು ಓದ ಕಣ್ಣ ಕಟ್ಟಿ। ಮಡದಿ ರೇಣುಕಾ
ಬೋರ್ಯಾಡಿ ಅಳತಾಳ ಪತಿದೇವಾ ಇಂದ ಕೈ ಬಿಟ್ಟ।
ಸುದ್ದಿ ಕೇಳಿ ಪರಸರಾಮ ಓಡಿ ಬಂದ ದಿನ್ನ ಹಾಕಿ ನಿಂತ
ನಡಕಟ್ಟಿ । ಬಂದ ತಂದಿ ಪ್ರಾಣ ಹೋದ ಮ್ಯಾಲ ।
ತಂದಿನ ಕೊಂದ ವೈರಿ ಸಿಗಲಿಲ್ಲ. । ನಾ ಬಂದ ವ್ಯರ್ಥವಾತಲ್ಲಾ।
ಇಪ್ಪತ್ತೊಂದ ಗಾಯಿ ತಲಿಮ್ಯಾಲಾ ।
ತನ್ನ ಗಂಡ ನೋಡ್ಯಾನೋ ಇದನ್ನು । ಕಾರ್ತಿವೀರನ
ಶಿರ ಹರಸ್ತಿನಂತ ವರಾ ಪಡೆದ ಗೋಪಾಲಾ ॥ಕೂಡ॥
ತಾಯಿ ಮಗಾ ಕುಂತ ದು:ಖ ಮಾಡತಾರ ಸಂಕಟ ಬಂದ ಜೀವಕಾ ।
ಈ ಸುದ್ದಿ ಮುಟ್ಟಿತ್ತ ಸ್ವರ್ಗಕಾ ॥ ೩॥ ॥ಚೌಕ॥
ತಂದಿನ ಕಿಚ್ಚ ಕುಡಬೇಕಂತ ಪರಸುರಾಮ ಪುಣ್ಯಭೂಮಿಗಿ ಹೊಂಟಾನು ।
ತಂದಿ ದೇಹಾ ಹೆಗಲಿಗಿ ಹೊತ್ತಾನು ।

ಪವಿತ್ರವಾದ ಜ್ಯಾಗಾ ಸಹ್ಯಾದ್ರಿ ಮಾರ್ಗ ಹಿಡದ ದಕ್ಷಿಣ ಭಾರತಕ ಹೋದಾನು ॥ ೧॥
ಭಾರತ ಭೂಮಿ ರಾಮಸಿಂಗ ಪರ್ವತಕ ಹ್ವಾದ ಹುಲಿಗುಡ್ಡ ಸೇರ್‍ಯಾನು ।
ಸವದತ್ತಿ ಮ್ಯಾಲಕ ಬಿಟ್ಟಾನು । ಅಲಕಿ ಗ್ರಾಮ ಉಗರಗೊಳ್ಳಕ
ಬಂದ ತಂದಿ ದೇಹಾ ಭೂಮಿಗಿ ಇಟ್ಟಾನು ॥೨॥
ಆಕಾಶವಾಣಿ ಆತ ಪರಸರಾಮಗ ಅಲ್ಲಿ ತಂದೀನ ಅಗ್ನಿ ನಿಡ್ಯಾನು।
ಉಗರ ಗೋಳ್ಳಕ ದಪನ ಮಾಡ್ಯಾನು ।
ಅದೇ ಕಿಚ್ಚಿನಾಗ ತಾಯಿ ರೇಣುಕಾ ಹಾರಿ ಪ್ರಾಣ ಕೊಟ್ಟದ್ದು ನೋಡ್ಯಾನು ॥೩॥
ಚಾಲ ॥ ಹಡದ ತಾಯಿ ಮಡದ ಹ್ವಾದಾರಂತ ಚಿಂತಿವಳಗ ಆದ ಸಣ್ಣಾ।
ಬಂದು ಬಳಗ ಯಾರೂ ಇದ್ದಿದಿಲ್ಲ ಮೊದಲ ಸತ್ತಿದ್ದ ಅವರಣ್ಣಾ ।
ಪರಶರಾಮಗ ಪುನಾ ಆಕಾಶವಾಣಿ ಆತ ಗುಡ್ಡಕ ಬಿಟ್ಟಾನು ಬಾಣಾ ।
ಆ ಬಾಣಿನ ಪೆಟ್ಟ ನಟ್ಟಿತು । ಪೆಟ್ಟಿಗಿ ಗುಡ್ಡ ಶೀಳೀತು ।
ಪವಿತ್ರವಾದ ತೀರ್ಥ ಪುಟಿದೀತು ।
ಸಪ್ತ ಸಾಗರ ಅಲ್ಲಿ ಉದಿ ಆತು ।
ಎಣಿಗುಂಡ ತೀರ್ಥ ಅಂಬುದ ಹೆಸರ ಪ್ರಸಿದ್ದವಾದೀತು ॥೧॥
ಅದೇ ತೀರ್ಥ ತಂದ ಅಗ್ನಿಕುಂಡಕ ಶಿಡಸ್ಯಾನ
ಇಟ್ಟ ತುಂಬಿದ ಬಡಿಯಾಣಾ ಉಗ್ರದೊಳಗಿಂದ
ಉಧೋ ಅಂತ ತಂದಿ ತಾಯಿ ಬಂದ್ರ ಆಗಿ
ಉತ್ಪನ್ನ ಮಗಾ ಪರಸರಾಮ ಕರವ ಮುಗಿದು
ಶಿರಬಾಗಿ ಮಾಡ್ಯಾನ ಶರಣು ॥
ಪರಸರಾಮಗ ಮಾತ ನೆನಪಾತು ।
ವೀರ ಅರ್ಜುನನ ಮ್ಯಾಲ ಸಿಟ್ಟಿತ್ತು।
ಬಾಣಿನ ಪೆಟ್ಟ ನೆಟ್ಟಿತ್ತು। ಈ ಭೂಮಿಗಿ ಅವನ ಹೆಣಾ ಬಿತ್ತು।
ಅವನ ಚಂಡ ಹೋಳಿ ತಾಯಿ ತಂದಿ ಮುಂದ
ಇಟ್ಟ ಶಿಟ್ಟ ಆವಾಗ ಇಳದೀತು ॥೨॥

ಹುಲಿಗುಡ್ಡಕ ಎಲ್ಲಮ್ಮನ ಮನಿಮಾರ ಕಲ್ಲಕೇರಿ ಮಂಜೆಣಾ।
ಪತಿ ಜಮದಗ್ನಿ ತಪಾ ಮಾಡತಿದ್ದ ಜಪಾ ಎಣಿಸಿ ಮುಚ್ಚಿ ಕಣ್ಣಾ।
ಮಲಪ್ರಭಾ ನದಿ ತೀರ್ಥ ತರವುಳೋ ಎಲ್ಲಮ್ಮ ಪೂಜ್ಯಾಕ ದಿನಾ।
ಕಲ್ಲ ಕೊಡಾ ಹಾವಿನ ಶಿಂಬಿತ್ತು।
ಕೊಡಾ ತುಂಬ್ಯಾಳೋ ನದಿಯಾಗ ನಿಂತು।
ಎರಡ ಮೇನ ಕೂಡಿದ್ದು ನೇದರ ಹೋತು।
ಅದನ ನೋಡಿ ಪಾಪ ತಟ್ಟಿತು।
ತನ್ನಿಂದ ತಾನೇ ಕೈಯ್ಯಾಗಿಂದ ಖಾಲಿ ಕೊಡ ವಡದೀತು ॥೩॥ ಕೂಡು ॥
ಕೊಡಾ ವಡದ ಬರಿಗೈಲೆ ಬಂದಾಳ ದೇವಿ ನಾಚಿ ತನ್ನ ಜೀವಕಾ ॥
ಅಪವಾದ ಬಂತ ಪಾಲಕಾ ॥ ಳ ಚೌ ಕು ॥
ಮೇನ ಕ್ರೀಡಿ ಆಡುದ ಎಲ್ಲಮ್ಮ ನೋಡ್ಯಾಳಂತ
ಜಮದಗ್ನಿಗಿ ತಿಳಿದೀತು। ಅವಗ ಬಾಳ ಕೋಪ ಬಂದೀತು।
ಪರಸರಾಮನ ಕರಸಿ ಎಲ್ಲಮ್ಮನ ಹೊಡಶಿದಾನ
ಹೆಸರ ಹಿಂದ ಉಳದೀತು ॥೧॥
ತಂದಿ ಮಾತ ಕೇಳಿ ತಾಯಿನ ಹೊಡದಿನಂತ ಪರಸರಾಮಗ ಚಿಂತಿ ಬಿದ್ದಿತು।
ಆಕಾಶವಾಣಿ ಅವಗ ಆದೀತು।
ಅದೇ ಎಣಿಗುಂಡ ತೀರ್ಥ ತಾಯಿಗಿ ಶಿಡಿಸಿದಾನು ತಾಯಿ ಜೀವ ಪಡದೀತು। ೨॥
ಎಲ್ಲಮ್ಮ ಹುಟ್ಟಿ ತಿರಗಿ ಮರ್ತೆಕ ಬಂದಾಳಂತ ಸುದ್ದಿ ಗಂಡಗ ಮುಟ್ಟಿತ್ತು।
ಅವಗ ಬಾಳ ಪೆಟ್ಟ ಹತ್ತಿತು।
ಸಿಟ್ಟ ಬಂದ ಕೆಟ್ಟ ಸ್ರಾಪಕೊಟ್ಟ ಆಕಿ ದೇಹ ಮುಂದ ಕೆಟ್ಟಿತು ॥೩॥
ಚಾಲ ॥ ಕಿಂಪಾ ರಕ್ತ ಹಸಿರೋತಿ ಬಸಿಯುತಿತ್ತ ಎಲ್ಲಮ್ಮನ ಮೈ ಮ್ಯಾಲಾ।
ನೋಡಿದವರ ಅಂಜಿ ದೂರ ಹೋದಾರೊ ಯಾರೂ ಸನಿಯಕಾ ಬರಲಿಲ್ಲಾ।
ವಾಸ ಬಡದ ಹಕ್ಕಿ ಪಕ್ಕಿ ಮೃಗಾ ಜಾತಿ ಓಡಿ ಹ್ವಾದಾವ ದಿಕ್ಕಾ ಪಾಲಾ।
ಸುತ್ತ ಸುಳವ ಇಲ್ಲ ಯಾರ್ಯಾರಾ। ಮನ ಮಂಜಣ ಇತ್ತ ಅನಿವ್ಯಾರಾ।

ವಬ್ಬಕ್ಕಿ ನಿಂತಾಳ ನಿರಾಧಾರಾ। ದೇವಿವಾರ ಇತ್ತ ಮಂಗಳವಾರಾ।
ಎಣ್ಣಿ ಇಲ್ಲದ ಯರಕೊಂಡಾಳ ಯಣಿ ಗುಂಡ ತೀರತ ನೀರಾ ॥೧॥
ಎಲ್ಲಮ್ಮನ ಗುರು ತಾಯಿ ಬಾಲದುರ್ಗಿ ಬಂದ ಹೇಳ್ಯಾಳ ಕನಸಿನಾಗ ಖುಲ್ಲಾ।
ಜೋಗಳ ಬಾಂವಿ ಸ್ನಾನ ಮಾಡಿ ಅರಿಷಿಣ ಅರದ
ಭಂಡಾರ ಹಚ್ಚಿ ಹಣಿ ಮ್ಯಾಲಾ।
ಮೈಯ್ಯ ಮೊದಲಿನಂತೆ ಕಲಂಕ ರಹಿತವಾಗಿ
ಸುವರ್ಣ ಆಗುದು ಮೈದೊಗಲಾ।
ಬಾಲದುರ್ಗಿ ಹೇಳಿದ ಪ್ರಕಾರಾ।
ಎರಕೊಂಡಳ ಜೋಗಳ ಬಾಂವಿ ನೀರಾ।
ಹಣಿಗಿ ಹಚ್ಚ್ಯಾಳ ಅರದ ಭಂಡಾರ।
ದೇವಿ ಸಜ್ಜ ಆಗ್ಯಾಳ ಶ್ರೀಂಗಾರಾ।
ಬಂಡಾರ ಬೇವಿನ ದಂಡಿ ಅಂದಿಗಿ ಹುಟ್ಟೈತಿ
ಉಧೋ ಅಂಬು ಶಬ್ದ ಜಯಂಕಾರಾ ॥ ೨॥
ಎಲ್ಲಾ ಶರಣರ ಕೂಡಿ ಅಮ್ಮಾ ಹೌದ ಎಲ್ಲಮ್ಮ
ಅಂತ ಹೆಸರ ಇಟ್ಟ ಹೋತ ನಾಡಮ್ಯಾಲಾ।
ಹೊಸದಾಳ ಗ್ರಾಮದ ಜಹಗೀರದಾರ ಇದ್ರ
ಏಕನಾಥ ಜೋಗೇಶ್ಯಾ ಮೊದಲ।
ಸಂಸಾರದಲ್ಲಿ ವಿರಕ್ತಿ ಹೊಂದಿ ದೇವಿ ಸೇವಾ ಮಾಡೋರು ಅನಗಲಾ।
ಎಲ್ಲಮ್ಮನ ಪೂರ್ವಿ ಭಕ್ತರ।
ಅಕಲದೆ ಜೋಗಬಾ ಅನ್ನಪುರಾ। ದೈತರ ತಲಿಬುರುಡಿ
ಚೌಡಕಿ ಮಾಡಿ ಬಾರಸುವರಾ। ೩ ॥ ಕೂಡ ॥
ಅಂದಿನ ಹಿಡಿದ ಜೋಗಳ ಬಾಂವಿಗಿ ಹುಟ್ಟಿಗಿ ಉಡುವ
ಖೂನ ಉಳಿತ ಮರ್ತಿಕಾ। ಹುಟ್ಟ ಬತ್ತಲೆ ಹೋಗವ ಗುದ್ದಕಾ। ॥
ತಾಯಿ ಮಾಯಿ ॥ ೪ ॥ ಚೌಕ ॥

ಸಿರಸಿಂಗ ನೆಂಬರುಷಿ ವಾಸ ಮಾಡತಿದ್ದ ಯೋಳ ಕೊಳ್ಳದ
ಗುಡ್ಡದಾಗಾ । ಏರಿ ಹ್ವಾದ್ರ ರಾಕ್ಷಸರ ಅವನ ಮ್ಯಾಗಾ।
ಕಾಳಿಕಾ ದೇವಿ ರಾಕ್ಷಸರನ ಹೊಡೆದ ಕಾರಣಾ
ಸಿರಸಂಗಿ ಅಂದಾರೋ ಆವಾಗಾ ॥ ೧॥
ಕಲ್ಲ ಕೊಡಾ ವಡದ ಎಲ್ಲಮ್ಮನ ಲೀಲೆಯಿಂದ
ಲಿಂಗ ರೂಪವಾಯ್ತೊ ಕೊಳ್ಳದಾಗಾ।
ನಿತ್ಯ ಪೂಜೆ ಮಾಡೋರೊ ಹರಿಯಾಗಾ ।
ಕೋಲ ಕುಮೇಶ್ವರ ಅಂತ ಲಿಂಗದ ಹೆಸರ
ಇಟ್ಟ ಸಾಕಾರ ಯೇಳು ಕೊಳ್ಳದಾಗ ॥ ೨॥
ಮಲ್ಹಾರಿ ಅಂಬು ದಾಸಿ ನೀರ ತುಂಬತೀಳ ಮಲಪ್ರಭಾ
ನದಿಯಾಗಾ ಮುಣಗಿ ಪ್ರಾಣಕೊಟ್ಟಾಳೋ ಹೊಳಿಯಾಗಾ ।
ಮಲಪ್ರಭಾ ನದೀ ಅಂತ ಹೆಸರ
ಉಳಿದಿತೋ ಇದೇ ಕಲಿಯುಗದಾಗಾ ॥ ೩ । ಚಾಲ ॥
ರಾಮಸಿಂಗ ಪರ್ವತ ಅಂತ ಮೊದಲ ಹೆಸರ
ಇತ್ತ ಹಿಂದ ರಾಮವತಾರಕಾ ।
ಅದೇ ಪರ್ವತ ಹಿರಿಗುಡ್ಡ ಅಂತಾರೋ ಎಲ್ಲಮ್ಮ ಹುಟ್ಟಿದ
ಬಳಕಾ ಕಾಡಿದ ಭಕ್ತರಿಗಿ ಬೇಡಿದ ಭಾಗ್ಯ ಕೊಟ್ಟಾಳೋ
ಕರಿಸಿ ಯೇಳಕೊಳ್ಳಕಾ । ಯಲ್ಲಮ್ಮ ತನ್ನ ಭಕ್ತಿರಿಗೆ ।
ಬಂಡಾರ ಚೌಡಿಕಿ ದಂಡಿಗಿ । ಕೊಟ್ಟಾಳ ಭಕ್ತ ಮಂಡಳಿಗಿ।
ದೇವಿ ಕೀರ್ತಿ ನಿಜವಾಗಿ ತೆಳಗಿಂದ
ಮ್ಯಾಲೇರಿ ಸ್ವರ್ಗಕ ಹೋದಾಳೋ ಸಾಗಿ ॥ ೩ ॥
ನಾಲ್ಕು ದಿಕ್ಕ ನಾಡೆಲ್ಲಾ ದೇವಿ ಕೀರ್ತಿ
ಬಿರದ ಸಾರುದು ದೂರ ತನಕಾ ।
ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಉದಿ ಆದಾಳೊ ಕೊಂಕಣಕಾ।

ಭಾರತ ಭೂಮಿ ಕರ್ನಾಟಕ ಕನ್ನಡದೇಶಿ ಬಂದಾಳೊ ಕೊಕಟನೂರ ಸ್ಥಳಕ।
ವರು ಕೊಟ್ಟಕರದ ಭಕ್ತರಿಗಿ। ಗುಡಿ ಕಟ್ಟಶ್ಯಾಳ ಮುಂದ ಊರೂರಿಗಿ ।
ಶ್ಯಾರ ಅಥಣಿ ತಾಲೂಕ ಶರಣರಿಗಿ। ಸ್ವಪ್ನದಾಗ ಬಂದ ಹೇಳ್ಯಾಳ ತಿರಗಿ ।
ತಾಯಿ ಲಕ್ಷ್ಮೀ ಬಾಯಿ ಭಕ್ತಿಗಿ ಮೆಚ್ಚಿ ದೇವಿ ಬಂದಾಳ ಅಥಣಿ ಊರಿಗಿ ॥ ೨ ॥
ಪವಿತ್ರ ಜಾಗ ಅಥಣಿ ಭೂಮ್ಯಾಗ ನೆನೆದಾಳ ಬಂದ ಕೆಸರಳ್ಳಕಾ।
ಮುನಿಕನ್ಯೆ ಲಕ್ಷ್ಮೀಬಾಯಿ ಹನ್ನೇರಡ ವರ್ಷ
(ವರ್ಸ) ತಪಾ ಮಾಡ್ಯಾಳ ಹಿಂದಕಾ। ಇದ್ದ ಮನಿ
ಶಿವದಾನ ಕೊಟ್ಟ ದೇಹಾ ಸುಟ್ಟ ಬಂದಾಳ ಎಲ್ಲಮ್ಮನ ಗಿರಿಗಿ।
ಬಲಗೊಂಡ ಬಂದ್ರ ಬಾಳಿಗೇರಿ ಸಾವಕಾರ ಬಸಲಿಂಗಪ್ಪನ ಮನಿಗಿ ।
ಸತಿಪತಿ ಭಕ್ತಿ ಮಾಡಿ ಮುಕ್ತಿ ಕಂಡ ಅನ್ನದಾನ ಇಟ್ಟ ವರ್ಷ ಜಾತ್ರಿಗಿ ॥ ೩ ॥
ಕೂಡು । ಕನ್ನಡ ನಾಡ ಕರ್ನಾಟಕ ಬಾಳಿಗೇರ್ಯಾಗ
ಅಪ್ಪಣ್ಣನ ಕವಿಯ ನಾಜೂಕಾ । ಹೋಗಿ ಎರಗಿ ಗುರು ಚರಣಕಾ ॥ ॥
ತಾಯಿ ಮಾಯಿ ॥ ೬ ಚೌಕ ॥

★ ★ ★

ಅನುಬಂಧ -೭

ವಸಂತ ಹೊಸಮನಿ ರಚಿಸಿದ ಗುರುಪಾದ ಶೆಟ್ಟರ ಕುರಿತ ಲಾವಣಿ

"ಕ್ರಿಯಾಶೀಲರಾಗಿ ಕೀರ್ತಿ ಪಡೆದವರು ಕಿತ್ತೊಗೆದು ಭವಬಾದಿ
ಅಥಣಿ ತಾಲೂಕದಾಗ ಅತಿ-ಪವಾಡಮಾಡಿ ಕಂಡಾರ ಮುಕ್ತಿ ಹಾದಿ ॥ ಪ ॥
ಬೇವನೂರ ಗ್ರಾಮದಲ್ಲಿ ಬೆಳೆಯುತ ನಡದಾರ ಚಂದ್ರ ಆದಂತೆ ಉದಿ
ತಾಯಿ ಈರಮ್ಮ ತಂದೆ ಸಿದ್ರಾಮ ಇದ್ದರು ಭಕ್ತಿಯ ನಿಧಿ ॥೧॥
ಶ್ರೇಷ್ಠ ಮೆನತನದಲ್ಲಿ ಶ್ರೇಷ್ಠತೆ ಪಡೆದಾರ । ಸೃಷ್ಠಿ ತುಂಬೆಲ್ಲ ಹರಡಿತ ಸುದ್ದಿ ।
ಪ್ಲೇಗ ರೋಗದಿಂದ ಊರೆಲ್ಲ ಒಡೆದು ಹಿಡಿದಿದ್ದರು ಅಡವಿ ಹಾದಿ ।
ಗುರುಪಾದ ಅಜ್ಜನವರು ಗುಳಿ ಮುತ್ಯಾನ ಕರೆದು ಹೇಳ್ಯಾರ ಅವರ ತಿದ್ದಿ ।
ಊರ ಒಡೆಯುವ ಕಾರಣೆಲ್ಲ। ಯಾರಿಗೇನ ಆಗೂದಿಲ್ಲ
ಜನಕ ಇಲ್ಲ ಬುದ್ದಿ " ಹೊತ್ತ ಮುಳುಗುದರೊಳಗೆ ಊರ
ಬಂದ ಸೇರಿದರ ದೊರಕುವದು ಸಖ್ಯದ ಹಾದಿ ॥
ಅವರ ಹೇಳಿದ ಪ್ರಕಾರ ಗುಳಿ ಮುತ್ಯಾ ಕೂಗ್ಯಾರು
ಜನರಿಗೆ ಆದಿತ್ತು ಸುದ್ದಿ " ಊರ ಸೇರಿದ ಮ್ಯಾಲ
ದೀಪ ಹಚ್ಚಿದಾರ ಸರ್ವ ಎಲ್ಲ ಮಂದಿ । ಯಾರಿಗೇನ ಆಗಲಿಲ್ಲ
ಗುರುಪಾದ ಮುತ್ಯಾಗ ಹೇಳಿದರಲ್ಲ ನೀನೇ ನಮ್ಮ ತಂದಿ ॥
ಇಂಥ ಮಹಾತ್ಮರಿಗಿ ಮಹತ್ವ ಕೊಟ್ಟಾರ ಆ ಕಾಲದ ಮಂದಿ॥
ಅನೇಕ ಪವಾಡಗಳ ಅನುದಿನ ಮಾಡುವರು
ಎಥದ್ದು ಅವರ ಬುದ್ದಿ। ಬೇವನೂರ ಗ್ರಾಮದಾಗ
ವಾಸ ಮಾಡಿದಾರ ವಾಸನಾ ಎಲ್ಲ ತಿದ್ದಿ ॥
ದೃಢವಿಟ್ಟ ದುಡಿದವರಿಗಿ ಮೃಡಹರ ಕೊಡತಾನ ಮಹಾತ್ಮರಿಗಿ
ಮರ್ಯಾದಿ ವಾಸುದೇವ ಹಿಂಗ ಪದಮಾಡಿ ಹೇಳ್ಯಾರ
ಸಂಕ್ಷಿಪ್ತದಲ್ಲಿ ಅದ್ದಿ । ಮಹಾತ್ಮರ ಮಹಾತ್ಮೆ ಮರೆಯದೆ

ಕೇಳಿದರ ದೊರೆಯುವುದು ಮುಕ್ತಿ ॥
ಎಲ್ಲಾ ಬಿಟ್ಟು ಬೆಲ್ಲದಂತೆ ಇರುತಾರ ಬಲ್ಲವರು
ಹೆಣ್ಣು ಹೊನ್ನು ಮಣ್ಣು ತೊರೆದ ಆಗ್ಯಾರ ನಿರ್ಧಾ ॥ ಪ ॥
ತನು, ಮನ, ಧನ ದಂಡಿಸಿ ಪಾರಾ ಆಗ್ಯಾರ ಕೆಸರ
ಬೇವನೂರ ಗ್ರಾದಮಲ್ಲಿ ಆಗ್ಯಾರ ದೇವರ ॥ ೧ ॥
೨) ಕಷ್ಟನಷ್ಟ ಕುಟ್ಟಿ ಖೇರಿ ಹಾರಿಸಿ ಬಿಟ್ಟವರ ॥ ಎಲ್ಲಾ ಬಿಟ್ಟು ಬೆಲ್ಲದಂತೆ ॥
ಆರು ಮೂರು ಮುರಿದು ಮುಲ್ಯಾಗ ಚೆಲ್ಲಿ ಬಿಟ್ಟಾರ
ಚಿರಂಜೀವಿ ಚಿರಕಾಲ ಕೀರ್ತಿ ಪಡೆದ ನಡೆದಾರ
ಚಿನ್ಮಯ ಚಿದಾನಂದನ ಚೆನ್ನಾಗಿ ತಿಳಿದವರ ॥ ಎಲ್ಲಾ ಬಿಟ್ಟ ಬೆಲ್ಲದಂತೆ ॥
ಗ್ರಾಮ ಪಟ್ಟಣ ಗ್ರಾಮದಿ ತಿರುಗಿ ವ್ಯಾಪಾರ ಮಾಡುವಿರಾ
ಸತ್ಯದಿಂದ ವ್ಯಾಪಾರ ಮಾಡಿ ಮನೆಗೆ ಮರಳುವರಾ
ಮುಂದಕ್ಕ ಸಾಗಿದರ ಉತ್ತರ ದಿಕ್ಕಿಗಿ ಉನ್ಮನಿ ತೋರಿದ
ಗುರುವಿನ ಇಟ್ಟಾರ ॥ ಎಲ್ಲ ಬಿಟ್ಟ ಬೆಲ್ಲದಂತೆ ॥
ಮಾಯಾ ತ್ಯಾಗಮಾಡಿ ಮಹಾತ್ಮಾರು ಮರುಳರಂಗ ತಿರುಗುವಿರಾ
ಎಂಟು ಏಳು ಮಂಟಪನೇರಿ ಆಗ್ಯಾರ ನಿರ್ಧಾರ । ತೊಂಟರ ಎಂಟು ಮಂದಿ
ಸೊಂಟದ ಮುರಿದು ಬಂಟರಾಗಿ ತಿರುಗ್ಯಾರಾ ॥ ಎಲ್ಲಾ ಬಿಟ್ಟು ಬೆಲ್ಲದಂತೆ॥
ವರಪುರ ಮರೆಯುವುದು ಬೇವನೂರ
ಊರ ಮುಂದ ನೆನದರು ಸತ್ಯ ದೇವರ
ಗಚ್ಚಿನ ಗುಡಿ ಕಟ್ಯಾರ ಕಳಸ ಬಂಗಾರ
ವಾಸುದೇವ ಪದಮಾಡಿ ಇಷ್ಟಕ್ಕ ಮುಗಿಸ್ಯಾರ ॥ ಎಲ್ಲಾ ಬಿಟ್ಟು ಬೆಲ್ಲದಂತೆ ॥
ಸಂಸಾರ ಮಾಡಿ ಸಾಧುನಾಗಿ ಸತ್ಯ ಸಾಧಿಸುತ್ತ
ಮನವ ಕುದುರೆ ಮಾಡಿ ಮಾಯಾ ದೂರ ಮಾಡಿ
ಗುರುಪಾದ ಅಜ್ಜ ಕುತ್ತಾ ॥ ಪ॥
ಹಮ್ಮನಳಿದು ಹರಿಬ್ರಹ್ಮನ ಸ್ಮರಣೆ ನಿತ್ಯ ಮಾಡುತ್ತ
ಆರು ಅಳಿದು, ಮುರು ತಿಳಿದು ಮೂಲ ಮಾರ್ಗವ
ಅರಿತ. ಸತ್ಯ ಪತಾಕಿ ಹಿಡಿದು ಸಾರುತ್ತ ನಡೆದಾರ
ವೀರ ಶೈವರಲ್ಲಿ ಸ್ವಂತಾ ॥ ಸಾಲ ದ್ವಾರಗಳ ಸಾಕೆಂದು

ಬಿಟ್ಟು ಮೌನದೊಳು ಕುಂತಾ ।
ಹತ್ತು ವತ್ತಿ ಇಟ್ಟ ಹದಿನೆಂಟ ಕಳೆದಾರ ಗುಪ್ತ ಇದ್ದರು ಶಿಸ್ತ
ಗುಪ್ತ ಗುರುಪಾದ ಮುತ್ಯಾ
ಅಷ್ಟ ಸಿದ್ದಿ ವಶಮಾಡಿದರ ಎಲ್ಲ ಆಗತ್ತಿತ್ತ ಗುರ್ತಾ ।
ದೂರ ಯೋರಿನ ಸುದ್ದಿ ಧೈರ್ಯದಿ ಹೇಳತ್ತಿದ್ದರು
ಹೋಗಿ ನೋಡಿದಂತೆ ಸ್ವಂತಾ । ದಿಲ್ಲಿಯ ಸುದ್ದಿ
ಇಲ್ಲೆ ಹೇಳತ್ತಿದ್ದರು ತಾವು ಕುಂತಲ್ಲೆ ಕುಂತ ॥
ಹತ್ತು ಗೊತ್ತುಮಾಡಿ ಮುತ್ತಿನ ಮಂಟಪ ಮೇಲೇರುತ ಮತ್ತ
ಹರಿವ ನದಿಯ ಮೂರರೊಳಗಿಂದ ದಾಟಿ ಹೋಗಿದಾರ ಗುಪ್ತ
ಸಾವಿರ ಆನೆಯ ಸ್ವಾರದ ನೋಡುತ ಸ್ವಾರಸ್ಯ ಸ್ವಂತ ಅಂತಾ ।
ಮೂವತ್ತೇರಡು ಜಡ್ಡಿ ಬಾಗಿಲುಗಳ ನಡೆದಾರ ದಾಡುತ್ತಾ
ಜಗಜಗಿಸುವ ಗಗನ ಮಂದಿರದಲ್ಲಿ ತಾನೊಬ್ಬನೆ ಕುಂತಾ ॥
ಸುತ್ತ ಮುತ್ತ ಹೊರಳಿ ನೋಡಿದರ ಯಾರದಿಲ್ಲ ಗುರ್ತಾ।
ತಾನೆ ತನ್ನಷ್ಟಕ ತಾನೇ ತಾನಾಗಿ ತನ್ನೋಳು ತಾ ಬೆರೆತಾ
ಕಾವ್ಯ ರಚನಾ ಮಾಡಿ ವಾಸುದೇವಾ ನಿಶ್ಚಿಂತನಾಗಿ
ಆದಾನ ಏಕಾಂತಾ ॥

★ ★ ★